ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 51 | ಡಿಸೆಂಬರ್ 17-23, 2018 | ಪುಟ 16 | ರೂ. 10/-

web: ww… eekly@yahoo.com

ಮಂಗಳೂರಿನ ಹಿರಿಯ ಸಂಗಾತಿ

ಚಂದ್ರಹಾಸ್ ಟೈಲರ್

ಲಾಲ್ ಸಲಾಂ!!







ಮೋದಿ-ಶಾ ಅಜೇಯರಲ್ಲ



ಜನತೆಯ ಮನ್ ಕೀ ಬಾತ್



ರಾಜಸ್ಥಾನದ ವಿಧಾನಸಭೆಯಲ್ಲಿ ರೈತರ ದನಿ

RBI ಗವರ್ನರ್ ರಾಜಿನಾಮೆ ಏಕೆ?



ಕಲಬುರಗಿ ವಿಭಾಗ ರೈತರ ಸಮಾವೇಶ



ಅನ್ನ ಭಾಗ್ಯ ನರೇಗಾ ಅವ್ಯವಸ್ಥೆ ನಿವಾರಿಸಿ



ಪೌರ ಕಾರ್ಮಿಕರ ಬೆಳಗಾವಿ ಚಲೋ



ಮೂರು ರಾಜ್ಯಗಳಲ್ಲಿ ಬಿಜೆಪಿ ಸೋಲು–ಅಜೇಯತೆಯ ಮಿಥ್ಯೆಯನ್ನು ಪುಡಿಗುಟ್ಟಿದೆ

ಹೊಸ ಸರಕಾರಗಳು ಜನಗಳ ತೀರ್ಪನ್ನು ಗೌರವಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಡ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಸೋಲು ಮೋದಿ ಸರಕಾರ ಮತ್ತು ಬಿಜೆಪಿಯ ರಾಜ್ಯಸರಕಾರಗಳು ಅನುಸರಿಸುತ್ತಿರುವ ಧೋರಣೆಗಳ ಬಗ್ಗೆ ಜನಗಳ ಅಸಂತೃಪ್ತಿ ಮತ್ತು ಸಿಟ್ಟಿನ ಒಂದು ಸ್ಪಷ್ಟ ಸಂಕೇತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಧೋರಣೆಗಳು ಜನಸಾಮಾನ್ಯರ ಮೇಲೆ ಅಸಹನೀಯ ಹೊರೆಗಳನ್ನು ಹೇರಿವೆ. ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಮಿಥ್ಯೆಯನ್ನು ಈ ಫಲಿತಾಂಶಗಳು ಪುಡಿಗುಟ್ಟಿವೆ ಎಂದು ಸಿಪಿಐ(ಎಂ) ಹೇಳಿದೆ.

ಜನಗಳ ಸಮಸ್ಯೆಗಳನ್ನು ಪರಿಹರಿಸುವ ಬದಲು ಬಿಜೆಪಿ ಸರಕಾರಗಳ ಧೋರಣೆಗಳು ಜನಗಳ ಸಂಕಟಗಳನ್ನು ಮತ್ತಷ್ಟು ಉಲ್ಬಣಗೊಳಿಸಿವೆ, ಮತ್ತು ಇವುಗಳಿಂದ ಜನಗಳ ಗಮನವನ್ನು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಶ್ನೆಗಳತ್ತ ತಿರುಗಿಸಲು ಪ್ರಯತ್ನಿಸುತ್ತಿವೆ. ಆದರೆ ಮುಸ್ಲಿಮರು ಮತ್ತು ದಲಿತರ ಮೇಲೆ ಹಲ್ಲೆಗಳು ಮತ್ತು ಜನಗಳನ್ನು ವಿಭಜಿಸಲಿಕ್ಕಾಗಿ ಪೋಷಿಸಿರುವ ದ್ವೇಷ ಮತ್ತು ಹಿಂಸಾಚಾರದ ವಾತಾವರಣ ಕೂಡ ಯಶಸ್ವಿಯಾಗಿಲ್ಲ

ತೆಲಂಗಾಣದಲ್ಲಿ, ಟಿಆರ್‌ಎಸ್ ಭಾರೀ ಜಯ ಗಳಿಸಿದೆ. ಬಿಜೆಪಿಯ ಸ್ಥಾನಗಳ ಸಂಖ್ಯೆ ಇಳಿದಿದೆ. ಮಿಝೋರಾಂನಲ್ಲಿ ಎಂಎನ್‌ಎಫ್ ಕಾಂಗ್ರೆಸ್ ಸರಕಾರವನ್ನು ಪದಚ್ಯುತಗೊಳಿಸಿ ಒಂದು ನಿರ್ಣಾಯಕ ವಿಜಯ ಗಳಿಸಿದೆ.

ಹಿಂದಿನ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ರಚನೆಯಾಗಲಿರುವ ಸರಕಾರಗಳು ಜನಗಳ ತೀರ್ಪನ್ನು ಗೌರವಿಸಬೇಕು, ಮತ್ತು ಜನಗಳ ಜೀವನಾಧಾರಗಳನ್ನು ಉತ್ತಮಪಡಿಸುವ ಮತ್ತು ಅವರ ಸಂಕಟಗಳನ್ನು ಕಡಿಮೆ ಮಾಡುವ ಧೋರಣೆಗಳನ್ನು ಅಂಗೀಕರಿಸಬೇಕು., ಈ ಸರಕಾರಗಳು ಬಿಜೆಪಿಯ ಕೋಮುವಾದಿ ಧ್ರುವೀಕರಣದ ರಾಜಕೀಯದಿಂದಾಗಿ



ಜನಗಳ ಐಕ್ಯತೆ ಮತ್ತು ದೇಶದ ಸಮಗ್ರತೆಗೆ ಮತ್ತಷ್ಟು ಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಚುನಾವಣೆಗಳಲ್ಲಿ ಸಿಪಿಐ(ಎಂ) ಗೆ ಮತ ನೀಡಿರುವವರಿಗೆ ಕೃತಜ್ಞತೆ ಸಲ್ಲಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ರಾಜಸ್ಥಾನದ ಶ್ರೀದುಂಗರ್‌ಗಡ್ ಮತ್ತು ಭದ್ರಾದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಗೆದ್ದಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದೆ.

ಜನವರಿ 1, 2019– ಕಾಸರಗೋಡಿನಿಂದ ತಿರುವನಂತಪುರದ ವರೆಗೆ ಮಹಿಳಾ ಗೋಡೆ

ಆರೆಸ್ಸೆಸ್ ನೇತೃತ್ವದ ಕತ್ತಲ ಶಕ್ತಿಗಳನ್ನು ತಡೆದು ನಿಲ್ಲಿಸಿ ಸಾಮಾಜಿಕ ಸುಧಾರಣೆಯ ಮೌಲ್ಯಗಳನ್ನು ಮುಂದೊಯ್ಯಲಿಕ್ಕಾಗಿ–ಬೃಂದಾ ಕಾರಟ್

ಜನವರಿ 1 ರಂದು ಕೇರಳದ ಉತ್ತರ ತುದಿಯಲ್ಲಿರುವ ಕಾಸರಗೋಡಿನಿಂದ ದಕ್ಷಿಣ ತುದಿಯಲ್ಲಿರುವ ತಿರುವನಂತಪುರದ ವರೆಗೆ 10 ಲಕ್ಷ ಮಹಿಳೆಯರು ಮಹಿಳಾ ಸಮಾನತೆಯನ್ನು ವಿರೋಧಿಸುವವರ ವಿರುದ್ಧ ಮಾನವ ಸರಪಳಿಯಲ್ಲಿ ಕೈಜೋಡಿಸಲಿದ್ದಾರೆ. ಇದೊಂದು ವಿಶಿಷ್ಟ ಮಹಿಳಾ ಗೋಡೆಯೇ ಆಗಲಿದೆ ಎಂದು ನಿರೀಕ್ಷಿಸಲಾಗಿದೆ. ರಾಜ್ಯ ಮುಖ್ಯಮಂತ್ರಿಗಳು ಕರೆದ ಒಂದು ಸಭೆಯಲ್ಲಿ 176 ಹಿಂದು ಸಂಘಟನೆಗಳು ಭಾಗವಹಿಸಿದ್ದು ವ್ಯಾಪಕ ಸಾಮಾಜಿಕ ಸುಧಾರಣೆಗಳನ್ನು ಕಂಡಿರುವ ಈ ರಾಜ್ಯ ಮತ್ತೆ ಮಧ್ಯಯುಗೀನ ಹುಚ್ಚಾಟಕ್ಕೆ ಸರಿಯದಂತೆ ತಡೆಯಲಿಕ್ಕಾಗಿ ಈ ವಿಶಿಷ್ಟ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿವೆ. ದೇಶದಲ್ಲೇ ಅತಿ ದೊಡ್ಡದಾದ ಈ ಜನತಾ ಮಧ್ಯಪ್ರವೇಶದಲ್ಲಿ ವಿವಿಧ ಸಮುದಾಯಗಳು ಭಾಗವಹಿಸಲಿವೆ.

ರಾಜ್ಯದಲ್ಲಿ ಈಗ ಆರೆಸ್ಸೆಸ್ ಕತ್ತಲಿನ ಶಕ್ತಿಗಳಿಗೆ ನೇತೃತ್ವ ನೀಡುತ್ತಿದೆ. ಆರೆಸ್ಸೆಸ್–ಬಿಜೆಪಿ ಶಬರಿಮಲೆ ವಿವಾದದ ಬೆನ್ನ ಮೇಲೇರಿ ಕೇರಳದಲ್ಲಿ ರಾಜಕೀಯ ಅಧಿಕಾರ ಕ್ಷೇತ್ರವನ್ನು ಪ್ರವೇಶಿಸಲು ಪ್ರಯತ್ನಿಸುತ್ತಿದೆ. ಇದನ್ನು ತಡೆಯುವುದು ಮತ್ತು ಸಾಮಾಜಿಕ ಸುಧಾರಣೆಗಳ ಮೌಲ್ಯಗಳನ್ನು ಮುಂದೊಯ್ಯುವುದು ಈ ಮಹಿಳಾ ಗೋಡೆಯ ಉದ್ದೇಶ ಎಂದು ಈ ಬಗ್ಗೆ ಪಿಟಿಐ ಸಂದರ್ಶನದಲ್ಲಿ ಮಾತಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

"ಕೇರಳದಲ್ಲಿ ಇದೀಗ ದೊಡ್ಡದೊಂದು ವಿಚಾರಗಳ ಸಮರ ನಡೆಯುತ್ತಿದೆ. ಶಬರಿಮಲೆ ಪ್ರಶ್ನೆಯ ಮೇಲಷ್ಟೇ ಅಲ್ಲ ಈ ಸಮರ" ಎಂದು ಅವರು ಹೇಳಿದ್ದಾರೆ. 19ನೇ ಮತ್ತು 20ನೇ ಶತಮಾನಗಳಲ್ಲಿ ಈ ಕೇರಳ ಸಾಮಾಜಿಕ ಸುಧಾರಣೆಗಳ ಒಂದು ಅಲೆಯನ್ನೇ ಕಂಡಿತು. ಆಗ ಸಮಾಜದ ಎಲ್ಲ ವಿಭಾಗಗಳು ಇದರಲ್ಲಿ ಒಳಗೊಂಡಿದ್ದವು. ಈ ಸುಧಾರಣೆಗಳ ಮತ್ತು ಜ್ಞಾನೋದಯ ಆಂದೋಲನದ ಮೌಲ್ಯಗಳನ್ನು ಮುಂದೊಯ್ಯಬೇಕೇ ಅಥವ ಆರೆಸ್ಸೆಸ್ ಕೇರಳ ಸಮಾಜವನ್ನು ಮತ್ತೆ ಹಿಂದಕ್ಕೆ ತಳ್ಳಲು ಬಿಡಬೇಕೇ ಎಂಬುದೀಗ ನಿಜವಾದ ಪ್ರಶ್ನೆ ಎಂದು ಬೃಂದಾ ಕಾರಟ್ ಈ ಸಂದರ್ಶನದಲ್ಲಿ ಹೇಳಿದ್ದಾರೆ.

ಮಹಿಳೆ ದೇವಸ್ಥಾನಕ್ಕೆ ಹೋಗಬೇಕೇ ಬೇಡವೇ ಎಂಬುದು ಆಕೆಯ ಆಯ್ಕೆ. ದೇವಸ್ಥಾನಕ್ಕೆ ಹೋಗಬೇಕು ಎಂದು ಬಯಸಿದರೆ ಅದನ್ನು ಯಾರೂ ನಿಷೇಧಿಸಲು ಸಾಧ್ಯವಿಲ್ಲ. ಫಲವಂತ ಮಹಿಳೆಯರನ್ನೇ ಮಾತ್ರವೇ ನಿಷೇಧಿಸಲಾಗಿದೆ. ಅಂದರೆ ಮುಟ್ಟಿನಲ್ಲಿರುವ ಮಹಿಳೆಯರು ಅಶುದ್ಧ ಎಂದು ಪರಿಗಣಿಸಲಾಗಿದೆ. ಇದು ಮನುಸ್ಮೃತಿಯ ವಿಚಾರ. ಆದ್ದರಿಂದ ಬಿಜೆಪಿ–ಆರೆಸ್ಸೆಸ್ ಆರಂಭಿಸಿರುವ ಸುಪ್ರಿಂ ಕೋರ್ಟಿನ ತೀರ್ಪಿನ ವಿರುದ್ಧದ ಈ ಚಳುವಳಿಯ ನಿಜಸ್ವರೂಪ ಏನು ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಧಾರ್ಮಿಕ ಭಾವನೆ ಎಂಬುದು ಏನೂ ಇಲ್ಲ, ಕೇರಳದಲ್ಲಿನ ಸರ್ಕಾರವನ್ನು ಅಸ್ಥಿರಗೊಳಿಸುವ, ಕೇರಳದ ಮೇಲೆ ಮನುವಾದವನ್ನು ಹೇರುವ ರಾಜಕೀಯ ಅಜೆಂಡಾ ಮಾತ್ರವೇ ಇರುವುದು ಎಂದಿರುವ ಬೃಂದಾ ಕಾರಟ್, ಕೇರಳದ ಮಹಿಳೆಯರು ಸಾಮಾಜಿಕ ಸುಧಾರಣೆಗಳ ಮೌಲ್ಯಗಳನ್ನು ಎತ್ತಿ ಹಿಡಿಯಲು ಕೈಜೋಡಿಸಿ ಭುಜಕ್ಕೆ ಭುಜಕೊಟ್ಟು ನಿಲ್ಲಲಿದ್ದಾರೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ಲಿಂಗ ಸಮಾನತೆ ಸಾಮಾಜಿಕ ಸುಧಾರಣಾ ಚಳುವಳಿಗಳ, ರಾಷ್ಟ್ರೀಯ ಆಂದೋಲನದ ಮತ್ತು ಮಹಿಳಾ ಹೋರಾಟಗಳ ಒಂದು ಪ್ರಮುಖ ಭಾಗವಾಗಿತ್ತು ಎಂದು ನೆನಪಿಸಿರುವ ಕೇರಳದ ಒಬ್ಬ ಪ್ರಮುಖ ವಿದ್ವಾಂಸರಾದ ಮೀರಾ ವೇಲಾಯುಧನ್, ಇಂದು ಈ ಮಹಿಳಾ ಗೋಡೆ ಮಹಿಳೆಯರ ಮೇಲಿನ ಹಿಂಸಾಚಾರಗಳ ವಿರುದ್ಧ ಒಂದು ಶಾಂತಿಯುತ ಪ್ರತಿಭಟನೆ ಎಂದಿದ್ದಾರೆ.

'ಕಾನ್ಸೆಂಟ್' ಎಂಬುದು ವಾಸ್ತವವಾಗಿ ಕಾರ್ಮಿಕ–ವಿರೋಧಿ 'ಮಹಾಒಕ್ಕೂಟ'

ದುಡಿಯುವ ಜನಗಳಲ್ಲಿ ಗೊಂದಲ ಸೃಷ್ಟಿಸುವ ಕುತಂತ್ರ– ಡಾ. ಹೇಮಲತಾ

ಇತ್ತೀಚೆಗೆ 'ಕಾನ್ಸೆಂಟ್' ಅಂದರೆ ಕಾನ್ಫೆಡರೇಶನ್ ಆಫ್ ಸೆಂಟ್ರಲ್ ಟ್ರೇಡ್ ಯೂನಿಯನ್ಸ್'(ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮಹಾಒಕ್ಕೂಟ) ಎಂಬೊಂದು ಸಂಘಟನೆ ರಚನೆಗೊಂಡಿದೆ. ಇದು ಸಂಘಪರಿವಾರಕ್ಕೆ ಸೇರಿರುವ ಮತ್ತು ಕೇಂದ್ರದಲ್ಲಿ ಮೋದಿ ಸರಕಾರ ಬಂದಂದಿನಿಂದ ಕಾರ್ಮಿಕರ ಐಕ್ಯ ಹೋರಾಟಗಳಿಗೆ ವಿಶ್ವಾಸಘಾತ ಮಾಡಿ ಏಕಾಂಗಿಯಾಗಿ ಬಿಟ್ಟಿರುವ ಬಿಎಂಎಸ್‌ನ ಕಚೇರಿಯಿಂದ ಕಾರ್ಯನಿರ್ವಹಿಸುತ್ತಿದೆ ಎಂಬುದೇ ಇದರ ನಿಜ ಸ್ವರೂಪವನ್ನು ತೋರಿಸುತ್ತದೆ. **ವಾಸ್ತವವಾಗಿ ಇದು ಕೇಂದ್ರದಲ್ಲಿನ ಬಿಜೆಪಿ ಸರಕಾರದ ಕಾರ್ಮಿಕ–ವಿರೋಧಿ ಧೋರಣೆಗಳಿಗೆ 'ಸಮ್ಮತಿ' ಉತ್ಪಾದಿಸುವ ಹತಾಶ ಪ್ರಯತ್ನವಾಗಿ ರೂಪು ತಳೆದಿರುವ ಒಂದು ರಾಜಕೀಯ ಉಪಕರಣ ಎಂದು ಸಿಐಟಿಯು ಅಧ್ಯಕ್ಷರಾಗಿರುವ ಡಾ.ಕೆ.ಹೇಮಲತಾ ಹೇಳಿದ್ದಾರೆ.**

ಮೋದಿ ಸರಕಾರ ಬಂದ ಮೇಲೆ ಮೇ 2015ರಲ್ಲಿ ನಡೆದ ಕಾರ್ಮಿಕ ಸಂಘಗಳ ಜಂಟಿ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದ ಬಿಎಂಎಸ್ ಆ ನಂತರ ಆ ಸಮಾವೇಶ ನಿರ್ಧರಿಸಿದ ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದ ಕೆಲವೇ ದಿನಗಳ ಮೊದಲು 'ಮಂತ್ರಿಗಳ ಗುಂಪು' ಜತೆ 'ಮಾತುಕತೆ' ನಡೆಸಿರುವುದಾಗಿಯೂ, ಅದು 'ಸಕಾರಾತ್ಮಕವಾಗಿ ಸ್ಪಂದಿಸಿದೆ' ಎಂದೂ ಹೇಳಿ ಕಾರ್ಮಿಕ ಬೆನ್ನಿಗೆ ಚೂರಿ ಹಾಕಿ ಮುಷ್ಕರವನ್ನು ವಿಫಲಗೊಳಿಸಲು ಪ್ರಯತ್ನಿಸಿತು. ಮರುವರ್ಷ ಸಪ್ಟಂಬರ್ 2 ರಂದು ಮತ್ತೊಂದು ಸಾರ್ವತ್ರಿಕ ಮುಷ್ಕರದ ಕರೆಯ ಸಂದರ್ಭದಲ್ಲೂ ಸರಕಾರದ 'ಮಂತ್ರಿಗಳ ಗುಂಪು' ಆ ಮುಷ್ಕರಕ್ಕೆ ಕರೆಯೇ ನೀಡದ ಬಿಎಂಎಸ್‌ನೊಂದಿಗೆ 'ಮಾತುಕತೆ' ನಡೆಸಿತು! ಆದರೆ ಕಾರ್ಮಿಕರ ಯಾವ ಬೇಡಿಕೆಯ ಬಗ್ಗೆಯೂ ಆಶ್ವಾಸನೆ ಕೊಡಲಿಲ್ಲ.

ಈ ಎರಡೂ ಸಂದರ್ಭಗಳಲ್ಲಿ ದೇಶದ ಕಾರ್ಮಿಕ ವರ್ಗ ಬಿಎಂಎಸ್‌ನ ಈ ವಿಶ್ವಾಸಘಾತಕ್ಕೆ ತಕ್ಕ ಉತ್ತರ ನೀಡಿದೆ. ಎರಡೂ ಮುಷ್ಕರಗಳ ಯಶಸ್ಸು ಅಭೂತಪೂರ್ವ ಮಟ್ಟ ತಲುಪಿತು. ಹಲವೆಡೆಗಳಲ್ಲಿ ಬಿಎಂಎಸ್ ಸಂಘಗಳೂ ಭಾಗವಹಿಸಿದವು ಎಂಬುದನ್ನು ನೆನಪಿಸಿರುವ ಸಿಐಟಿಯು ಅಧ್ಯಕ್ಷರು, ಈಗ ಮತ್ತೆ ದೇಶದ ಕಾರ್ಮಿಕ ವರ್ಗ ಗಂಭೀರ ಮತ್ತು ತೀವ್ರ ಹೋರಾಟಗಳಿಗೆ ಇಳಿದಿರುವಾಗ ಸರಕಾರ ಮತ್ತು ಬಿಎಂಎಸ್ ಇದೇ ಕಪಟತನಕ್ಕೆ ಇಳಿದಿವೆ ಎಂದು ಟೀಕಿಸಿದ್ದಾರೆ.

ದೇಶಾದ್ಯಂತ ಕಾರ್ಮಿಕ ಆಂದೋಲನದ ವಿವಿಧ ವಿಭಾಗಗಳ ಹೋರಾಟಗಳಲ್ಲದೆ, ನವಂಬರ್ 2017ರ ಕಾರ್ಮಿಕರ ಮಹಾಧರಣಿ, ನಂತರ ಈ ವರ್ಷ 'ಮಜ್ದೂರ್ ಕಿಸಾನ್ ಸಂಘರ್ಷ ರ‍್ಯಾಲಿ', ಇತ್ತೀಚೆಗೆ ಇಡಿ ದೇಶದ ಗಮನ ಸೆಳೆದ ರೈತರ 'ಕಿಸಾನ್ ಮುಕ್ತಿ ಮಾರ್ಚ್; ಮತ್ತು ಈಗ ಜನವರಿ 8–9ರಂದು ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ನಡೆಯುತ್ತಿರುವ ತೀವ್ರ ಸಿದ್ಧತೆಯ ಹಿನ್ನೆಲೆಯಲ್ಲಿ ಆತಂಕಿತವಾಗಿರುವ ಸಂಘ ಪರಿವಾರದಿಂದ ಈ 'ಕಾನ್ಸೆಂಟ್' ರಚನೆಯಾಗಿದೆ. ಆದರೆ ಈಗ ದೇಶದ ಜನತೆ ಬಿಜೆಪಿಯ ನವ–ಉದಾರವಾದಿ ಧೋರಣೆಗಳ ವಿರುದ್ಧ ಮಾತ್ರವಲ್ಲ, ಅದರ ಬಹಿರಂಗ ಕೋಮುವಾದಿ ಅಜೆಂಡಾದ ಬಗ್ಗೆ ಕೂಡ ಆಕ್ರೋಶಿತರಾಗಿದ್ದಾರೆ. "ಅಯೋಧ್ಯಾ ನಹೀ, ಕರ್ಜಾ ಮಾಫಿ ಚಾಹಿಯೆ"(ಅಯೋಧ್ಯೆಯಲ್ಲ, ಸಾಲಮನ್ನಾ ಬೇಕು) ಎಂಬ ಘೋಷಣೆ ಕಿಸಾನ್ ಮಾರ್ಚ್‌ನಲ್ಲಿ ಮೊಳಗಿದ್ದನ್ನು ಕಂಡಿರುವ ಆಳುವ ಮಂದಿ ತಮ್ಮ ವಿಭಜನಕಾರೀ ತಂತ್ರಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ದುಡಿಯುವ ಜನಗಳಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನವಾಗಿ ಈ "ಕಾನ್ಸೆಂಟ್"ನ್ನು ರೂಪಿಸಿದ್ದಾರೆ. ಆದರೆ ದೇಶದ ಕಾರ್ಮಿಕ ವರ್ಗ ಜನವರಿ 8–9ರ ಸಾರ್ವತ್ರಿಕ ಮುಷ್ಕರವನ್ನು ಮತ್ತೊಂದು ಅಭೂತಪೂರ್ವ ಕಾರ್ಯಾಚರಣೆಯಾಗಿ ಮಾಡಿ ಇವೆಲ್ಲ ಕುತಂತ್ರಗಳನ್ನು ಮತ್ತೊಮ್ಮೆ ವಿಫಲಗೊಳಿಸುತ್ತದೆ ಎಂದು ಹೇಮಲತಾ ಎಚ್ಚರಿಸಿದ್ದಾರೆ.

ನ್ಯಾಯ ಮೂರ್ತಿ ಸೇನ್ ಅವರನ್ನು ನ್ಯಾಯಾಂಗ ಕರ್ತವ್ಯಗಳಿಂದ ತೆಗೆಯಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಮೇಘಾಲಯ ಹೈಕೋರ್ಟಿನ ನ್ಯಾಯಮೂರ್ತಿ ಸುದೀಪ್ ರಂಜನ್ ಸೇನ್ ರವರು ಇತ್ತೀಚಿನ ಒಂದು ತೀರ್ಪಿನ ಸ್ವರೂಪದಲ್ಲಿ ಉಚ್ಚರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿಸ್ಸಂಗಿದ್ಧ ಪದಗಳಲ್ಲಿ ಖಂಡಿಸಿದೆ. ಇದು ನಮ್ಮ ಸಂವಿಧಾನದ ಮೂಲರಚನೆಗೆ ವಿರುದ್ಧವಾದದ್ದು ಎಂದು ಅದು ಹೇಳಿದೆ. ಜಾತ್ಯತೀತತೆ ನಮ್ಮ ಸಂವಿಧಾನದ ಮೂಲಭೂತ ಲಕ್ಷಣಗಳಲ್ಲಿ ಒಂದು ಎಂದು ಈ ಹಿಂದೆ ಸುಪ್ರಿಂ ಕೋರ್ಟ್ ಒಂದು ತೀರ್ಪು ನೀಡಿದೆ. ನ್ಯಾಯಮೂರ್ತಿ ಸೇನ್ ಆರೆಸ್ಸೆಸ್‌ನ ಹಿಂದೂರಾಷ್ಟ್ರ ಸಿದ್ಧಾಂತಕ್ಕೆ ಹೋಲುವ ತನ್ನ ರಾಜಕೀಯ ನಂಬಿಕೆಯನ್ನು ಬಿಂಬಿಸಿದ್ದಾರೆ. ದೇಶವಿಭಜನೆ ಕುರಿತಂತೆ ತನ್ನ ಭಂಡ ಕೋಮುವಾದಿ ಅಭಿಪ್ರಾಯವನ್ನು ತೂರಿಸಿ ಮತ್ತು ನಾಗರಿಕತ್ವ ಕಾಯ್ದೆಯ ಪ್ರಸ್ತಾವಿತ ತಿದ್ದುಪಡಿಯ ಮೇಲೆ ರಾಜಕೀಯ ಹೇಳಿಕೆಯನ್ನು ಕೊಟ್ಟು ಅವರು ಸಂಸತ್ತಿನ ಸರ್ವೋಚ್ಚ ಪಾತ್ರ ಮತ್ತು ನ್ಯಾಯಾಂಗದ ಸ್ವಾತಂತ್ರ್ಯ ಎರಡನ್ನೂ ಶಿಥಿಲಗೊಳಿಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇಂತಹ ಅಭಿಪ್ರಾಯಗಳು ಈಶಾನ್ಯ ಭಾಗದಲ್ಲಿ ಜನಗಳ ನಡುವೆ ವೈಷಮ್ಯವನ್ನು ಮತ್ತಷ್ಟು ಉದ್ರೇಕಿಸಲು ನೆರವಾಗುತ್ತವೆ ಎಂದು ಖೇದ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ಸೇನ್ ಒಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಯಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಕಳಕೊಂಡಿದ್ದಾರೆ ಎಂದು ಅಭಿಪ್ರಾಯ ಪಡುತ್ತ ಅದು ಅವರನ್ನು ಆ ಹುದ್ದೆಯಿಂದ ತೆಗೆಯಲು ಒಂದು ಮಹಾಭಿಯೋಗ ನಿಲುವಳಿಯನ್ನು ತರುವ ಬಗ್ಗೆ ಪರಿಶೀಲಿಸಲು ಇತರ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸುವುದಾಗಿ ಹೇಳಿದೆ. ಈ ನಡುವೆ, ನ್ಯಾಯಮೂರ್ತಿ ಸೇನ್ ಅವರನ್ನು ನ್ಯಾಯಾಂಗದ ನಿರ್ವಹಣೆಯಿಂದ ದೂರವಿಡಬೇಕು ಎಂದು ಭಾರತದ ಸರ್ವೋಚ್ಚ ನ್ಯಾಯಾಧೀಶರಿಗೆ ಸಿಪಿಐ(ಎಂ) ಮನವಿ ಮಾಡಿದೆ.

ಸಂಪಾದಕೀಯ

ಅನ್ನಭಾಗ್ಯ, ನರೇಗಾ ಗಳ ಸಮರ್ಪಕ ಜಾರಿಯಾಗಬೇಕು!

ಕಾಕತಾಳೀಯವೋ ಎಂಬಂತೆ ಮೂರು ವರದಿಗಳು ಒಂದೇ ದಿನ ಬಂದಿವೆ ಮತ್ತು ಅವಕ್ಕೆ ಒಂದಕ್ಕೊಂದು ಮೇಲುನೋಟಕ್ಕೆ ಸಂಬಂಧವಿದ್ದಂತೆ ಕಾಣುವುದಿಲ್ಲ. ಆದರೆ ಸಂಬಂಧವಿದೆ. ಪಡಿತರ ವ್ಯವಸ್ಥೆ ಮತ್ತು ಅನ್ನಭಾಗ್ಯ ಯೋಜನೆಯಲ್ಲಿ ತೀವ್ರ ಅವ್ಯವಸ್ಥೆ, ನಿರ್ಲಕ್ಷ ಮತ್ತು ಭ್ರಷ್ಟಾಚಾರಗಳ ಬಗ್ಗೆ ರಾಜ್ಯ ಆಹಾರ ಆಯೋಗದ ವರದಿ ಮೊದಲನೆಯದು. 2018–19 ಸಾಲಿನ ಅರ್ಧ ವರ್ಷದ ನರೇಗಾ ಯೋಜನೆ ಜಾರಿಯಲ್ಲಿ 410 ಕೋಟಿ ರೂ. ಅಕ್ರಮ ನಡೆದಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೀಲನೆ ನಿರ್ದೇಶನಾಲಯದ ಪರಿಶೀಲನೆಯಲ್ಲಿ ತಿಳಿದು ಬಂದಿದೆ ಎಂಬುದು ಎರಡನೇಯ ವರದಿ. ಪಂಚ ರಾಜ್ಯಗಳಲ್ಲಿ ಬಿಜೆಪಿಯ ಮುಖಭಂಗವಾಗುವ ಮಟ್ಟದ ಸೋಲಿನ ವಿಶ್ಲೇಷಣೆಗಳ ವರದಿಗಳು ಮೂರನೇಯದು.

ನ್ಯಾಯಬೆಲೆ ಅಂಗಡಿಗಳಲ್ಲಿ ವಿವಿಧ ಅವ್ಯವಹಾರಗಳು, ಆಹಾರ ಗೋದಾಮುಗಳ ಅಸಮರ್ಪಕ ಮತ್ತು ಕೆಟ್ಟ ನಿರ್ವಹಣೆಗಳ ಹಲವು ಗಂಭೀರ ಪ್ರಕರಣಗಳನ್ನು ರಾಜ್ಯ ಆಹಾರ ಆಯೋಗದ ವರದಿ ಉಲ್ಲೇಖಿಸಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಕಿಲೋದಲ್ಲಿ 100 ಗ್ರಾಂ ಕಡಿಮೆ ನೀಡಿ ತೂಕದಲ್ಲಿ ಮೋಸ, ಅಕ್ಕಿ 7 ಕಿಲೋ ಬದಲು 5 ಕಿಲೋ ನೀಡಿಕೆ, ಕಿಲೋಗೆ 38 ರೂ. ಬೆಲೆಯ ತೊಗರಿಬೇಳೆಗೆ 70 ರೂ. ವಸೂಲಿ – ನ್ಯಾಯಬೆಲೆ ಅಂಗಡಿಗಳಲ್ಲಿ ಈ ರೀತಿಯ ವಿವಿಧ ಅವ್ಯವಹಾರಗಳನ್ನು ಆಯೋಗ ವರದಿ ಮಾಡಿದೆ. ಮತ್ತೊಂದೆಡೆ, ಸಗಟು ಗೋದಾಮುಗಳಲ್ಲಿರುವ ಆಹಾರಧಾನ್ಯಗಳು ಇಲಿ, ಹೆಗ್ಗಣಗಳ ಪಾಲು. ಉಗ್ರಾಣದಲ್ಲಿ ನುಸಿಹುಳು, ಜೇಡರ ಬಲೆ. ಗೊಬ್ಬರದ ಜೊತೆಗೇ ಆಹಾರ ಪದಾರ್ಥಗಳ ಸಂಗ್ರಹ – ಮುಂತಾದ ಆಹಾರ ಗೋದಾಮುಗಳ ಅಸಮರ್ಪಕ ಮತ್ತು ಕೆಟ್ಟ ನಿರ್ವಹಣೆಗಳ ಹಲವು ಪ್ರಕರಣಗಳು ಆಯೋಗದ ತನಿಖೆಯಿಂದ ಬೆಳಕಿಗೆ ಬಂದಿದೆ.

ಆಹಾರ ಭದ್ರತಾ ಕಾಯ್ದೆಯ ಪ್ರಕಾರ ರಾಜ್ಯ ಸರ್ಕಾರಗಳು ಸ್ವತಂತ್ರ ರಾಜ್ಯ ಆಹಾರ ಆಯೋಗವನ್ನು ರಚಿಸಬೇಕು. ಕರ್ನಾಟಕದಲ್ಲಿ 2017ರ ಜುಲೈ 5ರಂದು ಡಾ. ಎನ್. ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ಐವರು ಸದಸ್ಯರನ್ನೊಳಗೊಂಡ ಆಯೋಗ ರಚನೆಯಾಗಿದೆ. ಪಡಿತರ ವ್ಯವಸ್ಥೆಯ ಮೇಲೆ ಕಣ್ಣಿಡುವ ಜೊತೆಗೆ ಕಾಯ್ದೆಯ ಸಮರ್ಪಕ ಅನುಷ್ಠಾನ ಆಯೋಗದ ಕೆಲಸ. ಅದರ ಪ್ರಕಾರ ಆಯೋಗದ ಸದಸ್ಯರು, 'ಅನ್ನ ಭಾಗ್ಯ' ಯೋಜನೆಯ ಅನುಷ್ಠಾನವನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ, ಲೋಪದೋಷಗಳನ್ನು ಪಟ್ಟಿ ಮಾಡಿದ್ದಾರೆ. ಅಲ್ಲದೆ, ಅವುಗಳ ನಿವಾರಣೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಬೆಂಗಳೂರು, ರಾಯಚೂರು, ವಿಜಯಪುರ, ಬೀದರ್, ಚಾಮರಾಜನಗರ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳ 102 ನ್ಯಾಯಬೆಲೆ ಅಂಗಡಿಗಳು ಮತ್ತು 12 ಗೋದಾಮುಗಳಿಗೆ ದಿಢೀರ್ ಭೇಟಿ ನೀಡಿ ಆಯೋಗ ಸಿದ್ಧಪಡಿಸಿರುವ ವರದಿ ದಿನಪತ್ರಿಕೆಯೊಂದಕ್ಕೆ ಲಭ್ಯವಾಗಿದ್ದು, ಅದು ಈ ಅಂಶಗಳನ್ನು ಪ್ರಕಟಿಸಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಪ್ರಕಾರ, ವಿಧಾನಮಂಡಲದಲ್ಲಿ ಈ ವರದಿಯನ್ನು ಮಂಡಿಸಬೇಕು.

ಅನ್ನಭಾಗ್ಯ ಯೋಜನೆಯ ಅಕ್ಕಿ, ತೊಗರಿಬೇಳೆಗೆ ಕನ್ನ ಹಾಕಿ ಲೂಟಿ ಹೊಡೆಯಲು ಬಳಸಲಾಗುತ್ತಿರುವ ನಾನಾ ವಿಧಾನಗಳು ಹಾಗೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಪಡಿತರ ವಸ್ತುಗಳು ಹಾಳಾಗಿ ಕೋಟ್ಯಂತರ ರೂಪಾಯಿ ನಷ್ಟವಾದ ಪ್ರಕರಣಗಳನ್ನು ಆಹಾರ ಆಯೋಗ ಪತ್ತೆ ಮಾಡಿದೆ.

ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳಿಗೆ ಉಚಿತವಾಗಿ 35 ಕಿಲೋ ಅಕ್ಕಿ ನೀಡಬೇಕು. ಆದರೆ, ಚಾಮರಾಜನಗರದ ನ್ಯಾಯಬೆಲೆ ಅಂಗಡಿಯೊಂದರಲ್ಲಿ 20 ಕೆ.ಜಿ. ಕೊಟ್ಟು – 50 ವಸೂಲಿ ಮಾಡುತ್ತಿದ್ದರು. ಅನ್ನಭಾಗ್ಯ ಯೋಜನೆಯ ಅಕ್ಕಿ, ತೊಗರಿಬೇಳೆಗೆ ಕನ್ನ ಹಾಕಿರುವ ನಾನಾ ವಿಧಾನಗಳನ್ನು ಆಯೋಗ ಪಟ್ಟಿ ಮಾಡಿದೆ.

ಬೀದರ್ ಗ್ರಾಮಾಂತರ ಗೋದಾಮಿನಲ್ಲಿ ಅಕ್ಕಿಯೂ ಸೇರಿದಂತೆ ಎಲ್ಲ ದಾಸ್ತಾನುಗಳಲ್ಲಿ ನುಸಿಹುಳು ತುಂಬಿಕೊಂಡಿತ್ತು. ಅಲ್ಲದೆ, ಇಲ್ಲಿ ಅವಧಿ ಮೀರಿದ 482 ಕ್ವಿಂಟಲ್ ತೊಗರಿಬೇಳೆ, ಕಾಳು ಒಡೆದು ಹಿಟ್ಟಾಗಿರುವ 719 ಕ್ವಿಂಟಲ್ ತೊಗರಿಬೇಳೆಯನ್ನು ಆಯೋಗ ಪತ್ತೆ ಮಾಡಿದೆ. ಉಡುಪಿ ಜಿಲ್ಲೆಯ ಗೋದಾಮಿನಲ್ಲಿ ಪೂರ್ಣ ಹಾಳಾದ ಸ್ಥಿತಿ 2 ಸಾವಿರ ಕ್ವಿಂಟಲ್ ಗೋಧಿ ಪತ್ತೆಯಾಗಿದೆ. ಚಾಮರಾಜನಗರ ಜಿಲ್ಲೆಯ ಸಗಟು ಕೇಂದ್ರದಲ್ಲಿ ಆಹಾರ ಪದಾರ್ಥಗಳ ಜೊತೆಗೇ ಗೊಬ್ಬರವನ್ನೂ ಸಂಗ್ರಹಿಸಿಡಲಾಗಿದೆ. ಇಂತಹ ಹಲವು ಪ್ರಕರಣಗಳನ್ನು ಆಯೋಗ ಪತ್ತೆ ಹಚ್ಚಿದೆ.

ಗೋದಾಮುಗಳಲ್ಲಿ ಹಾಳಾದ ಆಹಾರಧಾನ್ಯಗಳ ನಷ್ಟವನ್ನು ಅಧಿಕಾರಿಗಳಿಂದ ವಸೂಲು ಮಾಡಬೇಕು; 2017 ಜನವರಿಯಿಂದ 2018ರ ಜನವರಿವರೆಗಿನ ಆಹಾರಧಾನ್ಯಗಳ ಹಂಚಿಕೆಯನ್ನು ಮೂರನೇ ಸಂಸ್ಥೆಯಿಂದ ತನಿಖೆ ನಡೆಸಬೇಕು; 7 ಕೆ.ಜಿ. ಅಕ್ಕಿ ಬದಲು ಉತ್ತರ ಕರ್ನಾಟಕದಲ್ಲಿ 5 ಕೆ.ಜಿ. ಅಕ್ಕಿ ಮತ್ತು 2 ಕಿಲೋ ಗೋಧಿ ಅಥವಾ ಜೋಳ, ದಕ್ಷಿಣ ಕರ್ನಾಟಕದಲ್ಲಿ 5 ಕೆ.ಜಿ. ಅಕ್ಕಿ 2 ಕೆ.ಜಿ. ರಾಗಿ ನೀಡಬೇಕು. – ಎಂಬುದು ಆಯೋಗದ ಪ್ರಮುಖ ಶಿಫಾರಸುಗಳು. ಅನ್ನಭಾಗ್ಯ, ಅಂತ್ಯೋದಯ ಅನ್ನ ಯೋಜನೆಯ ಜಾರಿಯಲ್ಲಿ ತೀವ್ರ ಲೋಪಗಳು, ಅಸಮರ್ಪಕ ನಿರ್ವಹಣೆಯ ಹಲವು ವರದಿಗಳು ಹಿಂದೆನೂ ಬಂದಿವೆ. ಆದರೆ ಇದು ಅಧಿಕೃತ ಸಂಸ್ಥೆಯೊಂದರ ವರದಿ ಎಂಬುದನ್ನು ಗಮನಿಸಬೇಕು.

ರಾಜ್ಯದಲ್ಲಿ 2018–19 ಸಾಲಿನ ಸೆಪ್ಟೆಂಬರ್‌ವರೆಗೆ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಲ್ಲಿ – ಕಾಮಗಾರಿ ನಡೆಸದೆ ಹಣ ಬಿಡುಗಡೆ, ಹೆಚ್ಚು ಹಣ ಬಿಡುಗಡೆ, ನಕಲಿ ಉದ್ಯೋಗ ಕಾರ್ಡ್, ಬಿಲ್‌ಗಿಂತ ಹೆಚ್ಚು ಮೊತ್ತ ಪಾವತಿ, ಒಂದೇ ಕಾಮಗಾರಿಗೆ ಎರಡು ಬಾರಿ ಹಣ ಮಂಜೂರಾತಿ – ಮುಂತಾದ ಅವ್ಯವಹಾರಗಳು ನಡೆದಿವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಾಮಾಜಿಕ ಪರಿಶೀಲನೆ ನಿರ್ದೇಶನಾಲಯವು ರಾಜ್ಯದ 467 ಗ್ರಾಮ ಪಂಚಾಯಿತಿಗಳಲ್ಲಿ ಪರಿಶೋಧನೆ ನಡೆಸಿದ್ದು, 92 ಸಾವಿರ ಪ್ರಕರಣಗಳಲ್ಲಿ ಅಕ್ರಮ ನಡೆದಿರುವುದು ಗೊತ್ತಾಗಿದೆ. 37.68 ಕೋಟಿ ರೂ. ಸೋರಿಕೆ ಪತ್ತೆಯಾಗಿದೆ. 373 ಕೋಟಿ ರೂ. ಮೊತ್ತದ ಲೆಕ್ಕಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಬರಪೀಡಿತ ಚನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕುಗಳನ್ನು ಒಳಗೊಂಡ ರಾಮನಗರ ಜಿಲ್ಲೆಯಲ್ಲಿ ಅತೀ ಹೆಚ್ಚು ಅಕ್ರಮ ನಡೆದಿದೆ. ಸೋರಿಕೆಯಾಗಿರುವ ಮೊತ್ತವನ್ನು ಕಾಮಗಾರಿಗಳನ್ನು ದೃಢೀಕರಿಸಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಮತ್ತು ಕಿರಿಯ ಎಂಜಿನಿಯರ್‌ಗಳು ಮುಂತಾದ ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲು ಮಾಡಬೇಕು. ಎಂದೂ ವರದಿ ಶಿಫಾರಸು ಮಾಡಿದೆ.

ಇವೆರಡೂ ವರದಿಗಳನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯ ಸರಕಾರ ಅವು ಶಿಫಾರಸು ಮಾಡಿದ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು. ಆದರೆ ಇವೆರಡಕ್ಕೂ ಪಂಚ ರಾಜ್ಯಗಳಲ್ಲಿ ಬಿಜೆಪಿಯ ಸೋಲಿಗೂ ಏನು ಸಂಬಂಧ ?

ಪಂಚ ರಾಜ್ಯಗಳಲ್ಲಿ ಬಿಜೆಪಿ ಸೋಲಿನ ಬಗ್ಗೆ ಹಲವು ವಿಶ್ಲೇಷಣೆಗಳು ಬಂದಿವೆ. 15 ವರ್ಷಗಳ ಆಡಳಿತ–ವಿರೋಧ ಅಲೆ ಇತ್ಯಾದಿ ಸಬೂಬುಗಳನ್ನು ಬಿಜೆಪಿ ಮತ್ತು ಅದರ ಬಾಲಬಡುಕರು ಹೇಳುತ್ತಿದ್ದಾರೆ. ಅದರ ಉಗ್ರ ಹಿಂದುತ್ವ ಮೊದಲಿನಂತೆ ಕೆಲಸ ಮಾಡುತ್ತಿಲ್ಲ ಎಂದು ಕೆಲವರ ಅನಿಸಿಕೆ. ಆದರೆ, ಗ್ರಾಮೀಣ ಹಾಗೂ ಕೃಷಿ ಸಂಕಟ, ಗ್ರಾಮೀಣ ಮತ್ತು ನಗರಗಳ ನಿರುದ್ಯೋಗ – ಇವುಗಳ ನಿವಾರಣೆಗೆ ಬಿಜೆಪಿ ಕೊಟ್ಟ ತನ್ನ ಚುನಾವಣಾ ಆಶ್ವಾಸನೆಗಳನ್ನು ಈಡೇರಿಸಲು ವಿಫಲವಾದದ್ದು; ಬದಲಾಗಿ ನೋಟು ರದ್ದತಿ ಮತ್ತು ಜಿ.ಎಸ್.ಟಿ. ಕ್ರಮಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡವರ ಮಾತ್ರವಲ್ಲ, ಸಣ್ಣ ವ್ಯಾಪಾರಿಗಳು ಸೇರಿದಂತೆ ಮಧ್ಯಮ ವರ್ಗದವರ ಜೀವನೋಪಾಯದ ಮೇಲೆ ಕ್ರೂರ ದಾಳಿ ನಡೆಸಿದ್ದು – ಬಿಜೆಪಿಯ ಈ ಭಾರೀ ಸೋಲಿಗೆ ಪ್ರಮುಖ ಕಾರಣಗಳು ಎಂಬುದು ಬಹು ಸಂಖ್ಯಾತ ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಇದರಿಂದ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳೂ ಪಾಠ ಕಲಿಯಬೇಕಾಗಿದೆ.

ಬಿಜೆಪಿ–ವಿರೋಧಿ ಅಲೆಯಿದೆ. ಆದ್ದರಿಂದ ಬಿಜೆಪಿ–ವಿರೋಧಿ ಮತಗಳು ಒಡೆಯದಂತೆ ನೋಡಿಕೊಂಡರೆ ಮತ್ತು ಆಕರ್ಷಕ ಚುನಾವಣಾ ಘೋಷಣೆಗಳನ್ನು ಕೊಟ್ಟರೆ ಸಾಕು. 2019ರಲ್ಲಿ ಬಿಜೆಪಿಯನ್ನು ಸೋಲಿಸಿ ಅಧಿಕಾರ ಪಡೆಯಬಹುದು ಎಂದು ಪಂಚ ರಾಜ್ಯಗಳ ಚುನಾವಣೆ ಫಲಿತಾಂಶಗಳು ಹೇಳುತ್ತವೆ ಎಂದು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಬಗೆದಿದ್ದರೆ ಅದಕ್ಕಿಂತ ದೊಡ್ಡ ಪ್ರಮಾದ ಬೇರೆ ಯಾವುದೂ ಇರಲಿಕ್ಕಿಲ್ಲ. ಕರ್ನಾಟಕ ಮತ್ತು ಪಂಜಾಬ್ ಗಳಲ್ಲಿ ಕಾಂಗ್ರೆಸ್ ಗ್ರಾಮೀಣ ಹಾಗೂ ಕೃಷಿ ಸಂಕಟ, ಗ್ರಾಮೀಣ ಮತ್ತು ನಗರಗಳ ನಿರುದ್ಯೋಗ – ಇವುಗಳ ನಿವಾರಣೆಗೆ ನಿರ್ದಿಷ್ಟ ಚುನಾವಣಾ ಆಶ್ವಾಸನೆಗಳನ್ನು ಕೊಟ್ಟಿದೆ. 2019 ಚುನಾವಣೆ ಹೊತ್ತಿಗೆ ಒಂದು ವರ್ಷ ಪೂರೈಸಲಿರುವ ಈ ಸರಕಾರಗಳು ಎಷ್ಟರ ಮಟ್ಟಿಗೆ ತಮ್ಮ ಚುನಾವಣಾ ಆಶ್ವಾಸನೆಗಳನ್ನು ಈಡೇರಿಸಲಿವೆ ಎಂಬುದು ಜನತೆಯ ಆಯ್ಕೆಯ ಮೇಲೆ ಪ್ರಭಾವ ಬೀರಲಿವೆ ಎಂಬುದನ್ನು ಅವು ನೆನಪಿಟ್ಟುಕೊಳ್ಳಬೇಕು. ಅದರಲ್ಲೂ ಕರ್ನಾಟಕದಲ್ಲಿ ಕಾಂಗ್ರೆಸ್ ಹಿಂದಿನ ಅವಧಿಯಲ್ಲಿ ಸಹ ಅಧಿಕಾರದಲ್ಲಿದ್ದು, ಅದರ ಕೆಲಸವನ್ನು ಜನ ಹೆಚ್ಚು ಸೂಕ್ಷ್ಮವಾಗಿ ಗಮನಿಸಲಿದ್ದಾರೆ. ಆದ್ದರಿಂದ ಕೃಷಿ ಸಂಕಟ, ನಿರುದ್ಯೋಗಗಳ ನಿವಾರಣೆಯಲ್ಲಿ ಅನ್ನಭಾಗ್ಯ, ನರೇಗಾ ದಂತಹ ಪ್ರಮುಖ ಜನಪರ ಕಲ್ಯಾಣ ಕ್ರಮಗಳನ್ನು ಪ್ರಾಮಾಣಿಕವಾಗಿ ಮುತುವರ್ಜಿಯಿಂದ ಜಾರಿ ಮಾಡುವುದಲ್ಲದೆ, ರಾಜ್ಯ ಸರಕಾರದ ಮಿತಿಯೊಳಗೆ ಸಾಧ್ಯವಿರುವಷ್ಟು ಸಾಲ ಮನ್ನಾ, ಬೆಂಬಲ ಬೆಲೆಯಂತಹ ಕ್ರಮಗಳನ್ನು ಜಾರಿ ಮಾಡಬೇಕಾಗಿದೆ.

ಈ ವರೆಗೆ ಕಾಂಗ್ರೆಸ್–ಜೆಡಿ(ಎಸ್) ಸರಕಾರ ಈ ಬಗ್ಗೆ ಹೆಚ್ಚಿನ ಭರವಸೆ ಹುಟ್ಟಿಸಿಲ್ಲ. ಎರಡೂ ಪಕ್ಷಗಳ ಸಚಿವರು ಮತ್ತು ಶಾಸಕರನ್ನು ಸಂತೃಪ್ತಿ ಪಡಿಸಿ ಸರಕಾರ ಉಳಿಸಿಕೊಳ್ಳುವ ಕಸರತ್ತಿನಲ್ಲಿ ಮತ್ತು ಒಳಜಗಳಗಳಲ್ಲೇ ಮುಳುಗಿದೆ. ಬಿಜೆಪಿಯ 'ಆಪರೇಶನ್' ಗೆ 'ಪ್ರತಿ–ಆಪರೇಶನ್' ಮಾಡುವುದರಲ್ಲಿ ತೊಡಗಿವೆ. ಈ ಮೂರು ವರದಿಗಳು ಕಾಂಗ್ರೆಸ್–ಜೆಡಿ(ಎಸ್) ಸರಕಾರಕ್ಕೆ ಸಹ ಎಚ್ಚರಿಕೆಯ ಗಂಟೆ ಎಂದು ಅರ್ಥ ಮಾಡಿಕೊಳ್ಳಬೇಕು. ಈ ಅಧಿವೇಶನದಿಂದಲೇ ಸರಕಾರ ತನ್ನ ಕರ್ತವ್ಯಪಾಲನೆ ಬಗ್ಗೆ ಪ್ರಾಮಾಣಿಕತೆ ಮತ್ತು ಮುತುವರ್ಜಿ ಪ್ರದರ್ಶಿಸಬೇಕು. ●

ಸಂಸದರ ಬೇಜವಾಬ್ದಾರಿ ವಿರುದ್ಧ ಮಂಗಳೂರಿನಲ್ಲಿ ಧರಣಿ ಸತ್ಯಾಗ್ರಹ

ವಾಸುದೇವ ಉಚ್ಚಿಲ್

ಎರಡು ಅವಧಿಗಳಲ್ಲಿ ಮಂಗಳೂರಿನ ಸಂಸದರಾಗಿರುವ ನಳಿನ್ ಕುಮಾರ್ ಕಟೀಲ್‌ರವರು ತಮ್ಮ ಕ್ಷೇತ್ರ ದಕ್ಷಿಣ ಕನ್ನಡದ ಆದ್ಯತೆಯ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದು, ಹಿಂದೂ ಕೋಮುವಾದಿ ರಾಜಕಾರಣ ಮಾಡುವುದನ್ನು ಬಿಟ್ಟರೆ, ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ. ಅವರ ವೈಫಲ್ಯ ಹಾಗೂ ಬೇಜವಾಬ್ದಾರಿಯನ್ನು ಖಂಡಿಸಿ ಡಿಸೆಂಬರ್ 12 ರಂದು ಮಂಗಳೂರಿನಲ್ಲಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹವನ್ನು ಜನಾಗ್ರಹ ಚಳುವಳಿಯ ಭಾಗವಾಗಿ ನಡೆಸಲಾಯಿತು. ಅವರ ಬೇಜವಾಬ್ದಾರಿಯ 4 ಅಂಶಗಳ ಬಗ್ಗೆ ಪ್ರತಿಭಟನಾಕಾರರು ತೀವ್ರ ಆಕ್ರೋಶ ಹಾಗೂ ಟೀಕೆ ವ್ಯಕ್ತಪಡಿಸಿದರು.

ದ.ಕ.ಜಿಲ್ಲೆಯಲ್ಲಿ ಎರಡೂವರೆ ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ಅವರಿಗೆ ಸರಕಾರದ ಆದೇಶದ ಮೂಲಕ ಸಿಗಬೇಕಿದ್ದ 3 ವರ್ಷಗಳ ಹೆಚ್ಚುವರಿ ತುಟ್ಟಿಭತ್ತೆ, 2018 ಏಪ್ರಿಲ್‌ನಿಂದ ಏರಿಕೆಯಾದ ಕನಿಷ್ಟ ಕೂಲಿಯನ್ನು ಬೀಡಿ ಮಾಲಕರು ಕೊಡದೆ ಸತಾಯಿಸುತ್ತಿದ್ದಾರೆ. ಸಿಐಟಿಯು, ಎಐಟಿಯುಸಿ ಬೀಡಿ ಕಾರ್ಮಿಕ ಸಂಘಟನೆಗಳು ಈ ಬಗ್ಗೆ 4 ಹಂತಗಳಲ್ಲಿ ಪ್ರತಿಭಟನೆ ನಡೆಸಿದ್ದರೂ, ಸಂಸದ ಕಟೀಲ್ ಅವರು ಒಂದು ಬಾರಿಯೂ ಬೀಡಿ ಕಾರ್ಮಿಕರ ಸಂಕಷ್ಟಗಳ ಬಗ್ಗೆ ಮಾತೂ ಆಡಿಲ್ಲ, ಸಂಪರ್ಕಿಸಿಯೂ ಇಲ್ಲ.

ಕರಾವಳಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಪ್ರಕ್ರಿಯೆ ನಿಧಾನ ಗತಿಯಲ್ಲಿ 8 ವರ್ಷಗಳಿಂದ ಸಾಗುತ್ತಿದೆ. ಮೇಲುಸೇತುವೆಗಳು, ಸರ್ವಿಸ್ ರಸ್ತೆಗಳು ಪೂರ್ಣ ರಚನೆಯಾಗದೆ ಟ್ರಾಫಿಕ್ ಜಾಮ್, ವಾಹನಾಪಘಾತಗಳು ಸಂಭವಿಸುತ್ತಿವೆ. ಹಾಗಿದ್ದರೂ ಜಿಲ್ಲೆಯಲ್ಲಿ 40 ಕಿ.ಮೀ. ಒಳಗೇನೇ ಎರಡೆರಡು ಟೋಲ್‌ಗೇಟ್‌ಗಳನ್ನು ಗುತ್ತಿಗೆದಾರರು ನಿರ್ಮಿಸಿ ಅಕ್ರಮ ಟೋಲ್ ಸಂಗ್ರಹಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದಾರಿ ಮಾಡಿಕೊಟ್ಟಿದೆ. ಸುರತ್ಕಲ್ ಟೋಲ್‌ಗೇಟ್‌ನಲ್ಲಿ ದೀರ್ಘಕಾಲ ಪ್ರತಿಭಟನೆ ನಡೆದಿದ್ದರೂ, ಸಂಸದ ನಳಿನ್ ಕುಮಾರ್ ಕೇಂದ್ರ ಸರಕಾರ ವ್ಯಾಪ್ತಿಯ ಇಲಾಖೆಯಲ್ಲಿ ನಡೆಯುವ ಅಕ್ರಮವನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ, ಮಾತ್ರವಲ್ಲ ಹಾರಿಕೆಯ ಮಾತನಾಡುತ್ತಿದ್ದಾರೆ.

ಜಿಲ್ಲೆಯಲ್ಲಿ ರಿಯಲ್ ಎಸ್ಟೇಟ್ ಹಾಗೂ ಮರಳು ಮಾಫಿಯಾದ ಅಕ್ರಮಗಳಿಂದ ವ್ಯಾಪಕವಾಗಿ ಮರಳುಗಾರಿಕೆ ನಡೆದು ಮರಳು ಕಳ್ಳಸಾಗಾಣಿಕೆಯಾಗುತ್ತಿದೆ. ಸಾಮಾನ್ಯ ಜನರಿಗೆ ಮನೆ ನಿರ್ಮಿಸಲಿಕ್ಕೂ ಮರಳು ಸಿಗುತ್ತಿಲ್ಲ. ಕಟ್ಟಡ ನಿರ್ಮಾಣ ಕುಸಿತಗೊಂಡಿದ್ದು, ನಿರ್ಮಾಣ ಕಾರ್ಮಿಕರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಕಟ್ಟಡ ಕಾರ್ಮಿಕರು ಹಾಗೂ ಸಾಮಾನ್ಯ ಜನ ಪ್ರತಿಭಟಿಸುತ್ತಿದ್ದರೂ, 2 ಅವಧಿಯ ಸಂಸದರು ಮರಳು ಕ್ಷಾಮವನ್ನು ಪರಿಹರಿಸುವಲ್ಲಿ ವಿಫಲರಾಗಿದ್ದಾರೆ.



ಶಬರಿಮಲೆಗೆ ಎಲ್ಲಾ ಮಹಿಳೆಯರಿಗೂ ಅವಕಾಶ ನೀಡಿದ್ದು ಸುಪ್ರೀಂ ಕೋರ್ಟ್. ಅದನ್ನು ಜಾರಿಗೊಳಿಸುವ ಕೆಲಸವನ್ನಷ್ಟೇ ಕೇಂದ್ರ ಸರಕಾರ ಮಾಡುತ್ತಿದೆ. ಬಿಜೆಪಿ ಬೆಂಬಲಿಗರು ಕೇರಳದಲ್ಲಿ ಈ ಬಗ್ಗೆ ಗದ್ದಲವೆಬ್ಬಿಸುತ್ತಿದ್ದು, ಬೆಂಕಿಗೆ ಎಣ್ಣೆ ಸುರಿಸುವಂತೆ ಸಂಸದ ಕಟೀಲ್ ಮಾತನಾಡಿದ್ದಾರೆ. ಶಬರಿಮಲೆಯಲ್ಲಿ ತುರ್ತುಪರಿಸ್ಥಿತಿ ಹಾಗೂ ಜಲಿಯಾನ್‌ವಾಲಾಬಾಗ್ ರೀತಿಯ ಪರಿಸ್ಥಿತಿ ಇದೆ ಎಂದೇ ಕೋಮುವಾದಿ ಪ್ರಚೋದನೆ ನೀಡುವ ಮಾತುಗಳನ್ನು ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆಡಿದ್ದಾರೆ.

ಕೇರಳ ಸರಕಾರ ಸಂವಿಧಾನಬದ್ಧ ಕರ್ತವ್ಯ ಮಾಡುತ್ತಿದ್ದರೆ, ಅದರ ಬಗ್ಗೆ ಸಂಸದ ಕಟೀಲ್ ಬೆಂಕಿಯುಗುಳುವ ಮಾತುಗಳನ್ನಾಡುವುದಲ್ಲದೆ, ಜಿಲ್ಲೆಯ ಪ್ರಮುಖ ಅಭಿವೃದ್ಧಿ ಪ್ರಶ್ನೆಗಳ ವಿಷಯದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಮತ್ತು ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ. ಮಂಗಳೂರಿನಲ್ಲಿ ಇಡೀ ದಿನ ನಡೆದ ಧರಣಿಯಲ್ಲಿ ಭಾಗವಹಿಸಿದ ಸಿಪಿಐ(ಎಂ) ಮುಖಂಡರು ಸಂಸದ ನಳಿನ್ ಕುಮಾರ್ ಕಟೀಲ್ ಅವರ ದುರ್ವರ್ತನೆ ಹಾಗೂ ಬೇಜವಾಬ್ದಾರಿಯನ್ನು ಕಟುಟೀಕೆಗೆ ಗುರಿ ಮಾಡಿದರು. ಅವರನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸೋಲಿಸಬೇಕೆಂದೂ ಸಂಸದರಾಗಿ ಮರು ಆಯ್ಕೆ ಮಾಡಬಾರದೆಂದೂ ಆಗ್ರಹಿಸಿದರು.

ಜಿಲ್ಲೆಯ ಹಿರಿಯ ಕಮ್ಯೂನಿಸ್ಟ್ ಮುಖಂಡ ಕೆ.ಆರ್. ಶ್ರೀಯಾನ್ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ದಿನದುದ್ದಕ್ಕೂ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಮುಖಂಡರಾದ ಯಾದವ ಶೆಟ್ಟಿ, ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್ ಹಾಗೂ ಬೇರೆ ಬೇರೆ ಸಾಮೂಹಿಕ ಸಂಘಟನೆಗಳ ಮುಖಂಡರು ಮಾತನಾಡಿದರು.

ಯಾದವ ಶೆಟ್ಟಿ ಸ್ವಾಗತಿಸಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಹಾಜರಿದ್ದರು. ●

ಮಂಗಳೂರಿನಲ್ಲಿ ಜೆಸಿಟಿಯು ದ.ಕ. ಜಿಲ್ಲಾ ಸಮಾವೇಶ:

ದೇಶದ ಸಂಪತ್ತನ್ನು ವೃದ್ಧಿಸುವ ಕಾರ್ಮಿಕ ವರ್ಗವನ್ನು ಕೇಂದ್ರ ಸರಕಾರ ಕಡೆಗಣಿಸುತ್ತಿದೆ. ಸರ್ಕಾರ ಶ್ರೀಮಂತರ ಪರವಾಗಿದೆ. ಎಲ್ಲಾ ಕ್ಷೇತ್ರಗಳನ್ನೂ ಖಾಸಗೀಕರಣ ಮಾಡಲಾಗುತ್ತಿದೆ. ಕಾರ್ಮಿಕರ ಕಾನೂನುಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಕನಿಷ್ಟ ವೇತನವನ್ನು ಸರಕಾರ ಜಾರಿಗೊಳಿಸುತ್ತಿಲ್ಲ. ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿದವರ ಮೇಲೆ ಯಾವುದೇ ಕ್ರಮಕೈಗೊಳ್ಳಲಾಗುತ್ತಿಲ್ಲ. ಕೇಂದ್ರದ ಎನ್‌ಡಿಎ ಸರಕಾರವನ್ನು ಪ್ರತಿಭಟಿಸದೆ ಬೇರೆ ದಾರಿ ಇಲ್ಲ ಎಂಬುದಾಗಿ ಕಾರ್ಮಿಕ ಹಾಗೂ ನೌಕರ ಸಂಘಟನೆಗಳ ಮುಖಂಡರು ಕೇಂದ್ರ ಸರಕಾರವನ್ನು ಖಂಡಿಸಿ ಮಾತನಾಡಿದರು.

ಡಿಸೆಂಬರ್ 7 ರಂದು ದ.ಕ.ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಆಶ್ರಯದಲ್ಲಿ ಮಂಗಳೂರಿನಲ್ಲಿ ನಡೆದ ಸಮಾವೇಶದಲ್ಲಿ 2019 ಜನವರಿ 8 ಮತ್ತು 9 ರಂದು ಕಾರ್ಮಿಕರು ನಡೆಸಲಿರುವ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ಕೊಡಲಾಯಿತು.

ಎಐಟಿಯುಸಿ ರಾಜ್ಯ ಮುಖಂಡರಾದ ಗುಣಶೇಖರ ಸಮಾವೇಶವನ್ನು ಉದ್ಘಾಟಿಸಿದರು. ಸಿಐಟಿಯು ದ.ಕ. ಜಿಲ್ಲಾ ಮುಂದಾಳುಗಳಾದ ವಸಂತ ಆಚಾರಿ, ಜೆ. ಬಾಲಕೃಷ್ಣ ಶೆಟ್ಟಿ, ಎಚ್‌ಎಂಎಸ್‌ನ ಮಹಮ್ಮದ್ ರಫಿ, ಇಂಟಕ್‌ನ ಐವಾನ್ ಡಿಸೋಜ, ಬ್ಯಾಂಕ್ ನೌಕರರ ಫೆಡರೇಶನ್ನಿನ ಬಿ.ಎಂ.ಮಾಧವ, ವಿಮಾ ನೌಕರರ ಸಂಘದ ಎಚ್. ರಾಘವೇಂದ್ರ ರಾವ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಎಐಟಿಯುಸಿ ಜಿಲ್ಲಾ ಮುಖಂಡರಾದ ಎಚ್.ವಿ.ರಾವ್ ಸ್ವಾಗತಿಸಿದರು. ಸಿಐಟಿಯು ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು ವಂದಿಸಿದರು. •

ನೇಣುಕುಣಿಕೆ ಪ್ರದರ್ಶಿಸಿ ಮಂಗಳೂರಿನಲ್ಲಿ ಬೀದಿ ವ್ಯಾಪಾರಿಗಳ ಪ್ರತಿಭಟನೆ:



ಬೀದಿ ಬದಿ ವ್ಯಾಪಾರಿಗಳ ಮೇಲೆ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ನಡೆಸುತ್ತಿರುವ ದೌರ್ಜನ್ಯವನ್ನು ನಿಲ್ಲಿಸಬೇಕು. ಬೀದಿ ಬದಿ ವ್ಯಾಪಾರಿಗಳಿಗೆ ಸ್ಮಾರ್ಟ್‌ಸಿಟಿ ಯೋಜನೆಯಡಿ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಬೇಕು. 250 ಕ್ಕೂ ಮಿಕ್ಕಿದ ಬೀದಿ ಬದಿ ವ್ಯಾಪಾರಿಗಳಿಗೆ ಇನ್ನೂ ನೀಡಿರದ ಗುರುತು ಪತ್ರವನ್ನು ನೀಡಬೇಕು. ಬೀದಿ ಬದಿ ವ್ಯಾಪಾರಿಗಳಿಗೆ ನೀಡುವ ಕಿರುಕುಳ ನಿಲ್ಲಬೇಕು ಎಂದು ಆಗ್ರಹಿಸಿ ಬೀದಿ ಬದಿ ವ್ಯಾಪಾರಸ್ಥರ ಸಂಘ(ಸಿಐಟಿಯು) ನೇತೃತ್ವದಲ್ಲಿ ಡಿಸೆಂಬರ್ 12 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು

ಪ್ರತಿಭಟನೆಯನ್ನು ಸಿಐಟಿಯು ದ.ಕ. ಜಿಲ್ಲಾ ಉಪಾಧ್ಯಕ್ಷ ವಸಂತ ಆಚಾರಿ ಉದ್ಘಾಟಿಸಿ ಮಾತನಾಡಿದರು. ಸಂಘದ ಗೌರವಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ನ್ಯಾಯವಾದಿ ಎಸ್.ಪಿ.ಚೆಂಗಪ್ಪ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಘದ ಅಧ್ಯಕ್ಷ ಮಹಮ್ಮದ್ ಮುಸ್ತಾಫ, ಉಪಾಧ್ಯಕ್ಷ ಯೋಗೀಶ್ ಜಪ್ಪಿನಮೊಗರು, ಹಸನ್ ಕುದ್ರೋಳಿ, ಕಾರ್ಯದರ್ಶಿ ಹರೀಶ್ ಪೂಜಾರಿ, ಖಜಾಂಚಿ ಮಹಮ್ಮದ್ ಆಸಿಫ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪ್ರತಿಭಟನೆಗೂ ಮೊದಲು ಮಂಗಳೂರು ನಗರದ ರಾವ್ ಎಂಡ್ ರಾವ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಲಾಗಿತ್ತು. ●

ಹಿರಿಯ ಸಂಗಾತಿ ಚಂದ್ರಹಾಸ ಅವರಿಗೆ ಲಾಲ್ ಸಲಾಂ!



ಸಿಪಿಐ(ಎಂ) ಹಿರಿಯ ಸದಸ್ಯರೂ, ಪ್ರಗತಿಪರ ಚಿಂತಕರಾದ ಚಂದ್ರಹಾಸ ಕೊಡಿಯಾಲಬೈಲ್(82 ವರ್ಷ) ರವರು ಡಿಸೆಂಬರ್ 14ರಂದು ಕುತ್ತಾರಿನಲ್ಲಿರುವ ಸ್ವಗ್ರಹದಲ್ಲಿ ನಿಧನ ಹೊಂದಿದರು.

ಮಂಗಳೂರು ನಗರದ ಕೊಡಿಯಾಲಬೈಲ್ ನಲ್ಲಿ ಹುಟ್ಟಿ ಬೆಳೆದ ಕಾಂ.ಚಂದ್ರಹಾಸ ರವರು ತನ್ನ ಎಳೆಯ ಪ್ರಾಯದಲ್ಲೇ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾದರು. ಅದಕ್ಕೆ ಕಾರಣ ಅವರ ಅಣ್ಣ ಲಕ್ಷ್ಮಣ ಶೆಟ್ಟಿಗಾರ್ ಬೀಡಿ ಕಾರ್ಮಿಕರ ಸಂಘಟನೆಯ ಮುಂಚೂಣಿಯಲ್ಲಿದ್ದರು. ಆ ಮೂಲಕ ಕಮ್ಯುನಿಸ್ಟ್ ಪಕ್ಷದ ಪ್ರಭಾವಕ್ಕೆ ಒಳಗಾದರು. ಚಿಕ್ಕಂದಿನಿಂದಲೇ ದುಡಿಯುವ ವರ್ಗದ ಬಗ್ಗೆ ಭಾರೀ ಅಭಿಮಾನವಿರಿಸಿದ ಕಾಂ. ಚಂದ್ರಹಾಸರವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲೇ ಸದಸ್ಯರಾಗಿದ್ದರು. ಅಂದಿನಿಂದ ಇವತ್ತಿನವರೆಗೂ ಪಕ್ಷದ ಅನೇಕ ಹೋರಾಟ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಅನೇಕ ಸಂದರ್ಭಗಳಲ್ಲಿ ಪಕ್ಷ, ಸಂಘಟನೆಗಳಿಗೆ ಆರ್ಥಿಕ ಸಹಕಾರವನ್ನು ನೀಡುತ್ತಿದ್ದರು. ತೆರೆಯ ಮರೆಯಲ್ಲಿದ್ದುಕೊಂಡು ಪಕ್ಷದ ಚಳುವಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದದ್ದು, ಅವರ ಬದ್ಧತೆಯನ್ನು ಎತ್ತಿ ತೋರಿಸಿದೆ. ಟೈಲರ್ ವೃತ್ತಿಯನ್ನು ತನ್ನ ಜೀವನಾಧಾರವನ್ನಾಗಿಸಿದ ಚಂದ್ರಹಾಸರವರು ಕಳೆದ 6 ದಶಕಗಳ ಕಾಲ ಮಂಗಳೂರಿನ ಹ್ರಯಭಾಗದಲ್ಲಿ 'ಸ್ಟೈಲಿಶ್ ಟೈಲರ್' ಎಂಬ ಭಾರೀ ಪ್ರಖ್ಯಾತಿ ಪಡೆದ ಸಂಸ್ಥೆಯನ್ನು ಹೊಂದಿ, ತನ್ನ ವೃತ್ತಿಯಲ್ಲೂ ಅಪಾರ ನಿಷ್ಠೆಯುಳ್ಳವರಾಗಿದ್ದರು.

ಅವರ ನಿಧನದಿಂದ ಮಂಗಳೂರಿನ ದುಡಿಯುವ ವರ್ಗದ ಚಳುವಳಿಗೆ ಅಪಾರ ನಷ್ಟವುಂಟಾಗಿದೆ ಎಂದು ಸಿಪಿಐ(ಎಂ) ತನ್ನ ಭಾವಪೂರ್ಣ ಶ್ರದ್ಧಾಂಜಲಿಯಲ್ಲಿ ತಿಳಿಸಿದೆ. ಅಂತ್ಯಕ್ರಿಯೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುನೀಲ್ ಕುಮಾರ್ ಬಜಾಲ್, ವಾಸುದೇವ ಉಚ್ಚಿಲ್, ಮುನೀರ್ ಕಾಟಿಪಳ್ಳ, ಜಯಂತ ನಾಯಕ್, ಪದ್ಮಾವತಿ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಕಾಸರಗೋಡು ಜಿಲ್ಲೆಯ ಸಿಪೀಐ(ಎಂ) ನಾಯಕರಾದ ಕೆ.ಆರ್. ಜಯಾನಂದ, ಕ್ರಷ್ಣ ಶೆಟ್ಟಿಗಾರ್, ಜಯಕರ ಮಂಜೇಶ್ವರ ಮುಂತಾದವರು ಭಾಗವಹಿಸಿದ್ದರು. ಮ್ರತರು ಪತ್ನಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ●

ಮರಳುಗಾರಿಕೆಗೆ ಅಡ್ಡಿಗೆ ಖಂಡನೆ

ಮರಳುಗಾರಿಕೆಗೆ ಕೆಲವು ಶಕ್ತಿಗಳು ಅಡ್ಡಿಪಡಿಸುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ಜಿಲ್ಲಾಡಳಿತ ಹೇಳಿಕೆ ಪ್ರಕಟವಾಗಿದೆ. ಮರಳುಗಾರಿಕೆಗೆ ರಾಜಕೀಯ ಪ್ರೇರಿತವಾಗಿ ಅಡ್ಡಿಪಡಿಸುತ್ತಿರುವುದು ಖಂಡನೀಯವಾಗಿದೆ ಎಂದು ಕುಂದಾಪುರ ತಾಲೂಕು ಕಟ್ಟಡ ಕಾರ್ಮಿಕರ ಸಂಘವು ಹೇಳಿದೆ. ಕಟ್ಟಡ ಕಾರ್ಮಿಕರ ಜಿಲ್ಲಾ ಸಮನ್ವಯ ಸಮಿತಿ ನವಂಬರ್ 27ರಿಂದ ಮರಳು ಸಮಸ್ಯೆ ಶಾಶ್ವತವಾಗಿ ಪರಿಹರಿಸಲು ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಿದಾಗ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವಿಜ್ಞಾನಿಗಳು ಮತ್ತು ಅಧಿಕಾರಿಗಳು ಸ್ಥಳಕ್ಕೆ ಬಂದು 2–3 ದಿನಗಳಲ್ಲಿ ಮರಳು ಸಮಸ್ಯೆ ➔



ವಿಜಯಪುರ ಜೆಸಿಟಿಯು ಜಿಲ್ಲಾ ಸಮಾವೇಶ

ವಿಜಯಪುರದ ಎನ್.ಜಿ.ಓ. ನೌಕರರ ಭವನದಲ್ಲಿ 8–9–2019 ರಂದು ಎರಡು ದಿನಗಳ ಕಾಲ ಅಖಿಲ ಭಾರತ ಮುಷ್ಕರದ ಪೂರ್ವಭಾವಿಯಾಗಿ ಹಮ್ಮಿಕೊಂಡ ಜಿಲ್ಲಾ ಜಂಟಿ ಕಾರ್ಮಿಕ ಸಂಘಟನೆಗಳ ಜಿಲ್ಲಾ ಸಮಾವೇಶವನ್ನು ಸಿಐಟಿಯುವಿನ ರಾಜ್ಯಾಧ್ಯಕ್ಷರಾದ ಶ್ರೀಮತಿ ಎಸ್. ವರಲಕ್ಷ್ಮೀಯವರು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಕಾರ್ಮಿಕರ ಹಿತಾಸಕ್ತಿಯನ್ನು ಎತ್ತಿ ಹಿಡಿಯದೆ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಹಗಲಿರುಳು ಶ್ರಮಿಸುತ್ತಿದೆ ಮುಂದುವರೆದು ದೇಶದ ಎಲ್ಲಾ ಕ್ಷೇತ್ರ ಕಾರ್ಮಿಕರಿಗೆ 1948 ರಲ್ಲಿ ಸರ್ಕಾರ ನಿಗಧಿ ಮಾಡಿದ ಕನಿಷ್ಠ ವೇತನವನ್ನು ನೀಡದೆ 12–13 ತಾಸುಗಳವರೆಗೆ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದಾರೆ. ಹಲವಾರು ವರ್ಷಗಳ ಹಿಂದೆ ಹೋರಾಟದ ಮುಖಾಂತರ ಗಳಿಸಿಕೊಂಡಿರುವ ಕಾರ್ಮಿಕ ಹಕ್ಕುಗಳಾದ ಬೋನಸ್, ಗ್ರಾಚ್ಯುಟಿ, ಪಿ.ಎಫ್., ರಜೆ ಇನ್ನಿತರ ಕ್ವಾಟರ್ಸ್ ಇನ್ನಿತರ ಸೌಕರ್ಯಗಳನ್ನು ನೀಡದೆ ಕೇಂದ್ರ ಸರ್ಕಾರವು ಕಳೆದ ಚುನಾವಣೆಯಲ್ಲಿ ಪ್ರತಿವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಠಿ ಮಾಡುವುದಾಗಿ ತಮ್ಮ ಪ್ರಣಾಳಿಕೆಯಲ್ಲಿ ದೇಶದ ಜನಗಳಿಗೆ ವಾಗ್ದಾನ ನೀಡಿದ್ದನ್ನು ಗಾಳಿಗೆ ತೂರಿ ಇದ್ದ ಉದ್ಯೋಗಗಳನ್ನೇ ಮೊಟಕುಗೊಳಿಸುವ ಮೂಲಕ ಶ್ರೀಮಂತರ ಸೇವೆ ಸಲ್ಲಿಸುವುದಲ್ಲಿ ಹಗಲಿರುಳು ತಲ್ಲೀನರಾಗಿದೆ ಎಂದು ದೂರಿದರು.

ಎಐಯುಟಿಯುಸಿ ರಾಜ್ಯ ಜಂಟಿ ಕಾರ್ಯದರ್ಶಿಗಳಾದ ಎಂ.ಶಶಿಧರ ಅವರು ಮಾತನಾಡುತ್ತಾ, ಎಲ್ಲಾ ಸಮಸ್ಯೆಗಳಿಗೆ ಮುಕ್ತಿ ಹೊಂದಲು ಸರ್ಕಾರ ಬದಲಾವಣೆ ಮಾಡಲು ಸಾಧ್ಯವಿಲ್ಲ. ವ್ಯವಸ್ಥೆಯನ್ನು ಬದಲಾವಣೆ ಮಾಡಲು ಕಾರ್ಮಿಕರಿಗೆ ಕರೆ ನೀಡಿದರು. ಈ ಸಮಾವೇಶದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿಯವರು, ಬ್ಯಾಂಕ್ ಯೂನಿಯನ್ ಮುಖಂಡರಾದ ಜಿ.ಜಿ. ಗಾಂಧಿಯವರು ಮಾತನಾಡಿದರು. ಸಿಐಟಿಯು ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಐಯುಟಿಯುಸಿ ಜಿಲ್ಲಾ ಸಂಚಾಲಕರು ಮಲ್ಲಿಕಾರ್ಜುನ ಎಚ್.ಟಿ. ಕಾರ್ಯಕ್ರಮವನ್ನು ನಿರೂಪಿಸಿದರು. ಸಿಐಟಿಯುವಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ ವಂದಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ಎ.ಐ.ಟಿ.ಯು.ಸಿ. ಜಿಲ್ಲಾಧ್ಯಕ್ಷ ಪ್ರಕಾಶ ಹಿಟ್ನಳ್ಳಿ ವಹಿಸಿದ್ದರು.

ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ರಕ್ಷಣೆಗೆ ಒತ್ತಾಯ

ಡಿಸೆಂಬರ್ 10, ಮಾನವ ಹಕ್ಕುಗಳ ದಿನ. ಅಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು) ಜಂಟಿಯಾಗಿ ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ರಕ್ಷಣೆ ಸಿಗಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಕಾರ್ಪೋರೇಷನ್ ಸರ್ಕಲ್‌ನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿ ಬಳಿ ಸಭೆ ನಡೆಸಿತು.

ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎಸ್.ಶಾರದಾ ಉದ್ಘಾಟಿಸಿ ಮಾತನಾಡಿದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ಲಕ್ಷ್ಮಿ, ಸಿಐಟಿಯುವಿನ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಕಾಂ.ಪ್ರತಾಪ್ ಸಿಂಹ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು. 2013ರಲ್ಲಿ ಸುಪ್ರೀಂ ಕೋರ್ಟ್ ಕಾಯ್ದೆಯನ್ನು ಜಾರಿಗೆ ತಂದು 5 ವರ್ಷಗಳಾಗಿದ್ದರೂ ಸಹ ಕಾಯ್ದೆ ಸಮರ್ಪಕವಾಗಿ ಜಾರಿ ಆಗಿಲ್ಲ. ಆಂತರಿಕ ದೂರು ನಿರ್ವಹಣಾ ಸಮಿತಿ ರಚನೆಯಾಗಿಲ್ಲ. ಖಾಸಗಿ ಸಂಸ್ಥೆಗಳಲ್ಲಿ, ಕಾರ್ಪೋರೇಟ್ ಸಂಸ್ಥೆಗಳಲ್ಲಿ, ಮಹಿಳೆಯರನ್ನು ನಿರ್ಲಕ್ಷಿಸುತ್ತಿದೆ, ಕೆಲವು ಕಡೆ ಸಮಿತಿಗಳು ರಚನೆ ಆಗಿದೆ. ಆದರೆ ತೋರಿಕೆಗೆ ಸಮಿತಿಗಳು ಇವೆ. ಸಮಿತಿ ರಚನೆ ಆಗದಿರುವ ಕಡೆ ಸಮಿತಿ ರಚನೆ ಮಾಡಬೇಕು, ಮಹಿಳೆಯರು ದುಡಿಯುವ ಸ್ಥಳದಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು, ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡಬೇಕೆಂದು ಭಾಷಣಕಾರರು ಒತ್ತಾಯಿಸಿದರು.

ಈ ಕಾರ್ಯಕ್ರಮದಲ್ಲಿ ಮಂಗಳಮುಖಿಯರು ಭಾಗವಹಿಸಿದುದು ವಿಶೇಷವಾಗಿತ್ತು. ಮಂಗಳ ಮುಖಿಯರ ಮುಖಂಡರಾಗಿರುವ ಸ್ವರ್ಣಪ್ರಭಾ ಮಾತನಾಡಿ, ನಾವು ಸ್ಮಶಾನದಲ್ಲಿ ವಾಸಿಸುತ್ತಿದ್ದೇವೆ. ಇಲ್ಲಿಯೂ ನಮಗೆ ರಕ್ಷಣೆ ಇಲ್ಲದಾಗಿದೆ ಎಂದರು.

ದುಡಿಯುವ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ತಡೆ ಸಮಿತಿ ರಚನೆಯಾಗಬೇಕೆಂದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಂತರಿಕ ದೂರು ಸಮಿತಿ ರಚನೆಯಾಗಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಮನವಿಯನ್ನು ಮಹಿಳಾ ಉಪ ಜಿಲ್ಲಾಧಿಕಾರಿ ಒಬ್ಬರು ಜಿಲ್ಲಾಧಿಕಾರಿಯ ಪರವಾಗಿ ಸ್ವೀಕರಿಸಿದರು.

ರ್ಯಾಲಿಯಲ್ಲಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರೆಲ್ಲರಿಗೂ ಬೆಂಗಳೂರು ದಕ್ಷಿಣ ಜಿಲ್ಲಾ ಸಂಚಾಲಕಿ ಶ್ರೀಮತಿ ಕೆ. ವಂದನೆ ಸಲ್ಲಿಸಿದರು.





ಡಿಸೆಂಬರ್ 13 ರಂದು ಬೆಂಗಳೂರಿನ ಅಸಂಘಟಿತ ಕಾರ್ಮಿಕರ ಧರಣಿ

ಅಸಂಘಟಿತ ಕಾರ್ಮಿಕರಾದ ಮನೆಕೆಲಸಗಾರರು, ಆಟೋಚಾಲಕರು, ಕಟ್ಟಡ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ದರ್ಜಿಗಳು(ಟೈಲರ್) ಸುಮಾರು 600 ಕ್ಕೂ ಹೆಚ್ಚು ಕಾರ್ಮಿಕರು, ಒಟ್ಟಾಗಿ ಇಡೀ ದಿನ ಕಾರ್ಮಿಕ ಭವನದ (ಬನ್ನೇರುಘಟ್ಟ ರಸ್ತೆ ಡೈರಿ ವೃತ್ತ) ಎದುರು ಡಿಸೆಂಬರ್ 13 ರಂದು ಪ್ರತಿಭಟನೆ ನಡೆಸಿದರು.

ಅಸಂಘಟಿತ ಕಾರ್ಮಿಕರನ್ನು ಗುರುತಿಸುವ ಅಂಬೇಡ್ಕರ್ ಸಹಾಯ ಹಸ್ತ ಯೋಜನೆಯ ಸ್ಮಾರ್ಟ್ ಕಾರ್ಡ್ ನೀಡಬೇಕು. ಅದರ ಮುಖಾಂತರ ವಿವಿಧ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಲಾಯಿತು. ಅಸಂಘಟಿತ ಕಾರ್ಮಿಕರಿಗೆ ಪಶ್ಚಿಮ ಬಂಗಾಳ ಮಾದರಿಯ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ಕಟ್ಟಡ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ನೀಡಬೇಕೆಂದು ಒತ್ತಾಯಿಸಿ ಮನವಿ ಪತ್ರ ನೀಡಲಾಯಿತು.

ಇಡೀ ದಿನ ನಡೆದ ಹೋರಾಟದಲ್ಲಿ ಭಾಗವಹಿಸಿದ ಕಾರ್ಮಿಕರು ಅಲ್ಲಿಯೇ ಅಡಿಗೆ ತಯಾರಿಸಿ ಮಧ್ಯಾಹ್ನ ಊಟ ಸೇವಿಸಿದರು. ಮನವಿ ಪತ್ರ ಪಡೆದ ಅಧಿಕಾರಿಗಳು ಮೂರು ವಾರಗಳಲ್ಲಿ ಅಂಬೇಡ್ಕರ್ ಸಹಾಯ ಹಸ್ತ ಯೋಜನೆಯ ಸ್ಮಾರ್ಟ್ ಕಾರ್ಡ್ ನೀಡುವುದಾಗಿ ಭರವಸೆ ನೀಡಿರುತ್ತಾರೆ.

ಸಿಐಟಿಯು ರಾಜ್ಯ ಮತ್ತು ಜಿಲ್ಲಾ ಮುಖಂಡರು ಭಾಗವಹಿಸಿದ್ದರು.



ರಾಜ್ಯದ ಮೊದಲ ದೇವದಾಸಿ ಮಹಿಳಾ ಸಹಕಾರಿ ಸಂಘ ಆರಂಭ

ಡಿಸೆಂಬರ್ 13 ರಂದು ಹಗರಿಬೊಮ್ಮನಹಳ್ಳಿಯಲ್ಲಿ ಉದ್ಘಾಟನೆಯಾಗಿ ಆರಂಭವಾದ ದೇವದಾಸಿ ಮಹಿಳಾ ಸಹಕಾರ ಸಂಘ ರಾಜ್ಯದಲ್ಲೇ ಮೊದಲ ಇಂತಹ ಸಹಕಾರಿ ಸಂಘ ಎಂಬ ಹೆಗ್ಗಳಿಕೆ ಪಡೆದಿದೆ. ಇದು ಸಮಾಜದ ಬಲವಂತದ ದೇವದಾಸಿ ಅನಿಷ್ಠ ಪದ್ಧತಿಗೆ ತಳ್ಳಲ್ಪಟ್ಟ ದೇವದಾಸಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಹಾಗೂ ಅವರ ಬದುಕಿಗೆ ಭದ್ರತೆ ಒದಗಿಸಲು ಸ್ವಾವಲಂಬನೆಯ ಬದುಕು ನಿರ್ಮಾಣಕ್ಕಾಗಿ ಮಾಡುತ್ತಿರುವ ಹತ್ತಾರು ಹೋರಾಟಗಳ ಮುಂದುವರಿಕೆ ಎನ್ನಲಾಗಿದೆ. ದೇವದಾಸಿ ಮಹಿಳೆಯರು ತಮ್ಮ ಪ್ರಾಮಾಣಿಕ ದುಡಿಮೆಯಿಂದ ಉಳಿದ ಹಣದಿಂದ ಉದ್ದೇಶಿತ ಸಹಕಾರಿ ಸಂಘವನ್ನು ನಡೆಸಲಿದ್ದಾರೆ. ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಹಗರಿಬೊಮ್ಮನಹಳ್ಳಿ ತಾಲೂಕು ಘಟಕ ಈ ಚಾರಿತ್ರಿಕ ಕೆಲಸಕ್ಕೆ ಮುಂದಾಗಿದೆ.



ಉದ್ಘಾಟನಾ ಸಮಾರಂಭದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಆರ್.ಎಸ್. ಬಸವರಾಜ್, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯಾಧ್ಯಕ್ಷರಾದ ಬಿ. ಮಾಳಮ್ಮ ಸೇರಿದಂತೆ ಹಲವು ರೈತ–ಕಾರ್ಮಿಕ ನಾಯಕರು ಮತ್ತು ಇತರ ಗಣ್ಯರು ಭಾಗವಹಿಸಿದ್ದರು.

➔ ಪರಿಹರಿಸುವುದಾಗಿ ಹೇಳಿದರು ಅದನ್ನು ಒಪ್ಪಿ ಧರಣಿ ಹಿಂತೆಗೆದುಕೊಳ್ಳಲಾಗಿತ್ತು.


ಆದರೆ ಈಗ ಪರವಾನಿಗೆ ಪಡೆದ 11 ಜನರು ಮರಳುಗಾರಿಕೆ ನಡೆಸಿ ವಿತರಣೆ ಮಾಡದಿದ್ದರೆ ಪರವಾನಿಗೆ ರದ್ದು ಮಾಡಲಾಗುವುದು ಎಂದು ಜಿಲ್ಲಾಡಳಿತ ಹೇಳಿರುವುದು ಸಮಸ್ಯೆ ಇನ್ನಷ್ಟು ಉಲ್ಬಣಗೊಂಡು ಕಟ್ಟಡ ಕಾರ್ಮಿಕರ ಸಂಸಾರ ಬೀದಿಗೆ ಬೀಳಲಿದೆ. ಜನಸಾಮಾನ್ಯರ ಬಗ್ಗೆ ಕಾಳಜಿಯಿದ್ದರೆ ಸರಕಾರ ಮತ್ತು ವಿರೋಧ ಪಕ್ಷದ ಜನಪ್ರತಿನಿಧಿಗಳು ಜನರ ಜೀವನದ ಜೊತೆ ಚೆಲ್ಲಾಟವಾಡುವುದು ಬಿಟ್ಟು ಪರವಾನಿಗೆದಾರರಿಗೆ ಸೂಕ್ತ ರಕ್ಷಣೆ ಒದಗಿಸಲು ಮುಂದಾಗಲಿ. ಮರಳುಗಾರಿಕೆ ನಡೆಸಲು ಅನುಕೂಲ ಮಾಡಿ ಜನಪರವಾಗಿರುವುದು ಸಾಬೀತು ಪಡಿಸಲಿ. ಕೆಲವೇ ಕೆಲವು ಜನರ ಲಾಭದ ಒಳಿತಿಗಾಗಿ ಇಡೀ ಜಿಲ್ಲೆಯ ಜನರಿಗೆ ತೊಂದರೆ ಕೊಡುತ್ತಿರುವುದು ಜವಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯ ಬೇಜವಬ್ದಾರಿತನವಾಗುತ್ತದೆ. ಪರವಾನಿಗೆ ಇರುವವರಿಗೆ ಮೊದಲು ಮರಳುಗಾರಿಕೆ ಆರಂಭಿಸಲು ಆದೇಶಿಸಿ ಶೀಘ್ರ ಮರಳು ಸಿಗುವಂತೆ ಮಾಡಬೇಕು ಇಲ್ಲವಾದಲ್ಲಿ ಕಟ್ಟಡ ಕಾರ್ಮಿಕ ಸಂಘದ ನೇತ್ರತ್ವದಲ್ಲಿ ಜನವರಿ 08ರಂದು ಜಿಲ್ಲೆಯಾದ್ಯಂತಹ ಕಟ್ಟಡ ಕಾರ್ಮಿಕರು ತಮ್ಮ ಕೆಲಸಗಳನ್ನು ಬಂದ್ ಮಾಡಿ ಹರತಾಳ ನಡೆಸಿ ಉಗ್ರ ಹೋರಾಟ ಮಾಡಲಿದ್ದಾರೆ. ಎಂದು ತಿಳಿಸಿದೆ. ಕಟ್ಟಡ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಹ, ಸೂಕ್ತ ರಕ್ಷಣಾ ವ್ಯವಸ್ಥೆ ಕಲ್ಪಿಸಿ ಮರಳು ಮಾರುಕಟ್ಟೆಯಲ್ಲಿ ಸಿಗುವಂತೆ ಮಾಡಬೇಕು ಎಂದು ಪ್ರತ್ಯೇಕ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.


ಕಾರ್ಮಿಕರ ಮುಷ್ಕರಗಳು, ಚಳುವಳಿ–ಆಂದೋಲನಗಳು ನಡೆದಾಗ ಅವನ್ನು ಕೇವಲ ಒಂದು ಶುಷ್ಕ ಸುದ್ದಿಯ ತುಣುಕನ್ನಾಗಿ ಮಧ್ಯಮವರ್ಗೀಯರು ನೋಡುವ ಸಂಭವವೇ ಹೆಚ್ಚು. ದುಡಿಯುವ ಜನತೆಯಾಗಿ ತಮ್ಮ ಭಾಗವೇ ಆದ ಕಾರ್ಮಿಕರ ಬವಣೆಯು ತಮಗೆ ಸಂಬಂಧಿಸಿರದ ವಿದ್ಯಮಾನವೆಂದು ಭಾವಿಸಿ ತೆಪ್ಪಗಿರುವವರೇ ಅಧಿಕ. ಆದರೆ ಈ ಚಿತ್ರವು ಕಾರ್ಮಿಕ–ಮಾಲೀಕರ ನಡುವಿನ ವೈಷಮ್ಯವನ್ನು ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲು ಬರುವ ಮಧ್ಯಮವರ್ಗೀಯರ ನಡುಮನೆಗೇ ತಂದಿರಿಸುತ್ತದೆ. ಇದು ಈ ಚಿತ್ರದ ಹೆಗ್ಗಳಿಕೆ. ವಾಸ್ತವವಾದೀ ಫ್ರೆಂಚ್ ಸಿನೆಮಾದ ಪರಿಚಯವಿದ್ದವರಿಗೆ 'ಅಟ್ ವಾರ್' ಚಿತ್ರವು ರೊಮ್ಯಾಂಟಿಕ್ ಆಶಾವಾದಿತನದ ಆಕಾಶದಲ್ಲಿ ಕನಸು ಕಾಣದೆ, ಈ ವಾಸ್ತವದ ಗಟ್ಟಿನೆಲದಲ್ಲಿ ಕಾಲುಗಳನ್ನು ಊರಿ ಬಂಡವಾಳದ ಹೃದಯಹೀನ ಉಕ್ಕಿನ ವಾಸ್ತವವನ್ನು ಶ್ರಮಿಕರ ಐಕ್ಯತೆಯ ವಜ್ರದಿಂದ ಎದುರಿಸಬೇಕೆಂದು ಹೇಳುತ್ತದೆಯೇ ಹೊರತು ನಿರಾಸೆ–ಹತಾಶೆಗಳ ಸಂದೇಶವನ್ನಲ್ಲ.

ಬಂಡವಾಳದ ಹೃದಯಹೀನತೆ ಮತ್ತು ಶ್ರಮಿಕರ ಐಕ್ಯತೆಯ ನಡುವೆ 'ಯುದ್ಧ'

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮಿನಾರಾಯಣ



ಅಟ್ ವಾರ್ (At War)
ಪ್ರಧಾನ ಪಾತ್ರದಲ್ಲಿ: ವಿನ್ಸೆಂಟ್ ಲಿಂಡನ್
ನಿರ್ದೇಶಕ: ಸ್ಟೀಫನ್ ಬ್ರೀಜೆ/ ಫ್ರೆಂಚ್'/113 ನಿಮಿಷ 2018

ಸಿನೆಮಾಕ್ಕೆ ಎರಡು ಮುಖಗಳಿವೆ. ಒಂದು, ಸೂಕ್ಷ್ಮಜ್ಞರ ಕಲಾತ್ಮಕ ಅಭಿವ್ಯಕ್ತಿಯಾಗಿ ಸಿನೆಮಾ. ಎರಡನೆಯದು, ಮನರಂಜನಾ ವ್ಯಾಪಾರಿಗಳ ಸರಕಾಗಿ ಸಿನೆಮಾ. ಅಂತಾರಾಷ್ಟ್ರೀಯ ಚಿತ್ರೋತ್ಸವಗಳು ಜೀವನಾನುಭವವನ್ನು ಅದರ ತಾತ್ವಿಕ ನಿಲುವುಗಳೊಂದಿಗೆ ವಿಮರ್ಶಿಸಿ ಸೃಜಿಸುವ ಕಲಾತ್ಮಕ ಚಿತ್ರಗಳ ಪ್ರದರ್ಶನ ವೇದಿಕೆ ಎಂಬ ನಂಬಿಕೆ ಒಂದು ಕಾಲದಲ್ಲಿ ಇತ್ತು. ವಿಶ್ವಮಟ್ಟದಲ್ಲಿ ಹಣಕಾಸು ಬಂಡವಾಳವು ಡಿಜಿಟಲ್ ಬಂಡವಾಳವಾಗಿ ಎಲ್ಲೆಲ್ಲೂ ವಿಜೃಂಭಿಸುತ್ತಿರುವ ಈಚಿನ ವರ್ಷಗಳಲ್ಲಿ, ಮಾರುಕಟ್ಟೆಯ ಕಪಿಮುಷ್ಟಿಗೆ ಜನಜೀವನವು ಸಿಕ್ಕಿರುವುದಲ್ಲದೆ, ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಸೃಜನಾತ್ಮಕ ಕಲೆಗಳೂ ಸಹ ಬಂಡವಾಳದ ಹೊಡೆತಕ್ಕೆ ನಲುಗಿ, ಚಿತ್ರೋತ್ಸವಗಳಲ್ಲೂ ಸಹ ಪ್ರೌಢವಲ್ಲದ ಮನಸ್ಸುಗಳಿಗೆ ರೋಮಾಂಚನ ಉಂಟುಮಾಡುವ 'ಥ್ರಿಲರ್ ಗಳು', ಸಂವೇದನಾಶೀಲರ ಭಾವನೆಗಳನ್ನು ನಾಟಕೀಯವಾಗಿಸಿ ನಗದೀಕರಿಸಿಕೊಳ್ಳಬಯಸುವ ಕೌಟುಂಬಿಕ ಡ್ರಾಮಾಗಳು ಮತ್ತು ಸಾಮಾಜಿಕ ಬದುಕಿನ ಮುಖ್ಯಕಾಳಜಿಗಳನ್ನು ಮರೆಮಾಚುವಂತೆ ನವ ನವೀನ ರೀತಿಯಲ್ಲಿ ಮನರಂಜನೆಯನ್ನೊದಗಿಸುವ ಮಸಾಲೆ ಚಿತ್ರಗಳು ಮೇಲುಗೈ ಪಡೆಯುತ್ತಿವೆ. ಆದರೆ ನಿರಾಶೆ ಇನ್ನೂ ಅನಿವಾರ್ಯವಾಗಿಲ್ಲ. ಬಹುಶಃ ಆಗುವುದೂ ಇಲ್ಲ. ಏಕೆಂದರೆ ಇವುಗಳ ಮಧ್ಯೆಯೂ ಪ್ರಸ್ತುತ ಬದುಕಿನ ಬಿಕ್ಕಟ್ಟುಗಳನ್ನು, ತಮ್ಮ ಅನನ್ಯ ಶೈಲಿಯಲ್ಲಿ, ಸೃಜನಾತ್ಮಕವಾಗಿ ಸಿನೆಮಾ ಸಹೃದಯರ ಮುಂದಿಡಲು ಬಯಸುವ ಗೊಡಾರ್ಡ್, ಅಸ್ಗರ್ ಪನಾಹಿ, ನೂರಿ ಬಿಲ್ಗೆ ಸಿಲಾನ್, ಸ್ಟಿಫಾನ್ ಬ್ರಿಜೆ, ನದೀನ್ ಲಬಾಕಿ ಯಂಥ ಸಂವೇದನಾಶೀಲ ಚಿತ್ರನಿರ್ದೇಶಕರ ಚಿತ್ರಗಳು ವಿರಳವಾಗಿಯಾದರೂ ಭಾರತದ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಪ್ರದರ್ಶಕ್ಕೆ ಆಯ್ಕೆಯಾಗಿ ಸಿನಿಮಾ ಸಹೃದಯರಿಗೆ ನೋಡಲು ಸಿಗುತ್ತಿವೆ.


ಗೋವಾದ 2018 ರ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಸ್ಟಿಫಾನ್ ಬ್ರಿಜೆ ನಿರ್ದೇಶಿಸಿರುವ ಫ್ರೆಂಚ್ ಭಾಷೆಯ 'ದಿ ವಾರ್' (En Guerre) ಇಂಥ ಸಂವೇದನಾಶೀಲ ವಿರಳ ಚಿತ್ರ. ಬಂಡವಾಳಶಾಹೀ ತಾತ್ವಿಕತೆಯ ರಾಜಕೀಯ ಸಿದ್ಧಾಂತಿಗಳು ಈ ಡಿಜಿಟಲ್ ಬಂಡವಾಳದ ಆಧುನಿಕೋತ್ತರ ಯುಗದಲ್ಲಿ 'ಕಾರ್ಮಿಕರೇ ಇಲ್ಲ, ಆದ್ದರಿಂದ ಕಾರ್ಲ್ ಮಾರ್ಕ್ಸ್, ಸಮಾಜವಾದ, ಕ್ರಾಂತಿ ಮುಂತಾದುವೆಲ್ಲಾ ಅರ್ಥ ಕಳೆದುಕೊಂಡು, ಅಪ್ರಸ್ತುತವಾಗಿವೆ' ಎಂದು ಕೇಕೆ ಹಾಕುತ್ತಿರುವಾಗಲೇ ಜಾಗತಿಕ ಬಂಡವಾಳವು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಾ 'ಕ್ಯಾಪಿಟಲ್' ಗ್ರಂಥದ ಅಧ್ಯಯನವು, ಬಂಡವಳಿಗರಿಗೂ ಸಹ ಅನಿವಾರ್ಯವಾಗಿಬಿಟ್ಟಿದೆ.

ಬಂಡವಾಳಶಾಹಿ ಸಮಾಜದಲ್ಲಿ ಬಿಕ್ಕಟ್ಟುಗಳು ತಲೆದೋರಿದಾಗಲೆಲ್ಲಾ ಬಂಡವಳಿಗರು ತಮ್ಮ ಬಂಡವಾಳ ವೃದ್ಧಿಯ ಕುಸಿತದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಶ್ರಮಿಕರನ್ನು ಕೆಲಸದಿಂದ ತೆಗೆಯುವುದು, ಅದರ ಪರಿಣಾಮವಾಗಿ ಶ್ರಮಿಕರು ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಅನಿವಾರ್ಯವಾಗಿ ಮುಷ್ಕರಕ್ಕೆ ಕರೆಕೊಡುವುದೂ ಸಹಜವಾದ ವಿದ್ಯಮಾನಗಳು. ತತ್ಫಲವಾಗಿ, ಸಾಲ–ಸೋಲದ ಸಂಕಷ್ಟಗಳು, ವೈಯಕ್ತಿಕ ಘನತೆಯ ನಾಶ, ಹತಾಶೆ, ಆತ್ಮಹತ್ಯೆಯಂಥ ತೀವ್ರತರದ ಪರಿಣಾಮಗಳನ್ನು ಎದುರಿಸುವುದು ನೇರವಾಗಿ ಮಧ್ಯಮವರ್ಗದ ಜನರನ್ನು ತಟ್ಟುವುದೇ ಇಲ್ಲ. 1909 ರಷ್ಟು ಹಿಂದೆಯೇ ಬ್ರಿಟಿಷ್ ನಾಟಕಕಾರ ಜಾನ್ ಗಾಲ್ಸ್ ವರ್ದಿ 'ಸ್ಟ್ರೈಫ್' ಎಂಬ ನಾಟಕ ರಚಿಸಿ ಬಂಡವಳಿಗರ ಅಮಾನುಷತೆಯಿಂದಾಗಿ ಆರ್ಥಿಕ ಮತ್ತು ವೈಯಕ್ತಿಕ ಸಂಕಷ್ಟಗಳಡಿಯಲ್ಲಿ ಸಿಕ್ಕ ಶ್ರಮಿಕರು ಅಡಕತ್ತರಿಯ ಸಿಕ್ಕಿ ಸೋಲೊಪ್ಪಿಕೊಳ್ಳುವ ದಾರುಣತೆಯನ್ನು ಕಲೆಯ ಆಸ್ವಾದನೆಯಲ್ಲಿ ಮೈಮರೆಯಬಯಸುವ ಮಧ್ಯಮವರ್ಗೀಯರ ಮುಂದೆ ಪ್ರಸ್ತುತಪಡಿಸಿದ್ದ.

1978 ರಲ್ಲಿ ಇಂಗ್ಲೆಂಡಿನ 'ನ್ಯಾಶನಲ್ ಥಿಯೇಟರ್' ಮತ್ತು ಇತ್ತೀಚೆಗೆ 2016 ರಲ್ಲಿ 'ಮಿನರ್ವ ಥಿಯೇಟರ್ ಈ ನಾಟಕವನ್ನು ಇಂಗ್ಲೆಂಡಿನಲ್ಲಿ ಪ್ರದರ್ಶಿಸಿವೆ.

ಸ್ಟಿಫಾನ್ ಬ್ರಿಜೆ ನಿರ್ಮಿಸಿರುವ ಈ ಚಿತ್ರದಲ್ಲೂ ಬಂಡವಾಳಶಾಹಿ ಪ್ರಜಾಪ್ರಭುತ್ವದ ಶೋಷಣಾತ್ಮಕ ಚೌಕಟ್ಟಿನೊಳಗಿನ ತೋರಿಕೆಯ ನ್ಯಾಯವನ್ನೂ ನಿರಾಕರಿಸುವ ಎರಡು ನಾಲಿಗೆಯ ಆಡಳಿತ ಮಂಡಳಿಯ ವಿರುದ್ಧ ಕೆಲಸ ಕಳೆದುಕೊಂಡ 1100 ಶ್ರಮಿಕರು ತಮ್ಮ ಮತ್ತು ತಮ್ಮನ್ನು ನೆಚ್ಚಿಕೊಂಡ ಕುಟುಂಬಗಳ 4000 ಜನರ ಬದುಕಿಗಾಗಿ, ನಾಗರಿಕ ವ್ಯಕ್ತಿಗಳಾಗಿ ತಮ್ಮ ಘನತೆಗಾಗಿ ಮುಷ್ಕರ ಹೂಡುತ್ತಾರೆ. ಮೂಲ ಕಂಪೆನಿಯಾಗಿ ಜರ್ಮನಿಯಲ್ಲಿ ಕುಳಿತು ಫ್ರಾನ್ಸ್ ನ ಏಜೆನ್ ನಗರದಲ್ಲಿ ಮೋಟಾರುವಾಹನಗಳ ಬಿಡಿಭಾಗಗಳನ್ನು ತಯಾರಿಸುವ ತಮ್ಮ ಅಂಗ ಸಂಸ್ಥೆ ಯಾದ ಪೆರ್ರಿನ್ ಕಾರ್ಖಾನೆಯ ಎಲ್ಲಾ ಕಾರ್ಮಿಕರನ್ನೂ ವಜಾಮಾಡಿ ಕಾರ್ಖಾನೆಯನ್ನು ಮುಚ್ಚುವ ನಿರ್ಧಾರವನ್ನು ಆಡಳಿತ ಮಂಡಳಿಯು ತೆಗೆದುಕೊಳ್ಳುತ್ತದೆ. ಎರಡು ವರ್ಷಗಳ ಹಿಂದೆ ಆಡಳಿತವರ್ಗವು ಫ್ಯಾಕ್ಟರಿಯು ಲಾಭದಲ್ಲಿದ್ದರೂ, ಮುಚ್ಚಲು ಮುಂದಾದಾಗ, ಇನ್ನು ಐದು ವರ್ಷಗಳ ಕಾಲ ಫ್ಯಾಕ್ಟರಿಯನ್ನು ಮುಚ್ಚಬಾರದು, ಅದಕ್ಕೆ ಪ್ರತಿಯಾಗಿ ಕಾರ್ಮಿಕರು ಕಡಿಮೆ ವೇತನಕ್ಕೆ ಕೆಲಸಮಾಡುತ್ತಾರೆ ಮತ್ತು ತಮ್ಮ ಬೋನಸ್ಸನ್ನು ಬಿಟ್ಟುಕೊಡುತ್ತಾರೆ ಎಂಬ ಷರತ್ತಿಗೆ ಆಡಳಿತವರ್ಗವು ಒಪ್ಪಿರುತ್ತದೆ. ಆದರೆ ಷೇರುದಾರರಿಗೆ ಹೆಚ್ಚಿನ ಲಾಭಾಂಶವನ್ನು ಗಳಿಸಿಕೊಡುವುದಕ್ಕಾಗಿ ಕಾರ್ಮಿಕರೊಂದಿಗೆ ಆಗಿದ್ದ ಈ ಒಪ್ಪಂದವನ್ನು ಆಡಳಿತವರ್ಗವು ಉಲ್ಲಂಘಿಸುತ್ತದೆ. ಮತ್ತೆಲ್ಲಿಯೂ ಕೆಲಸ ಸಿಗುವ ಅವಕಾಶವಿಲ್ಲದೆ ಆಡಳಿತಾಧಿಕಾರಿಯನ್ನು ನೇರವಾಗಿ ಭೇಟಿಯಾಗಲು ಮುಷ್ಕರ ನಿರತರು ತಮ್ಮ ಪ್ರತಿನಿಧಿಯಾದ 'ಲಾರೆಂಟ್ ಅಮೆದೇವೋ' ರ ಮುಂದಾಳತ್ವದಲ್ಲಿ ಪಟ್ಟುಹಿಡಿಯುತ್ತಾರೆ. ಆದರೆ ಮಾಮೂಲಿನಂತೆ ಆಡಳಿತಾಧಿಕಾರಿಯು ಕಾರ್ಮಿಕರ ಪ್ರತಿಧಿಗಳನ್ನು ಭೇಟಿಯಾಗಲು ನಿರಾಕರಿಸುತ್ತಾನೆ. ಮಾಮೂಲಿನಂತೆ ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡು ಮಾತುಕತೆಗೆ ಬರಬಹುದೆಂದು ಆಡಳಿತಾಧಿಕಾರಿಯ ಪ್ರತಿನಿಧಿಗಳು ಸೂಚಿಸುತ್ತಾರೆ. ಕೊಟ್ಟ ಒಪ್ಪಂದವನ್ನು ಮುರಿಯುವ ಆಡಳಿತವರ್ಗದ ಜೊತೆ ಮತ್ತೊಂದು ಒಪ್ಪಂದವನ್ನು ಮಾಡಿಕೊಂಡರೂ ಅಷ್ಟೆ ಮಾಡಿಕೊಳ್ಳದಿದ್ದರೂ ಅಷ್ಟೆ ಎಂಬ ಸ್ಥಿತಿಯಲ್ಲಿ, ಕಾರ್ಮಿಕರು ಕಾರ್ಮಿಕ ನ್ಯಾಯಾಲಯದಲ್ಲಿ ಆಡಳಿತವರ್ಗದ ವಿರುದ್ಧ ದಾವೆ ಹೂಡುತ್ತಾರೆ. ಮಾಮೂಲಿನಂತೆ ಕಾರ್ಮಿಕರ ಬಗ್ಗೆ ಸಹಾನುಭೂತಿ ರುವಂತೆ ತೋರಿಸಿಕೊಳ್ಳುವ ಸರ್ಕಾರದ ಪ್ರತಿನಿಧಿಯೊಂದಿಗೆ ಮಾತುಕತೆ, ಪ್ರಜಾಪ್ರಭುತ್ವದಲ್ಲಿ ಮಾಲೀಕರಿಗೆ ಫ್ಯಾಕ್ಟರಿಯನ್ನು ತೆರೆಯುವ ಸ್ವಾತಂತ್ರ್ಯವಿರುವಂತೆ ಮುಚ್ಚುವ ಸ್ವಾತಂತ್ರ್ಯವೂ ಇದೆ ಎಂದು ಕೈ ಚೆಲ್ಲುವ ಸರ್ಕಾರದ ಅಪ್ರಾಮಾಣಿಕ ನಿಲುವು, ಎರಡೂ ಕಡೆಯ ವಕೀಲರು ಮತ್ತು ಪ್ರತಿನಿಧಿಗಳಿಂದ ಅಂಕಿ ಅಂಶಗಳ ಸಹಿತವಾದ ಬಿರುಸಿನ ವಾದ ವಿವಾದಗಳ ಮಂಡನೆ, ಎರಡೂ ಕಡೆಯವರ ಬಿಗಿ ನಿಲುವು ಎಲ್ಲಿಗೂ ಕೊಂಡೊಯ್ಯದಿದ್ದಾಗ ಮತ್ತೆ, ಆಡಳಿತಾಧಿಕಾರಿಯು ಕಾರ್ಮಿಕರ ಬಳಿ ಬಂದು ಮಾತನಾಡುವವರೆಗೂ ಅಲ್ಲಿಂದ ಕದಲುವುದಿಲ್ಲವೆಂದು ಫ್ಯಾಕ್ಟರಿಯ ಗೇಟಿನ ಬಳಿಯೇ ಅನಿರ್ದಿಷ್ಟಕಾಲದ ಧರಣಿ ಹೂಡುತ್ತಾರೆ. ನಿರೀಕ್ಷಿಸಬಹುದಾದಂತೆ ಪೋಲೀಸರ ಆಗಮನವಾಗುತ್ತದೆ.


ಕಾರ್ಮಿಕ ಪ್ರತಿನಿಧಿಗಳ ತರ್ಕಬದ್ಧ ವಾದ, ಕರಾರವಾಕ್ಕಾದ ಅಂಕಿ ಅಂಶಗಳು, ಕಾರ್ಮಿಕರ ಒಗ್ಗಟ್ಟು ಮತ್ತು ಐಕ್ಯತೆಗಳು, ಆಡಳಿತಾಧಿಕಾರಿಯ ಉಕ್ಕಿನಂಥ ನಿರ್ದಯ ನಿಲುವಿನ ಮುಂದೆ ಬಗೆಹರಿಯಬಹುದೆಂದು ಕಾದು ಕಾದು ಸೋತು ಪರಿಹಾರವನ್ನಾದರೂ ಒಪ್ಪಿಕೊಳ್ಳಬೇಕಾಗಿತ್ತೆಂಬ ಕೆಲವು ಕಾರ್ಮಿಕರ ನಿಲುವು, ಸರ್ಕಾರ–ನ್ಯಾಯಾಲಯದ ಅಪ್ರಾಮಾಣಿಕ ಅಸಹಾಯಕತೆ, ಪೋಲೀಸರ ಬಲಪ್ರಯೋಗ–ಇವೆಲ್ಲದರ ಪರಿಣಾಮವಾಗಿ, ಕಾರ್ಮಿಕ ಪ್ರತಿನಿಧಿ ಲಾರೆಂಟನ ಸಮರ್ಥ ಮುಂದಾಳತ್ವದ ಹೊರತಾಗಿಯೂ ಕಾರ್ಮಿಕರ ಹೋರಾಟವು ವಿಫಲವಾಗುತ್ತದೆ. ಹತಾಶೆ, ಅಸಹಾಯಕತೆ, ಕಾರ್ಮಿಕರಲ್ಲೇ ಪರಸ್ಪರ ದೂಷಣೆ ಇಡೀ ವಾತಾವರಣವನ್ನು ಆವರಿಸುತ್ತದೆ. ಆಳುವ ವರ್ಗಗಳು ಒಬ್ಬರ ಬೆನ್ನಿಗೊಬ್ಬರು ನಿಂತು ತೋರಿಸಿದ ಅನುಕರಣೀಯ ಐಕ್ಯತೆಯು ಕಾರ್ಮಿಕರಲ್ಲಿ ಇಲ್ಲದ್ದರಿಂದಲೇ ತಾವು ಸೋಲಬೇಕಾಯಿತೆಂಬ ಕಟುಸತ್ಯವನ್ನು ತನ್ನ ಸಹೋದ್ಯೋಗಿಗಳಿಗೆ ತಿಳಿಸಿದ ಲಾರೆಂಟ್ ಚಿತ್ರದ ಕೊನೆಯಲ್ಲಿ ಫ್ಯಾಕ್ಟರಿಯ ಮುಂದೆ ಬೆಂಕಿ ಹಚ್ಚಿಕೊಂಡು ಸಾಯುತ್ತಾನೆ. ಅವನ ಸಾವಿನಿಂದ ವಿಚಲಿತಗೊಂಡ ಆಡಳಿತವರ್ಗವು ಆಮೇಲೆ ಕಾರ್ಮಿಕರನ್ನು ಮಾತುಕತೆಗೆ ಕರೆಯಿತೆಂಬ ಸೂಚನೆಯೊಂದಿಗೆ ಚಿತ್ರವು ಮುಗಿಯುತ್ತದೆ.



'ಅಟ್ ವಾರ್' ಚಿತ್ರವು ಕಲ್ಪಿತ ಘಟನೆಗಳನ್ನು ಹೆಣೆದ ಚಿತ್ರವಾದರೂ, ಅದರ ಪ್ರಾರಂಭದಿಂದ ಕಡೆಯವರೆಗೂ ಎಲ್ಲೂ ಬಿಗಿ ಕಳೆದುಕೊಳ್ಳದಂತೆ ಹೆಣೆದಿರುವ ವಾದ–ಪ್ರತಿವಾದಗಳ ಪ್ರತಿಯೊಂದು ಮಾತೂ ಸಹ ಚಿತ್ರಕತೆಯ ರಚನೆಯ ಭಾಗವಾಗಿ, ಚಿತ್ರದಲ್ಲಿ ನಡೆಯುವ ದೊಂಬಿ–ಗಲಾಟೆ–ಗೊಂದಲಗಳ ಪ್ರತಿಯೊಂದು ಚಲನೆಯೂ ಪೂರ್ವಯೋಜಿತ ಚಿತ್ರಣವಾಗಿ, ಕೇಂದ್ರವ್ಯಕ್ತಿ–ಪರಿಧಿಯ ವ್ಯಕ್ತಿ ಎಂದು ಸಂದರ್ಭಾನುಸಾರ ಸ್ಪಷ್ಟವಾಗಿ ಬಿಡಿಸಿ ತೋರಿಸುವ ಪ್ರತಿ ದೃಶ್ಯವೂ ಬಹಳಷ್ಟು ಕಡೆ ಕೈಲಿ ಹಿಡಿದ ಕ್ಯಾಮರಾಗಳಿಂದ ಸೆರೆಹಿಡಿದು ಸಂಕಲಿಸಿದ್ದಾಗಿರುವುದರಿಂದ ಚಿತ್ರದ ದೃಶ್ಯಗಳಿಗೆ ನೈಜತೆ ಮತ್ತು ವಿಶ್ವಾಸಾರ್ಹತೆಯು ಸಿದ್ಧಿಸಿದೆ. ಹಳೆಯ ಡಬ್ಬಗಳನ್ನು ಲಯಬದ್ಧವಾಗಿ ಬಡಿದು ಹೊರಡಿಸುವ ಬರ್ಟ್ರಂಡ್ ಬ್ಲೆಸಿಂಗ್ ನ ಸಂಗೀತವು ಏರುತ್ತಾ ಹೋಗುವ ವಾದ–ವಿವಾದಗಳ ಲಯದೊಂದಿಗೆ ಸಮರ್ಥವಾಗಿ ಮೇಳೈಸಿದೆ. ಪ್ರಧಾನ ಪಾತ್ರವಾಗಿ ನಟಿಸಿರುವ ವಿನ್ಸೆಂಟ್ ಲಿಂಡನ್ ಚಿತ್ರನಟನಾಗಿ ಈಗಾಗಲೇ ತುಂಬಾ ದೊಡ್ಡ ಹೆಸರು ಮಾಡಿದಾತ. ಕೆಟ್ಟ ಚಿತ್ರಗಳಲ್ಲಿ ಪ್ರಸಿದ್ಧ ಚಿತ್ರನಟರು ಪಾತ್ರವನ್ನು ತಮ್ಮಲ್ಲೇ ಕರಗಿಸಿಕೊಂಡು ಸೂಪರ್ ನಟರಾಗಿ ಚಿತ್ರದಲ್ಲಿ ಕಾಣಿಸುತ್ತಾರೆ. ಆದರೆ ವಿನ್ಸೆಂಟ್ ಲಿಂಡನ್ ಪಾತ್ರದಲ್ಲಿ ಎಷ್ಟು ಲೀನವಾಗಿ ಹೋಗಿದ್ದಾರೆಂದರೆ ನಮ್ಮ ಮುಂದೆ ಕಾಣಿಸುವುದು ನಟನಲ್ಲ, ಕೇವಲ ಪಾತ್ರ ಎನ್ನಿಸುತ್ತದೆ.

ಚಿತ್ರದಲ್ಲಿ ಆಡಳಿತವರ್ಗ ಮತ್ತು ಕಾರ್ಮಿಕರ ನಡುವಿನ ಹಗರಣವನ್ನು ವರದಿ ಮಾಡಲು ಬಂದ ಟಿವಿ ಚಾನಲ್ ಗಳ ಸಿಬ್ಬಂದಿಯು ವಾದ ವಿವಾದಗಳನ್ನು ಸಂಗ್ರಹಿಸಲಾಗದೆ, ಸುದ್ದಿಯಾಗದೆ, ಟಿವಿಯ ಚೌಕಟ್ಟಿನಾಚೆಗೇ ಉಳಿದುಬಿಡುತ್ತವೆ. ಹೊರಗಿನ ಮಾರುಕಟ್ಟೆಯನ್ನು ನಡುಮನೆಯೊಳಕ್ಕೆ ತರಲೆಂದೇ ಟೀವಿಯ ಆವಿಷ್ಕಾರವಾಯಿತೆಂದು ಹೇಳುತ್ತಾರೆ. ಕಾರ್ಮಿಕರ ಮುಷ್ಕರಗಳು, ಚಳುವಳಿ–ಆಂದೋಲನಗಳು ನಡೆದಾಗ ಅವನ್ನು ಕೇವಲ ಒಂದು ಶುಷ್ಕ ಸುದ್ದಿಯ ತುಣುಕನ್ನಾಗಿ ಮಧ್ಯಮವರ್ಗೀಯರು ನೋಡುವ ಸಂಭವವೇ ಹೆಚ್ಚು. ದುಡಿಯುವ ಜನತೆಯಾಗಿ ತಮ್ಮ ಭಾಗವೇ ಆದ ಕಾರ್ಮಿಕರ ಬವಣೆಯು ತಮಗೆ ಸಂಬಂಧಿಸಿರದ ವಿದ್ಯಮಾನವೆಂದು ಭಾವಿಸಿ ತೆಪ್ಪಗಿರುವವರೇ ಅಧಿಕ. ಆದರೆ ಈ ಚಿತ್ರವು ಕಾರ್ಮಿಕ–ಮಾಲೀಕರ ನಡುವಿನ ವೈಷಮ್ಯವನ್ನು ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲು ಬರುವ ಮಧ್ಯಮವರ್ಗೀಯರ ನಡುಮನೆಗೇ ತಂದಿರಿಸುತ್ತದೆ. ಇದು ಈ ಚಿತ್ರದ ಮತ್ತೊಂದು ಹೆಗ್ಗಳಿಕೆ.

'At War' ಪ್ರಾರಂಭವಾಗುವುದು ಬ್ರೆಕ್ಟ್ ನ "He who fights, can lose. He who doesn't fight, has already lost." (ಹೋರಾಟದಲ್ಲಿ ತೊಡಗಿದವನು ಸೋಲಬಹುದು. ಆದರೆ ಹೋರಾಡದವನು ಆಗಲೇ ಸೋರಿರುತ್ತಾನೆ.) Ed Pickford ನ ಪ್ರಸಿದ್ಧ ಹಾಡು 'ದಿ ವರ್ಕರ್ಸ್ ಸಾಂಗ್' ನಲ್ಲಿ "We're the first ones to starve, the first ones to die…" (ನಾವು ಉಪವಾಸಕ್ಕೆ ಬೀಳುವವರಲ್ಲಿ ಮತ್ತು ಅದರಿಂದ ಸಾಯುವವರಲ್ಲಿ ಮೊದಲಿಗರು) ಎಂಬ ಸಾಲಿದೆ. ಆದರೆ, ವಾಸ್ತವವಾದೀ ಫ್ರೆಂಚ್ ಸಿನೆಮಾದ ಪರಿಚಯವಿದ್ದವರಿಗೆ 'ಅಟ್ ವಾರ್' ಚಿತ್ರವು ರೊಮ್ಯಾಂಟಿಕ್ ಆಶಾವಾದಿತನದ ಆಕಾಶದಲ್ಲಿ ಕನಸು ಕಾಣದೆ ಈ ವಾಸ್ತವದ ಗಟ್ಟಿನೆಲದಲ್ಲಿ ಕಾಲುಗಳನ್ನು ಊರಿ ಬಂಡವಾಳದ ಹೃದಯಹೀನ ಉಕ್ಕಿನ ವಾಸ್ತವವನ್ನು ಶ್ರಮಿಕರ ಐಕ್ಯತೆಯ ವಜ್ರದಿಂದ ಎದುರಿಸಬೇಕೆಂದು ಹೇಳುತ್ತದೆಯೇ ಹೊರತು ನಿರಾಸೆ–ಹತಾಶೆಗಳ ಸಂದೇಶವನ್ನಲ್ಲ. ●



ಮೋದಿ–ಷಾ ಜೋಡಿಯ ಸುತ್ತ ಕಟ್ಟಿದ್ದ ಪ್ರಭೆಯನ್ನು ಮಂಕುಗೊಳಿಸಿರುವ ಬಿಜೆಪಿ ಚುನಾವಣಾ ಹಿನ್ನಡೆ

2014ರ ಲೋಕಸಭೆ ಚುನಾವಣೆಗಳ ನಂತರ ಇದುವರೆಗೆ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಅತಿ ದೊಡ್ಡ ಹಿನ್ನಡೆ ಅನುಭವಿಸಿದೆ. ಸೋಲಿಲ್ಲದ ಸರದಾರರು ಎಂದು ನರೇಂದ್ರ ಮೋದಿ–ಅಮಿತ್ ಷಾ ಜೋಡಿಯ ಸುತ್ತ ಬಿಜೆಪಿ ತತ್ಪರತೆಯಿಂದ ಕಟ್ಟಿದ್ದ ಪ್ರಭೆ ಮಂಕಾಗಿದೆ.

ಆದರೂ ಜನರಲ್ಲಿರುವ ಅತೃಪ್ತಿ ಮತ್ತು ಆಡಳಿತ–ವಿರೋಧಿ ಮನೋಭಾವವನ್ನು ಗಮನಿಸಿದರೆ ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಇನ್ನೂ ನಿರ್ಣಾಯಕವಾಗಿ ಬಹುಮತವನ್ನು ಗಳಿಸಬೇಕಿತ್ತು. ಅದು ಯಾಕೆ ಸಾಧ್ಯವಾಗಲಿಲ್ಲ ಎನ್ನುವುದನ್ನು ಪರಿಶೀಲಿಸಬೇಕು. ರಾಷ್ಟ್ರ ಮಟ್ಟದಲ್ಲಿ ತನ್ನ ಭಾಗ್ಯದ ಬಾಗಿಲು ತೆರೆಯಲು ಕಾಂಗ್ರೆಸ್‌ನ ಮುಂದೆ ಇನ್ನೂ ಕಠಿಣ ಸವಾಲು ಇದೆ ಎಂಬುದನ್ನು ತೆಲಂಗಾಣ ಮತ್ತು ಮಿಜೋರಂ ಫಲಿತಾಂಶಗಳು ತೋರಿಸಿಕೊಟ್ಟಿವೆ.




* ಪ್ರಕಾಶ್ ಕಾರಟ್

ಮಧ್ಯ ಪ್ರದೇಶ, ಛತ್ತೀಸ್‌ಗಢ ಮತ್ತು ರಾಜಸ್ಥಾನ ವಿಧಾನಸಭೆ ಚುನಾವಣೆ ಫಲಿತಾಂಶಗಳಿಂದ ಭಾರತೀಯ ಜನತಾ ಪಕ್ಷಕ್ಕೆ ಮರ್ಮಾಘಾತವಾಗಿದೆ. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಅದರಲ್ಲೂ ಮಧ್ಯ ಪ್ರದೇಶ ಮತ್ತು ಛತ್ತೀಸ್‌ಗಢಗಳಲ್ಲಿ 15 ವರ್ಷಗಳಿಂದ ಅಂದರೆ ಸತತ ಮೂರು ಅವಧಿಗಳಿಂದ ಬಿಜೆಪಿ ಅಧಿಕಾರಾರೂಢವಾಗಿತ್ತು. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಪರಾಭವಗೊಂಡಿದೆ.

ಈ ಮೂರು ಬಿಜೆಪಿ ಆಡಳಿತದ ರಾಜ್ಯಗಳ ಚುನಾವಣೆ ಫಲಿತಾಂಶಗಳು ರಾಷ್ಟ್ರೀಯ ಮಹತ್ವವನ್ನು ಹೊಂದಿವೆ. 2014ರ ಲೋಕಸಭೆ ಚುನಾವಣೆಗಳ ನಂತರ ಇದುವರೆಗೆ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಅನುಭವಿಸಿದ ದೊಡ್ಡ ಹಿನ್ನಡೆ ಇದಾಗಿದೆ. ಯಾಕೆಂದರೆ ಈ ಮೂರು ರಾಜ್ಯಗಳೂ ಬಿಜೆಪಿಯ ಭದ್ರ ಕೋಟೆ ಎಂದೇ ಪರಿಗಣಿಸಲಾಗಿತ್ತು. ಸೋಲಿಲ್ಲದ ಸರದಾರರು ಎಂದು ನರೇಂದ್ರ ಮೋದಿ–ಅಮಿತ್ ಷಾ ಜೋಡಿಯ ಸುತ್ತ ಬಿಜೆಪಿ ತತ್ಪರತೆಯಿಂದ ಕಟ್ಟಿದ್ದ ಪ್ರಭೆ ಮಂಕಾಗಿದೆ. 2014ರ ಲೋಕಸಭೆ ಚುನಾವಣೆಗಳ ನಂತರ ನಡೆದ ಮಹಾರಾಷ್ಟ್ರ, ಹರ್ಯಾಣ, ಜಾರ್ಖಂಡ್ ಮತ್ತು ಅಸ್ಸಾಂ ವಿಧಾನ ಸಭೆ ಚುನಾವಣೆಗಳಲ್ಲಿ ಬಿಜೆಪಿ ಗೆಲುವಿಗೆ ಈ ಜೋಡಿಯೇ ಕಾರಣ ಎಂದು ಅವರಿಬ್ಬರಿಗೆ ಶ್ರೇಯ ನೀಡಲಾಗಿತ್ತು. ಆದರೆ ಇದೀಗ ತಮ್ಮ ಭದ್ರಕೋಟೆಯಲ್ಲೇ ಅವರು ಪರಿಣಾಮಕಾರಿ ಅಲ್ಲ ಎಂಬುದು ಸಾಬೀತಾಗಿದೆ.

ಲೋಕಸಭೆ ಮತ್ತು ವಿಧಾನ ಸಭೆಯ ಹಲವು ಸ್ಥಾನಗಳಿಗೆ ನಡೆದ ಉಪಚುನಾವಣೆಗಳಲ್ಲಿ ಸರಣಿ ಸೋಲು ಅನುಭವಿಸಿದ ನಂತರ ಬಜೆಪಿ ಈ ಹಿನ್ನಡೆಯನ್ನು ಕಂಡಿದೆ. 2018ರ ಜನವರಿ ನಂತರ ಲೋಕಸಭೆಯ 13 ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿದೆ. ಅದರಲ್ಲಿ ಬಿಜೆಪಿ ಮತ್ತದರ ಮಿತ್ರ ಪಕ್ಷಗಳು ಜಯ ಗಳಿಸಿದ್ದು ಮೂರು ಕ್ಷೇತ್ರಗಳಲ್ಲಿ ಮಾತ್ರ. ವಾಸ್ತವವಾಗಿ ಬಿಜೆಪಿ ಹಿಂದೆ ಇದ್ದ ಐದು ಸ್ಥಾನಗಳನ್ನು ಈ ಉಪ ಚುನಾವಣೆಗಳಲ್ಲಿ ಕಳೆದುಕೊಂಡಿದ್ದು ಅವು ಪ್ರತಿಪಕ್ಷಗಳ ಪಾಲಾಗಿವೆ. ವಿಧಾನಸಭೆಗಳ 22 ಸ್ಥಾನಗಳಿಗೆ ನಡೆದ ಉಪ ಚುನಾವಣೆಗಳಲ್ಲಿ ಬಿಜೆಪಿ ಕೇವಲ ಐದರಲ್ಲಿ ಗೆದ್ದಿದೆ. ಕಳೆದ ಒಂದು ವರ್ಷದಲ್ಲಿ ಪ್ರಕಟವಾದ ಈ ಫಲಿತಾಂಶಗಳು ಕೇಂದ್ರ ಸರಕಾರ ಮತ್ತು ಬಿಜೆಪಿ ಆಡಳಿತದ ರಾಜ್ಯ ಸರಕಾರಗಳ ವಿರುದ್ಧ ಜನಗಳ ನಡುವೆ ಬೆಳೆಯುತ್ತಿರುವ ಅತೃಪ್ತಿಯ ಪ್ರತಿಫಲನವಾಗಿದೆ.

ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು



ವ್ಯಾಪಕ ರೈತರ ಸಂಕಟಗಳು, ಅನಾಣ್ಯೀಕರಣದ ಪ್ರತಿಕೂಲ ಪರಿಣಾಮಗಳು, ಉದ್ಯೋಗ ಸೃಷ್ಟಿಸುವಲ್ಲಿನ ವೈಫಲ್ಯ, ಭ್ರಷ್ಟಾಚಾರ ಮತ್ತು ದುರಾಡಳಿತ– ಇವೆಲ್ಲ ಬಿಜೆಪಿಗೆ ಮುಳುವಾಗಿ ಪರಿಣಮಿಸಿದವು.

ತನ್ನ ವಿರುದ್ಧ ಅತೃಪ್ತಿ ಮಡುಗಟ್ಟುತ್ತಿರುವುದರ ವಾಸನೆ ಕಂಡುಹಿಡಿದ ಬಿಜೆಪಿ–ಆರ್‌ಎಸ್‌ಎಸ್ ಕೂಟ ಕೋಮುವಾದಿ ಹಿಂದುತ್ವ ಅಜೆಂಡಾದ ಮೊರೆ ಹೊಕ್ಕಿತ್ತು. ಜನರನ್ನು ಧ್ರುವೀಕರಿಸಿ ಬೆಂಬಲವನ್ನು ಕ್ರೋಡೀಕರಿಸುವುದು ಅದರ ಉದ್ದೇಶವಾಗಿತ್ತು. ಈ ಮೂರೂ ರಾಜ್ಯಗಳ ಚುನಾವಣೆ ಪ್ರಚಾರಗಳಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥರನ್ನು ವ್ಯಾಪಕವಾಗಿ ಬಳಸಲಾಯಿತು. ಅಲ್ಲೆಲ್ಲಾ ಅವರು ನಗ್ನ ಕೋಮುವಾದಿ ಹಾಗೂ ಮುಸ್ಲಿಂ–ವಿರೋಧಿ ಭಾಷಣಗಳನ್ನು ಮಾಡಿದರು. ಆದರೆ ಆಡಳಿತ–ವಿರೋಧಿ ಅಲೆ ಮತ್ತು ಜನಸಮೂಹದ ಅತೃಪ್ತಿಯನ್ನು ಎದುರಿಸಲು ಈ ತಂತ್ರ ಯಶಸ್ವಿಯಾಗಲಿಲ್ಲ.

ಈ ಮೂರು ರಾಜ್ಯಗಳ ಚುನಾವಣೆ ಫಲಿತಾಂಶಗಳು ಮುಂಬರುವ ಲೋಕಸಭೆ ಚುನಾವಣೆಗಳ ಮೇಲೆ ಪರಿಣಾಮ ಬೀರಲಿವೆ. ವಿಧಾನಸಭೆ ಚುನಾವಣೆಗಳಲ್ಲಿ ಉತ್ತಮ ಫಲ ಪಡೆದ ಪಕ್ಷಗಳು ಆರು ತಿಂಗಳ ನಂತರ ಆ ರಾಜ್ಯಗಳಲ್ಲಿ ಲೋಕಸಭೆ ಚುನಾವಣೆ ನಡೆದರೆ ಅಲ್ಲಿಯೂ ಒಳ್ಳೆಯ ಫಲಿತಾಂಶ ಪಡೆಯುತ್ತವೆ ಎನ್ನುವುದು ಸಾಮಾನ್ಯ ಪ್ರವೃತ್ತಿ. ಈ ಮೂರು ರಾಜ್ಯಗಳ 65 ಲೋಕಸಭೆ ಸ್ಥಾನಗಳ ಪೈಕಿ 62 ಕ್ಷೇತ್ರಗಳನ್ನು 2014 ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಗೆದ್ದಿತ್ತು. ಈಗಿನ ವಿಧಾನಸಭೆ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ ಬಿಜೆಪಿ ಈ ಸ್ಥಾನಗಳಲ್ಲಿ ಗಣನೀಯ ಪ್ರಮಾಣದ ಸ್ಥಾನಗಳನ್ನು ಕಳೆದುಕೊಳ್ಳಲಿದೆ. ಇಲ್ಲಿ ಕಳೆದುಕೊಂಡ ಸ್ಥಾನಗಳನ್ನು ಬೇರೆ ರಾಜ್ಯಗಳಲ್ಲಿ ಸರಿದೂಗಿಸಿಕೊಳ್ಳುವುದು ಅದಕ್ಕೆ ಕಷ್ಟವಾಗಲಿದೆ. ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮೈತ್ರಿ ಮಾಡಿಕೊಳ್ಳಲಿರುವುದರಿಂದ ಉತ್ತರ ಪ್ರದೇಶದಲ್ಲಂತೂ ಬಿಜೆಪಿ ಹೆಚ್ಚಿನ ಸ್ಥಾನ ಕಳೆದುಕೊಳ್ಳುವ ನಿರೀಕ್ಷೆಯಿರುವುದರಿಂದ ಇದು ಕಷ್ಟವೇ.

ಈ ಮೂರು ರಾಜ್ಯಗಳಲ್ಲಿ ಯಾವತ್ತೂ ಸ್ಪರ್ಧೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆಯೇ ಇರುತ್ತಿತ್ತು. ಹೀಗಾಗಿ, ಬಿಜೆಪಿಯನ್ನು ಅಧಿಕಾರಚ್ಯುತ ಮಾಡಬೇಕೆಂದು ಜನರು ನಿರ್ಧರಿಸಿದಾಗ ಲಾಭವಾಗುವುದು ಸಹಜವಾಗಿ ಕಾಂಗ್ರೆಸ್‌ಗೇ. ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಭರ್ಜರಿ ಜಯಗಳಿಸಿದ್ದು ರಾಜಸ್ಥಾನದಲ್ಲಿ ಸರಳ ಬಹುಮತಕ್ಕೆ ಕೇವಲ ಒಂದು ಸ್ಥಾನದಿಂದ ವಂಚಿತವಾಗಿದೆ. ಮಧ್ಯಪ್ರದೇಶದಲ್ಲಿ ಎರಡು ಸ್ಥಾನಗಳು ಕಡಿಮೆ ಬಿದ್ದಿವೆ.

ಜನರಲ್ಲಿರುವ ಅತೃಪ್ತಿ ಮತ್ತು ಆಡಳಿತ–ವಿರೋಧಿ ಮನೋಭಾವವನ್ನು ಗಮನಿಸಿದರೆ ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಇನ್ನೂ ನಿರ್ಣಾಯಕವಾಗಿ ಬಹುಮತವನ್ನು ಗಳಿಸಬೇಕಿತ್ತು. ಅದು ಯಾಕೆ ಸಾಧ್ಯವಾಗಲಿಲ್ಲ ಎನ್ನುವುದನ್ನು ಪರಿಶೀಲಿಸಬೇಕು. ಈ ಎರಡೂ ರಾಜ್ಯಗಳಲ್ಲಿ ಹಿಂದುತ್ವ ವೇದಿಕೆಯಿಂದ ಕೆಲವು ಅಂಶಗಳನ್ನು ಎರವಲು ತರಲು ಕಾಂಗ್ರೆಸ್ ಪ್ರಯತ್ನಿಸಿದ್ದು ಒಂದು ಸಂಗತಿಯಾಗಿದೆ. ಆದರೆ ಇಂಥ ಬೇಡಿಕೆಗಳಿಂದ ಕಾಂಗ್ರೆಸ್‌ಗೆ ಯಾವುದೇ ರಾಜಕೀಯ ಲಾಭವೂ ಆಗಲಿಲ್ಲ. ಯಾಕೆಂದರೆ ಹಿಂದುತ್ವ ವೇದಿಕೆಯಿಂದ ಆಕರ್ಷಿತರಾದವರು ಯಾವಾಗಲೂ ಅದರ ಮೂಲ ಪ್ರತಿಪಾದಕರಿಗೆ ಆದ್ಯತೆ ನೀಡುತ್ತಾರೆಯೇ ಹೊರತು ಮಕ್ಕಿ ಕಾ ಮಕ್ಕಿಗೆ ಅಲ್ಲ.

ಜನರು ಕಾಂಗ್ರೆಸ್‌ಗೆ ಮತ ನೀಡಿದ್ದು ಯಾಕೆಂದರೆ ಅವರು ರೈತರ ಸಮಸ್ಯೆಗಳನ್ನು ಪರಹರಿಸಲು ವಿಫಲವಾದ, ಉದ್ಯೋಗಸೃಷ್ಟಿಗೆ ವಿಫಲವಾದ ಮತ್ತು ಜೀವನೋಪಾಯ ಗಳನ್ನು ರಕ್ಷಿಸಲು ವಿಫಲವಾದ ಬಿಜೆಪಿ ಸರಕಾರಗಳನ್ನು ಶಿಕ್ಷಿಸಬಯಸಿದ್ದರು.

ಬಿಜೆಪಿ ರಾಜ್ಯ ಸರಕಾರಗಳ ದುರಾಡಳಿತದಿಂದ ಮಾತ್ರವೇ ಜನರಲ್ಲಿ ಅತೃಪ್ತಿ ಉಂಟಾಗಿರುವುದಲ್ಲ. ಇದು ಮೋದಿ ಸರಕಾರದ ನೀತಿಗಳ ವಿರುದ್ಧದ ತೀರ್ಪು ಕೂಡ ಹೌದು. ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿ ಜಾರಿಯಿಂದ ತಮ್ಮ ಮೇಲೆ ಹೇರಲಾದ ಸಂಕಷ್ಟಗಳ ಮೂಟೆಗಳ ವಿರುದ್ಧ ಜನರಲ್ಲಿ ಮಡುಗಟ್ಟಿದ ಆಕ್ರೋಶ ಒಂದು ದೊಡ್ಡ ಕಾರಣವಾಗಿದೆ. ಕೆಲವು ನಗರ ಪ್ರದೇಶಗಳಲ್ಲಿ ಕೂಡ ಬಿಜೆಪಿ ಸೋಲು ಕಂಡಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಇಷ್ಟು ಮಾತ್ರವಲ್ಲದೆ, ಕೇಂದ್ರ ಸರಕಾರದ ಕುಮ್ಮಕ್ಕಿನ ಮೇರೆಗೆ ರಾಜಸ್ಥಾನ ಮತ್ತು ಮಧ್ಯ ಪ್ರದೇಶ ಸರಕಾರಗಳು ಕಾರ್ಮಿಕ–ವಿರೋಧಿ ಕಾನೂನಗಳನ್ನು ತಂದಿದ್ದವು ಮತ್ತು ಭೂ–ಸ್ವಾಧೀನ ಕಾನೂನನ್ನು ದುರ್ಬಲಗೊಳಿಸಿದ್ದವು. ಸಾರ್ವಜನಿಕ ವಿತರಣೆ ವ್ಯವಸ್ಥೆ ಮತ್ತು ಪ್ರಾಥಮಿಕ ಆರೋಗ್ಯ ಸೇವೆಯನ್ನು ಖಾಸಗೀಕರಿಸುವಲ್ಲಿ ರಾಜಸ್ಥಾನ ಮುಂಚೂಣಿಯಲ್ಲಿತ್ತು.

2013ರ ಅಸೆಂಬ್ಲಿ ಚುನಾವಣೆಗಳಿಗೆ ಹೋಲಿಸಿದರೆ ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಬಜೆಪಿ ಓಟು ಗಳಿಕೆ ಪ್ರಮಾಣದಲ್ಲಿ ಇಳಿಕೆ ಕಂಡು ಬಂದರೂ ಅದು ಗಣನೀಯ ಪ್ರಮಾಣದಲ್ಲಿ ಮತಗಳನ್ನು ಗಳಿಸಿದೆ ಎನ್ನುವುದನ್ನು ಗಮನಿಸಬೇಕು. ಮಧ್ಯಪ್ರದೇಶದಲ್ಲಿ 41 ಶೇಕಡಾ ಹಾಗೂ ರಾಜಸ್ತಾನದಲ್ಲಿ 38.8 ಶೇಕಡಾ ಮತಗಳನ್ನು ಅದು ಪಡೆದಿದೆ. ಹಾಗೆ ನೋಡಿದರೆ ಅದು ಮಧ್ಯ ಪ್ರದೇಶದಲ್ಲಿ ಕಾಂಗ್ರೆಸ್‌ಗಿಂತ 0.1 ಶೇಕಡಾ ಮುಂದಿದೆ ಹಾಗೂ ರಾಜಸ್ಥಾನದಲ್ಲಿ ಕಾಂಗ್ರೆಸಿಗಿಂತ ಕೇವಲ 0.5 ಶೇಕಡಾ ಕಡಿಮೆ ಪಡೆದಿದೆಯಷ್ಟೇ.

ಮತದಾರರ ಒಲವಿನಲ್ಲಿ ಸ್ವಲ್ಪ ಏರುಪೇರಾದರೂ ಬಿಜೆಪಿಗೆ ಮರಳಿ ಎದ್ದು ನಿಲ್ಲಲು ಅವಕಾಶವಿದೆ ಎಂಬುದನ್ನು ಇದು ತೋರಿಸುತ್ತದೆ. ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ–ಆರ್‌ಎಸ್‌ಎಸ್ ಕೂಟ ಕೋಮುವಾದಿ ಕಾರ್ಯಸೂಚಿಯನ್ನು ಇನ್ನಷ್ಟು ಬಿರುಸಿನಿಂದ ಮುಂದೊತ್ತಲಿದೆ ಎಂಬುದರ ಸೂಚನೆಯೂ ಇದಾಗಿದೆ.

ಆದ್ದರಿಂದ, ಕೃಷಿ ಬಿಕ್ಕಟ್ಟು ಪರಿಹಾರ, ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಒದಗಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳುವುದು ಹೊಸ ಸರಕಾರಗಳ ಆದ್ಯತೆಯ ಕಾರ್ಯಭಾರ ಆಗಬೇಕು. ಕೋಮುವಾದಿ ಚಟುವಟಿಕೆಗಳ ಬಗ್ಗೆ ಅವುಗಳು ಮೆದು ಧೋರಣೆ ತಳೆಯಬಾರದು ಹಾಗೂ ಸ್ವಯಂಘೋಷಿತ ಗೋರಕ್ಷಕರೆಂಬವರ ಕಾವಲುಕೋರತನ ಮತ್ತು ಜನಜಂಗುಳಿ ಸಾಯಬಡಿಯುವ ಪ್ರವೃತ್ತಿಯ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ರಾಷ್ಟ್ರ ಮಟ್ಟದಲ್ಲಿ ತನ್ನ ಭಾಗ್ಯದ ಬಾಗಿಲು ತೆರೆಯಲು ಕಾಂಗ್ರೆಸ್‌ನ ಮುಂದೆ ಇನ್ನೂ ಕಠಿಣ ಸವಾಲು ಇದೆ ಎಂಬುದನ್ನು ತೆಲಂಗಾಣ ಮತ್ತು ಮಿಜೋರಂ ಫಲಿತಾಂಶಗಳು ತೋರಿಸಿಕೊಟ್ಟಿವೆ. ತೆಲಂಗಾಣದಲ್ಲಿ ಹೀನಾಯವಾಗಿ ಸೋತಿರುವ ಕಾಂಗ್ರೆಸ್ ಮಿಜೋರಂನಲ್ಲಿ ಇದ್ದ ಈಶಾನ್ಯ ಭಾರತದ ಏಕೈಕ ಸರಕಾರವನ್ನು ಕಳೆದುಕೊಂಡಿದೆ.

ಸಿಪಿಐ (ಎಂ) ಮತ್ತು ಎಡಪಕ್ಷಗಳಿಗೆ ಸಿಕ್ಕ ಸಕಾರಾತ್ಮಕ ಫಲಿತಾಂಶವೆಂದರೆ ರಾಜಸ್ಥಾನದಲ್ಲಿ ಸಿಪಿಐ (ಎಂ) ಎರಡು ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿರುವುದು ಮಾತ್ರ. ಅದು ರಾಜ್ಯದಲ್ಲಿ ನಿರಂತರವಾಗಿ ನಡೆಸಿದ ರೈತ ಹೋರಾಟಗಳ ಫಲಿತಾಂಶವಾಗಿದೆ.


ಒಟ್ಟಾರೆಯಾಗಿ ಹೇಳುವುದಾದರೆ, ವಿಧಾನಸಭೆ ಚುನಾವಣೆಗಳ ಫಲಿತಾಂಶಗಳು ಬಿಜೆಪಿಗೆ ಮತ್ತು ನರೇಂದ್ರ ಮೋದಿ ಹಾಗೂ ಅಮಿತ್ ಷಾ ನಾಯಕತ್ವಕ್ಕೆ ಆದ ಹಿನ್ನಡೆಯಾಗಿದೆ. ಇದು ಮುಂದಿನ ಲೋಕಸಭೆ ಚುನಾವಣೆಗಳ ಸಮರದಲ್ಲಿ ಬಿಜೆಪಿಯನ್ನು ಸೋಲಿಸಲು ಬೇಕಾದ ಹುರುಪು ಹಾಗೂ ಆವೇಗವನ್ನು ನೀಡಲಿದೆ.

ಅನು: ವಿಶ್ವ

ಮೂರು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಬಿಜೆಪಿಯ ಮತಗಳಿಕೆಯ ಶೇಕಡಾ ಪ್ರಮಾಣ
2013 ಮತ್ತು 2018ರ ವಿಧಾನಸಭಾ ಚುನಾವಣೆಗಳು ಮತ್ತು 2014ರ ಲೋಕಸಭಾ ಚುನಾವಣೆ

ರಾಜ್ಯ	2018	2013	2014	2013 ರಿಂದ 2018 ಇಳಿಕೆಯ ಪ್ರಮಾಣ	2014 ರಿಂದ 2018 ಇಳಿಕೆಯ ಪ್ರಮಾಣ
ಮಧ್ಯಪ್ರದೇಶ	41%	44.9%	55%	–3.88%	–14%
ಛತ್ತೀಸ್‌ಗಡ	33%	41%	48.70%	–8%	–15.70%
ರಾಜಸ್ಥಾನ	38.80%	45.20%	50.90%	–6.40%	–12.10%

ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ನಂತರ...



ಬಹುನಿರೀಕ್ಷಿತ ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶಗಳು ಬಂದಿವೆ. ಕೇಂದ್ರದಲ್ಲಿ ಆಳುತ್ತಿರುವ, ಇನ್ನೂ 50 ವರ್ಷ ಆಳುವುದಾಗಿ ಹೇಳಿಕೊಂಡಿರುವ ಭಾರತೀಯ ಜನತಾ ಪಾರ್ಟಿ ತನ್ನ ಭದ್ರನೆಲೆಗಳೆನಿಸಿಕೊಂಡಿದ್ದ ಮೂರು ರಾಜ್ಯಗಳಲ್ಲಿ ಅಧಿಕಾರ ಕಳಕೊಂಡಿದೆ. ಈಶಾನ್ಯ ಭಾರತವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವ ಅದರ ಕನಸು ಭಗ್ನಗೊಂಡಿದೆ. ಅದರ ರಾಜ್ಯ ಅಧ್ಯಕ್ಷರೂ ಸೇರಿದಂತೆ ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ಪ್ರವೇಶ ಇಲ್ಲ ಎಂದು ತೆಲಂಗಾಣದ ಮತದಾರರೂ ಸಾರಿ ಹೇಳಿದ್ದಾರೆ. ಅದರ ಸೀಟುಗಳ ಸಂಖ್ಯೆ 5 ರಿಂದ 1ಕ್ಕೆ ಇಳಿದಿದೆ.

ಹಿಂದಿ ಭಾಷಿಕ ರಾಜ್ಯಗಳಲ್ಲಿ, ಅದರಲ್ಲೂ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದಲ್ಲಿ ರೈತರ ಹೋರಾಟಗಳ ಅಲೆಯ ಪ್ರಭಾವ ಈ ಚುನಾವಣೆಗಳಲ್ಲೂ ಕಂಡಿದೆ. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಕಳಕೊಳ್ಳುವಲ್ಲಿ ರೈತರ ಹೋರಾಟಗಳ ಪಾತ್ರವನ್ನು ಬೂರ್ಜ್ವಾ ರಾಜಕೀಯ ವೀಕ್ಷಕರೂ ಒಪ್ಪಿಕೊಳ್ಳಬೇಕಾಗಿ ಬಂದಿದೆ. ಸಿಪಿಐ(ಎಂ) ಮುಖಂಡರ ನೇತೃತ್ವದಲ್ಲಿ ವ್ಯಾಪಕ ರೈತ ಹೋರಾಟಗಳನ್ನು ಕಂಡ ರಾಜಸ್ಥಾನದಲ್ಲಿ ಇಬ್ಬರು ರೈತ ಮುಖಂಡರು ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಜನಗಳ ಆಕ್ರೋಶದ ಪ್ರತಿಫಲನ, ಪ್ರತಿಪಕ್ಷಗಳಿಗೂ ಪಾಟ–ಸೀತಾರಾಮ್ ಯೆಚುರಿ


ಈ ಚುನಾವಣಾ ಫಲಿತಾಂಶಗಳು ಪ್ರತಿಪಕ್ಷಗಳಲ್ಲಿ ಮತ್ತೆ ಸ್ಥೈರ್ಯ ತುಂಬಿವೆ, ಮೇ 2019ರ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸುವಲ್ಲಿ ಹೊಸ ಹುರುಪು ತುಂಬಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಆದರೆ ದೇಶದ ಒಬ್ಬ ಪ್ರಮುಖ ಪ್ರತಿಪಕ್ಷದ ನಾಯಕರಾದ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಇದನ್ನು ತಾನು ಸ್ಥೈರ್ಯವನ್ನು ತುಂಬುವ ಫಲಿತಾಂಶ ಎಂಬುದಕ್ಕಿಂತ ಹೆಚ್ಚಾಗಿ, ಪ್ರತಿಪಕ್ಷಗಳಿಗೆ ಒಂದು ಪಾಟ ಎಂದು ಕಾಣುತ್ತೇನೆ ಎಂದು ಡೆಕ್ಕನ್ ಹೆರಾಲ್ಡ್‌ನ ಪತ್ರಕರ್ತ ಶೆಮಿನ್ ಜಾಯ್ ರವರ ಪ್ರಶ್ನೆಗಳಿಗೆ ಉತ್ತರಿಸುತ್ತ ಹೇಳಿದ್ದಾರೆ. ಆ ಸಂದರ್ಶನದ ಭಾಗಗಳನ್ನು ಇಲ್ಲಿ ಕೊಡಲಾಗಿದೆ:

ವಿಧಾನಸಭಾ ಫಲಿತಾಂಶಗಳನ್ನು ನೀವು ಹೇಗೆ ಗ್ರಹಿಸುತ್ತೀರಿ?

ಇದು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಧೋರಣೆಗಳಿಂದಾಗಿ ತಮ್ಮ ಬದುಕು ನಾಶವಾಗುತ್ತಿರುವುದರ ಬಗ್ಗೆ ಜನಗಳ ಹೆಚ್ಚುತ್ತಿರುವ ಸಿಟ್ಟು ಮತ್ತು ಅಸಂತೃಪ್ತಿಯ ಪ್ರತಿಫಲನ. ರೈತರು, ಯುವಜನರು, ಮಹಿಳೆಯರು, ಕಾರ್ಮಿಕರಿಗೆ ಪರಿಹಾರಗಳನ್ನು ಒದಗಿಸುವ ಬದಲು, ಬಿಜೆಪಿ ಆಳ್ವಿಕೆಯಲ್ಲಿ ದೇಶದ ಸಂಪನ್ಮೂಲಗಳು ಲೂಟಿ ಆಗುತ್ತಿರುವುದನ್ನು ಕಾಣುತ್ತಿದ್ದಾರೆ. ಜನಗಳ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವ ಬದಲು, ಬಿಜೆಪಿ–ಆರೆಸ್ಸೆಸ್ ಕೋಮುವಾದಿ ಧ್ರುವೀಕರಣವನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ., ಮತ್ತು ಹಿಂದುತ್ವ–ಕೋಮುವಾದಿ ವೋಟ್‌ಬ್ಯಾಂಕನ್ನು ಕ್ರೋಡೀಕರಿಸಲು ಮುಸ್ಲಿಮರು ಮತ್ತು ದಲಿತರ ಮೇಲೆ ದಾಳಿಗಳು ಹೆಚ್ಚುತ್ತಿವೆ. ಜನಗಳು ಇದನ್ನು ಸ್ವೀಕರಿಸುತ್ತಿಲ್ಲ. ಈ ಮೂರು ಅಂಶಗಳನ್ನು ಒಟ್ಟು ಸೇರಿಸಿ, ಈ ರಾಜ್ಯಗಳಲ್ಲಿ ಬರುವ ಹೊಸ ಸರಕಾರಗಳ ಮುಂದಿರುವ ಕಾರ್ಯಭಾರ ಎಂದರೆ ಜನಗಳ ಆತಂಕಗಳನ್ನು ಪರಿಶೀಲಿಸುವ, ಅವರಿಗೆ ಪರಿಹಾರ ಒದಗಿಸುವ ದಿಕ್ಕಿನಲ್ಲಿ ಧೋರಣೆಗಳನ್ನು ಬದಲಾಯಿಸುವುದು.

ಪ್ರತಿಪಕ್ಷಗಳ ಐಕ್ಯತೆ ರೂಪುಗೊಳ್ಳುತ್ತಿದೆ. ಲೋಕಸಭಾ ಚುನಾವಣೆಗಳ ಮುನ್ನ ನೀವು ಕಲಿತಿರುವ ಪಾಟಗಳೇನು?

ಸ್ಪಷ್ಟವಾಗಿ, ಜನಗಳ ನಡುವೆ ಅಸಂತೃಪ್ತಿ ಇದೆ ಎಂದು ಫಲಿತಾಂಶಗಳು ನಮಗೆ ಹೇಳುತ್ತಿವೆ. ಇವು ಪ್ರತಿಪಕ್ಷಗಳು ಹೆಕ್ಕಿಕೊಳ್ಳಬೇಕಾದ ಪ್ರಶ್ನೆಗಳು. ಆದ್ದರಿಂದ ಜನಪರ ಧೋರಣೆಗಳ ಮೇಲೆ ಒತ್ತು ಇರಬೇಕಾಗಿದೆ. ಇದಕ್ಕೇ ಜನಗಳು ಸ್ಪಂದಿಸುತ್ತಾರೆ.



ರಾಜಸ್ಥಾನ ಮತ್ತು ಮಧ್ಯಪ್ರದೇಶ ಕೃಷಿ ಸಂಕಟವನ್ನು ಕಂಡಿವೆ. ಆದರೂ, ಫಲಿತಾಂಶಗಳಲ್ಲಿ ತೀವ್ರ ಸ್ಪರ್ಧೆ ಕಾಣುತ್ತಿದೆ. ಇದಕ್ಕೆ ಕಾರಣಗಳೇನು?

ಏಕೆಂದರೆ, ಹಲವಾರು ಬಂಡಾಯ ಅಭ್ಯರ್ಥಿಗಳಿದ್ದರು, ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳಿದ್ದರು. ಇದು ಬಹುಕೋನ ಸ್ಪರ್ಧೆಯ ಹೋರಾಟವಾಗಿ ಪರಿಣಮಿಸಿತು.

2003ರಲ್ಲಿ ಬಿಜೆಪಿ ವಿಧಾನಸಭಾ ಚುನಾವಣೆಗಳನ್ನು ಗೆದ್ದಿತ್ತು. ಆದರೆ ನಂತರ ನಡೆದ ಲೋಕಸಭಾ ಚುನಾವಣೆಗಳಲ್ಲಿ ಸೋತಿತು. ಇದು ಮರುಕಳಿಸಬಹುದು ಎಂಬ ಭೀತಿ ಪ್ರತಿಪಕ್ಷಗಳನ್ನು ಬಾಧಿಸುತ್ತಿದೆಯೇ?

ಭಾರತೀಯ ಮತದಾರ ಪ್ರಬುದ್ಧನಾಗಿದ್ದಾನೆ. ರಾಜ್ಯ ಚುನಾವಣೆಗಳು ಮತ್ತು ಲೋಕಸಭಾ ಚುನಾವಣೆಗಳಲ್ಲಿನ ಆದ್ಯತೆಗಳ ಬಗ್ಗೆ ಆತನಿಗೆ ತಿಳಿದಿದೆ. ಇಲ್ಲಿರುವ ಅಂಶವೆಂದರೆ, ಅದು 2003 ಮತ್ತು 2004ಕ್ಕೆ ತದ್ವಿರುದ್ಧವಾಗಿರುವ ಸಾಧ್ಯತೆಯೂ ಇದೆ. ಇಲ್ಲಿರುವ ಅಂಶ ಸ್ಪಷ್ಟವಾಗಿದೆ. ಇದು ಈ ಸರಕಾರ ಜನಗಳ ಮೇಲೆ ಹೇರಿರುವ ಹೊರೆಗಳನ್ನು ಜನಗಳು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಆದ್ದರಿಂದ ಈ ತಿರಸ್ಕಾರ ಕೇಂದ್ರ ಮತ್ತು ರಾಜ್ಯಸರಕಾರ ಇವೆರಡರ ಧೋರಣೆಗಳಿಗೆ ವ್ಯಕ್ತಗೊಂಡಿರುವ ತಿರಸ್ಕಾರವಾಗಿದೆ. ಈ ಪ್ರವೃತ್ತಿ ತಿರುಗು ಮುರುಗಾಗುವ ಸಾಧ್ಯತೆ ಬಹಳ ಕಡಿಮೆ.

ಈಗ ಬಿಜೆಪಿಯ ತರ್ಕವೇನು? ರಾಮಮಂದಿರ ಕುರಿತಂತೆ ಒಂದು ಬುದ್ಧಿಭ್ರಮಣೆಯ ಪ್ರಚಾರಾಂದೋಲನ ನಡೆಯಬುದು ಎಂಬ ಭೀತಿ ನಿಮಗಿದೆಯೇ?

ತಮ್ಮ ಆಟಕ್ಕೆ ಇರುವುದು ಇದೊಂದೇ ಇಸ್ಪೀಟೆಲೆ ಎಂಬುದು ಅವರ ಭಾವನೆ. ಅಂದರೆ ಕೋಮುಧ್ರುವೀಕರಣವನ್ನು ಮತ್ತಷ್ಟು ತೀವ್ರಗೊಳಿಸುವುದು. ಆದರೆ ಇದು ಅವರಿಗೆ ಸಹಾಯ ಮಾಡುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಈ ಬಾರಿ ಅವರ ಮುಖ್ಯ ಪ್ರಚಾರಕನಾಗಿದ್ದರು, ಸ್ವತಃ ಮೋದಿಯವರಿಗಿಂತಲೂ ಹೆಚ್ಚು ಚುನಾವಣಾ ಸಭೆಗಳಲ್ಲಿ ಮಾತಾಡಿದರು. ಅದೇನೂ ಪ್ರಭಾವ ಬೀರಿಲ್ಲ. ನಿಜ ಹೇಳಬೇಕೆಂದರೆ, ಇದು ಚುನಾವಣೆಗಳಲ್ಲಿ ಪ್ರತಿಫಲನಗೊಂಡಿದೆ.

ಅಂದರೆ, ಇದು ಪ್ರತಿಪಕ್ಷಗಳ ಸ್ಥೈರ್ಯ ತುಂಬಿಸುವ ಸಂಗತಿ ಎಂದು ನೀವು ಭಾವಿಸುತ್ತೀರಾ?


ಸ್ಥೈರ್ಯ ತುಂಬಿಸುವುದಕ್ಕಿಂತ ಹೆಚ್ಚಾಗಿ, ಇದನ್ನು ನಾನು ಪ್ರತಿಪಕ್ಷಗಳಿಗೆ ಒಂದು ಪಾಟವೆಂದು ಕಾಣುತ್ತೇನೆ. ಜನಗಳು ಧೋರಣೆಗಳಲ್ಲಿ ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದಾರೆ. ಪ್ರತಿಪಕ್ಷಗಳು ಕಲಿಯಬೇಕಾದ ಪಾಟ ಇದು. ಅವರು ಪರ್ಯಾಯ ಜನಪರ ಧೋರಣೆಗಳ ಬಗ್ಗೆ ಹೆಚ್ಚೆಚ್ಚು ಮಾತನಾಡಬೇಕಾಗಿದೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್


ವ್ಯಂಗ್ಯಚಿತ್ರ: ಪಿ.ಮಹಮ್ಮದ್

ರಾಜಸ್ಥಾನ (ವಿಧಾನಸಭೆ–200, ಲೋಕಸಭೆ–25)



ಪಕ್ಷ	2018* ಸೀಟು	2018* ಮತಗಳಿಕೆ	2013 ಸೀಟು	2013' ಮತಗಳಿಕೆ	2014 ಸೀಟು	2014 ಮತಗಳಿಕೆ
ಬಿಜೆಪಿ	73	38.8%	163	45.2%	25	50.9%
ಕಾಂಗ್ರೆಸ್	99	39.8%	21	33.1%	0	30.4%
ಬಿಎಸ್‌ಪಿ	7	4%	3	3.4%		
ಸಿಪಿಐ(ಎಂ)	2	1.2%	0	0.9%		
ಇತರರು	17	16.2%	13	17.4%		

ಮಧ್ಯಪ್ರದೇಶ (ವಿಧಾನಸಭೆ–230, ಲೋಕಸಭೆ–29)



ಪಕ್ಷ	2018 ಸೀಟು	2018 ಮತಗಳಿಕೆ	2013 ಸೀಟು	2013 ಮತಗಳಿಕೆ	2014 ಸೀಟು	2014 ಮತಗಳಿಕೆ
ಬಿಜೆಪಿ	109	41%	165	44.88%	27	55%
ಕಾಂಗ್ರೆಸ್	114	40.9%	58	36.38%	2	34.9%
ಬಿಎಸ್‌ಪಿ	2	5%	4	6.29%	0	3.8%
ಎಸ್.ಪಿ.	1	1.3%	0	0.03%		
ಪಕ್ಷೇತರರು	4	11.8%	3	5.38%	0	6.3%

ಛತ್ತೀಸ್‌ಗಡ (ವಿಧಾನಸಭೆ–90, ಲೋಕಸಭೆ–11)



ಪಕ್ಷ	2018 ಸೀಟು	2018 ಮತಗಳಿಕೆ	2013 ಸೀಟು	2013' ಮತಗಳಿಕೆ	2014 ಸೀಟು	2014 ಮತಗಳಿಕೆ
ಬಿಜೆಪಿ	15	33%	49	41%	10	48.7%
ಕಾಂಗ್ರೆಸ್	68	43%	39	40%	1	38.4%
ಬಿಎಸ್‌ಪಿ	2	4%	1	4%	0	3.8%
ಜೆಸಿಸಿ(ಜೆ)	5	8%	–	–	–	–
ಇತರರು	0	13%	1	14%		

• ಒಂದು ಕ್ಷೇತ್ರದಲ್ಲಿ ಚುನಾವಣೆ ನಡೆದಿಲ್ಲ



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಯೋಗೀಜೀ ಫ್ಲಾಪ್‌ಷೋ

"ನಿಮ್ಮ ರಾಮಮಂದಿರ ನಿಮಗಿರಲಿ, ನಮಗೆ ರೊಟ್ಟಿ, ಕೆಲಸ ಬೇಕು"

ಇತ್ತೀಚಿನ ಎರಡು ವರ್ಷಗಳಲ್ಲಿ 'ಸಮರಧೀರ ಹಿಂದುತ್ವ'ದ ಪ್ರತೀಕವಾಗಿ ಬೆಳೆದಿರುವ ಉತ್ತರಪ್ರದೇಶದ ಮುಖ್ಯಮಂತ್ರಿಯವರ 'ಫ್ಲಾಪ್ ಷೋ' ಈ ಐದು ರಾಜ್ಯಗಳ ಚುನಾವಣೆಗಳ ಒಂದು ಬಹುಮುಖ್ಯ ಅಂಶ ಎನ್ನುತ್ತಾರೆ ಹಿರಿಯ ಪತ್ರಕರ್ತೆ ಸೀಮಾ ಮುಸ್ತಫಾ (ದಿ ಸಿಟಿಝುನ್, ಡಿ.11).

"ನಿಮ್ಮ ಅಲಿ ನಿಮಗಿರಲಿ, ನಮಗೆ ಭಜರಂಗ ಬಲಿಯೇ ಸಾಕು" ಎಂಬ ಅವರ ಘೋಷಣೆ ಅವರ ಹಿಂಬಾಲಕರ ಮೈನವಿರೇಳಿಸಿತ್ತಂತೆ. ಆದರೆ ಈ ಐದು ರಾಜ್ಯಗಳ, ಅದರಲ್ಲೂ ಬಿಜೆಪಿಯ

ಪುಟ 11 ಕ್ಕೆ

ಮೂರು ಹಿಂದಿ ರಾಜ್ಯಗಳಲ್ಲಿ ಬಿಜೆಪಿ 30 ರಿಂದ 44 ಸೀಟು ಕಳೆದುಕೊಳ್ಳಲಿದೆ

ಐದು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗಳ ಫಲಿತಾಂಶ ಬರುತ್ತಲೇ 2019ರ ಲೋಕಸಭಾ ಚುನಾವಣೆ ಮೇಲೆ ಅದರ ಪರಿಣಾಮದ ಬಗ್ಗೆ ಈಗಾಗಲೇ ವಿಶ್ಲೇಷಣೆ ಶುರುವಾಗಿದೆ. ಹಲವು ಮಾಧ್ಯಮ ಮತ್ತು ಸಮೀಕ್ಷಾ ಸಂಸ್ಥೆಗಳು ಈ ಚುನಾವಣೆಗಳ ವಿಧಾನಸಭಾ ಕ್ಷೇತ್ರವಾರು ಪಕ್ಷಗಳ ಮತಗಳಿಕೆ ಇಟ್ಟುಕೊಂಡು ಲೋಕಸಭಾ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಲೆಕ್ಕ ಹಾಕಿವೆ. ಕೆಲವು ವಿಧಾನ ಸಭೆ ಚುನಾವಣೆಯ ಮತಗಳಿಕೆ ಹಾಗೇ ಇರುತ್ತದೆಯೆಂಬ ಊಹೆಯನ್ನು ಮಾತ್ರ ಆಧಾರವಾಗಿಟ್ಟುಕೊಂಡರೆ, ಇತರರು ಹಿಂದಿನ 6 ತಿಂಗಳುಗಳ ಒಳಗೆ ನಡೆದ ವಿಧಾನ ಮತ್ತು ಲೋಕಸಭೆ ಚುನಾವಣೆಗಳ ಫಲಿತಾಂಶಗಳ ದತ್ತಾಂಶಗಳನ್ನೂ, ವಿರೋಧ ಪಕ್ಷಗಳ ಕೂಟದ ಸಾಧ್ಯತೆಗಳನ್ನು ಗಮನದಲ್ಲಿ ಇಟ್ಟುಕೊಂಡಿದ್ದಾರೆ.

ಮೊದಲ ವಿಧಾನದ ವಿಶ್ಲೇಷಣೆಯ ಪ್ರಕಾರ ಬಿಜೆಪಿ ಈ ಮೂರು ರಾಜ್ಯಗಳಲ್ಲಿ 2014ರಲ್ಲಿ ಗೆದ್ದ 62 ಸೀಟುಗಳಲ್ಲಿ 32 ಸೀಟುಗಳನ್ನು ಕಳೆದುಕೊಂಡು 30 ಸೀಟುಗಳಿಗೆ ಇಳಿಯಲಿದೆ. ಕಾಂಗ್ರೆಸ್ ತನ್ನ ಬಲವನ್ನು 3 ರಿಂದ 33ಕ್ಕೇ ಏರಿಸಿಕೊಳ್ಳಲಿದೆ. ರಾಜ್ಯವಾರು ಬಿಜೆಪಿಯ ಸಂಖ್ಯಾಬಲ ಕೋಷ್ಟಕದಲ್ಲಿ ಕೊಟ್ಟಂತಿರುತ್ತದೆ.

ರಾಜ್ಯ	2014	2019
ಮಧ್ಯ ಪ್ರದೇಶ	27	16 (–11)
ರಾಜಸ್ಥಾನ	25	13 (–12)
ಛತ್ತಿಸಗಡ	10	1 (–9)
ಒಟ್ಟು	**62**	**30 (–32)**

ಎರಡನೇ ವಿಧಾನ (ಅಂದರೆ ಹಿಂದಿನ ವಿಧಾನ ಮತ್ತು ಲೋಕಸಭೆ ಫಲಿತಾಂಶಗಳ ದತ್ತಾಂಶಗಳನ್ನೂ, ವಿರೋಧ ಪಕ್ಷಗಳ ಕೂಟದ ಸಾಧ್ಯತೆಗಳನ್ನು ಸಹ ಗಣನೆಗೆ ತೆಗೆದುಕೊಂಡರೆ ಬಿಜೆಪಿ ಈ ಮೂರು

ಪುಟ 11 ಕ್ಕೆ

ತೆಲಂಗಾಣ : ಟಿಆರ್‌ಎಸ್ ಭರ್ಜರಿ ಗೆಲುವು
ಪುಟ 10

ಛತ್ತೀಸ್‌ಗಡದಲ್ಲಿ ಬಿಜೆಪಿಯ ಭರ್ಜರಿ ಸೋಲು
ಪುಟ 11

ತೆಲಂಗಾಣ (ವಿಧಾನಸಭೆ–117, ಲೋಕಸಭೆ–17)

ಪಕ್ಷ	2018 ಸೀಟು	2018 ಮತಗಳಿಕೆ	2013 ಸೀಟು	2013' ಮತಗಳಿಕೆ	2014 ಸೀಟು	2014 ಮತಗಳಿಕೆ
ಟಿಆರ್‌ಎಸ್	88	46.9%	63	34.3%	11	33.9%
ಟಿಡಿಪಿ	2	3.5%	15	14.7%	1	3.1%
ಕಾಂಗ್ರೆಸ್	19	28.4%	21	25.2%	2	20.5%
ಬಿಜೆಪಿ	1	7%	5	7.1%	1	8.5%
ಎಂಐಎಂ	7	2.7%	7	3.8%	1	1.4%
ಇತರರು	2	11.5%	8	14.9%	1	32.6%





ಮಿಝೋರಾಂ (ವಿಧಾನಸಭೆ–40, ಲೋಕಸಭೆ–1)

ಪಕ್ಷ	2018 ಸೀಟು	2018 ಮತಗಳಿಕೆ	2013 ಸೀಟು	2013 ಮತಗಳಿಕೆ	2014 ಸೀಟು	2014 ಮತಗಳಿಕೆ
ಕಾಂಗ್ರೆಸ್	5	30.2%	34	44.6%	1	48.6%
ಎಂಎನ್‌ಎಫ್	26	37.6%	5	28.7%		
ಬಿಜೆಪಿ	1	8%	0	0.4%		
ಪಕ್ಷೇತರರು	8	24.2%	1	26.3%		



ರೈತರ ದನಿ ರಾಜಸ್ಥಾನದ ವಿಧಾನಸಭೆಯಲ್ಲಿ ಮೊಳಗಲಿದೆ

ರಾಜಸ್ಥಾನ ಕಳೆದ ಹಲವು ವರ್ಷಗಳಿಂದ ಸಮರಶೀಲ ರೈತ ಚಳುವಳಿಯನ್ನು ಕಂಡಿದ್ದು ಈ ವರ್ಷ ಅದು ತಾರಕ್ಕೆ ಮುಟ್ಟಿತ್ತು. ಸಾಮಾನ್ಯವಾಗಿ ದುಡಿಯುವ ಜನರ ಚಳುವಳಿ ಎಷ್ಟೇ ಜೋರಾಗಿರಲಿ ಅದು ಚುನಾವಣೆಯಲ್ಲಿ ಪ್ರಭಾವ ಬೀರುವುದು ಅಪರೂಪ. ಆದರೆ ಈ ಬಾರಿಯ ರಾಜಸ್ಥಾನ ಸ್ವಲ್ಪ ಭಿನ್ನವಾಗಿದೆ. ರೈತ ಚಳುವಳಿಯ ಅಲೆಯೆಬ್ಬಿಸಿದ ಸಿಪಿಐ(ಎಂ) ಚುನಾವಣಾ ರಾಜಕೀಯದಲ್ಲೂ ಮೂರನೇ ರಂಗ ಸ್ಥಾಪಿಸಿ ಹೆಚ್ಚಿನ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಮೂಲಕ ಅಲೆ ಎಬ್ಬಿಸಿತ್ತು.

ರಾಜಸ್ತಾನದಲ್ಲಿ ಈ ಬಾರಿ ಸಿಪಿಐ(ಎಂ) 28 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಎರಡು ಕ್ಷೇತ್ರಗಳಲ್ಲಿ ಗೆದ್ದಿದೆ. ಎರಡು ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿದೆ. 6 ಕ್ಷೇತ್ರಗಳಲ್ಲಿ ಮೂರನೇ ಸ್ಥಾನದಲ್ಲಿದೆ. 2013ರಲ್ಲಿ 38 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಮತಗಳಿಗಿಂತ ಈ ಬಾರಿ 60% ಹೆಚ್ಚು ಮತ ಗಳಿಸಿದೆ. 2013ರಲ್ಲಿ ಒಂದೂ ಸ್ಥಾನ ಗಳಿಸಿರಲಿಲ್ಲ. ಭಾದ್ರಾ ಮತ್ತು ಡೂಂಗರ್ ಘರ್ ಸಿಪಿಐ(ಎಂ) ಗೆದ್ದುಕೊಂಡ ಕ್ಷೇತ್ರಗಳು. ಧೋರ್ ಮತ್ತು ರಾಯ್ ಸಿಂಗ ನಗರ್ ಎರಡನೇ ಸ್ಥಾವನ ಪಡೆದ ಕ್ಷೇತ್ರಗಳು.



ಭಾದ್ರಾ ಕ್ಷೇತ್ರದಲ್ಲಿ ಕಾ. ಬಲವಾನ್ ಪುನಿಯಾ 81,655 (ಶೇ.41.2) ಮತಗಳಿಸಿ, 23 ಸಾವಿರ ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ್ದಾರೆ. 2013ರಲ್ಲಿ ಬಿಜೆಪಿ ಗೆದ್ದಿದ್ದು ಈ ಬಾರಿ 3 ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ

ಡೂಂಗರ್‌ಘರ್ ಕ್ಷೇತ್ರದಲ್ಲಿ ಕಾ. ಗಿರಿಧರಿ ಲಾಲ್ ಮಾಹಿಯಾ 72,376 (ಶೇ. 41.4) ಮತ ಗಳಿಸಿ, 24 ಸಾವಿರ ಮತಗಳಿಂದ ಹಾಲಿ ಬಿಜೆಪಿ ಶಾಸಕರನ್ನು ಸೋಲಿಸಿದ್ದಾರೆ.

ಧೋರ್ ಕ್ಷೇತ್ರದಲ್ಲಿ ಕಾ. ಪೇಮಾರಾಮ್ 61,089 (ಶೇ. 31.9) ಮತ ಗಳಿಸಿ ಎರಡನೇ ಸ್ಥಾನ ಪಡೆದಿದ್ದಾರೆ. ಗೆದ್ದ ಅಭ್ಯರ್ಥಿಗೆ 14 ಸಾವಿರ ಮತಗಳ ಅಂತರವಿದೆ. ರಾಯ್‌ಸಿಂಗನಗರ್ ಕ್ಷೇತ್ರದಲ್ಲಿ ಕಾ. ಶ್ಯೋಪತ್ ರಾಮ್–ಮೇಘವಾಲ್ 43,264 (ಶೇ. 21.31)ಮತ ಗಳಿಸಿ ಎರಡನೇ ಸ್ಥಾನ ಪಡೆದಿದ್ದಾರೆ.

ದಂತಾರಾಮಘರ್ ಕ್ಷೇತ್ರದಲ್ಲಿ ಹಿರಿಯ ಸಿಪಿಐ(ಎಂ) ಮತ್ತು ರೈತ ನಾಯಕ ಕಾ. ಆಮ್ರಾರಾಮ್ 44,643 (ಶೇ. 24.1)ಮತ ಗಳಿಸಿ ಮೂರನೇ ಸ್ಥಾನ ಪಡೆದಿದ್ದಾರೆ. ಗೆದ್ದ ಅಭ್ಯರ್ಥಿಗೆ 19 ಸಾವಿರ ಮತಗಳ ಅಂತರವಿದೆ. 2008ರಲ್ಲಿ ಚುನಾವಣೆ ಗೆದ್ದು ಆಮ್ರಾರಾಮ್ ಶಾಸಕರಾಗಿದ್ದರು.

ಡೂಂಗರ್‌ಘರ್ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ 60 ವರ್ಷದ ಗಿರಿಧರ್ ಲಾಲ್ ಮಾಹಿಯಾ ಎಐಕೆಎಸ್‌ನ ಬಿಕಾನೇರ್ ಜಿಲ್ಲಾ ಅಧ್ಯಕ್ಷರು ಮತ್ತು ಭಾದ್ರಾ ಕ್ಷೇತ್ರದಿಂದ ಆಯ್ಕೆಯಾಗಿರುವ 31 ವರ್ಷದ ಪೂನಿಯಾ, ಎಐಕೆಎಸ್‌ನ ರಾಜ್ಯ ಜಂಟಿ ಕಾರ್ಯದರ್ಶಿ. ಇವರಿಬ್ಬರೂ ವಿದ್ಯುತ್ ದರ ಏರಿಕೆ ವಿರುದ್ಧ, ಬೆಳೆಗಳಿಗೆ ನ್ಯಾಯ ಬೆಲೆಗಳು, ಖರೀದಿ ಕೇಂದ್ರಗಳು, ಸಾಲದಿಂದ ಮುಕ್ತಿ, ನೀರಾವರಿ, ವಿಮೆ, ಪೆನ್ಶನ್ ಮುಂತಾದ ರಾಜ್ಯದ ರೈತರ ಎಲ್ಲ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು. ಕಳೆದ ಫೆಬ್ರುವರಿಯಲ್ಲಿ ಹನುಮಾನ್ ಗಡದ ಚೈನ್‌ಬಾರಿ ಗ್ರಾಮದಲ್ಲಿ ಎಸ್‌ಬಿಐ ಕಿಸಾನ್ ಕಾರ್ಡ್ ಮೇಲೆ ಹೆಚ್ಚುವರಿ ಬಡ್ಡಿ ಹಾಕಿದ್ದರ ವಿರುದ್ಧ ಎಸ್‌ಬಿಐ ಶಾಖಾ ಕಚೇರಿ ಮುಂದೆ ನಡೆಸಿದ 58 ದಿನಗಳ ಹೋರಾಟದ ಫಲವಾಗಿ 350 ಕಿಸಾನ್ ಕಾರ್ಡ್ ಖಾತೆಗಳಿಗೆ ಒಟ್ಟು 16.52 ಲಕ್ಷ ರೂ.ಗಳನ್ನು ಜಮಾ ಆಯಿತು. ಮಾಹಿಯ ಪೋಲೀಸರ ದೌರ್ಜನ್ಯಕ್ಕೆ ಒಳಗಾಗಿ ಎರಡೂ ಕಾಲುಗಳಿಗೂ ಚಿಕಿತ್ಸೆ ಪಡೆದವರು.

ಈ ಇಬ್ಬರು ಸಂಗಾತಿಗಳು ರಾಜಸ್ಥಾನ ವಿಧಾನಸಭೆಯಲ್ಲಿ ಹೋರಾಟನಿರತ ರೈತರು, ಕಾರ್ಮಿಕರು ಮತ್ತು ದಮನಕ್ಕೆ ಒಳಗಾದ ಜನಗಳ ದನಿಯಾಗಲಿದ್ದಾರೆ ಎಂದು ಎಐಕೆಎಸ್ ಅಖಿಲ ಭಾರತ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳಿದ್ದಾರೆ.

ಕಮ್ಯೂನಿಸ್ಟರಿಗೆ ಪೋಲೀಸರ ದೌರ್ಜನ್ಯ, ದಬ್ಬಾಳಿಕೆ, ಮೊಕ್ಕದ್ದಮ್ಮೆಗಳೆ ಒಂದು ರೀತಿಯ ಚುನಾವಣಾ ಮಾನದಂಡಗಳು. ಏಕೆಂದರೆ ಅವರು ಹಣ, ಹೆಂಡ, ಜಾತಿ, ಧರ್ಮ ಮತ್ತು ಇನ್ನಾವುದೋ ಭಾವನಾತ್ಮಕ ವಿಚಾರಗಳ ಆಧಾರದಲ್ಲಿ ಚುನಾವಣೆಗಳನ್ನು ನಡೆಸಿದವರಲ್ಲ. ಅವರು ನಡೆಸಿದ ಜನಪರವಾದ ಹೋರಾಟ, ಚಳುವಳಿಗಳೇ ಅವರನ್ನ ವಿಧಾನಸೌಧಕ್ಕೆ ಮತ್ತು ಸಂಸತ್ತಿಗೆ ಕಳುಹಿಸಿವೆ. ಹಾಗಾಗಿಯೇ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಚುನಾವಣೆಗಳನ್ನು ಎದುರಿಸಿದಷ್ಟು ಸುಲಭವಾಗಿ ಕಮ್ಯೂನಿಸ್ಟರು ಎದುರಿಸುವುದು ಕಷ್ಟವಾಗಿದೆ. ರಾಜಸ್ಥಾನದ ರೈತರ ನಿರಂತರ ಹೋರಾಟ ಅಲ್ಲಿಯ ರೈತ ವಿರೋಧಿ ವಸುಂಧರಾ ರಾಜೇ ಸರ್ಕಾರವನ್ನ ಕೆಳಗಿಳಿಸಿದೆ ಮತ್ತು ಇಬ್ಬರು ರೈತ ನಾಯಕರನ್ನು ವಿಧಾನಸೌಧಕ್ಕೆ ಕಳುಹಿಸಿದೆ. ಇದು ಚಳುವಳಿಗಳಿಗಿರುವ ಶಕ್ತಿ......

ತೆಲಂಗಾಣ: ಟಿಆರ್‌ಎಸ್ ಭರ್ಜರಿ ಗೆಲುವು ಹೇಗೆ? ಏಕೆ?

ಎಲ್ಲ ಸರ್ವೆ ನಿರೀಕ್ಷೆಗಳನ್ನೂ ಮೀರಿ ಕೆ.ಚಂದ್ರಶೇಖರ್ ರಾವ್ ಅವರ ಟಿಆರ್‌ಎಸ್ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಜಯಗಳಿಸಿದೆ. ಚುನಾವಣೆ ನಡೆದ 119ಸ್ಥಾನಗಳ ಪೈಕಿ 88ಸ್ಥಾನಗಳನ್ನು ಗೆಲ್ಲುವ ಮೂಲಕ ಎರಡನೇ ಬಾರಿ ಕೆಸಿಆರ್ ತೆಲಂಗಾಣ ಮುಖ್ಯಮಂತ್ರಿಯಾದರು. ಟಿಆರ್‌ಎಸ್ ಗೆಲ್ಲಬಹುದೆಂದು ಭವಿಷ್ಯ ನುಡಿದಿದ್ದವರಿಗೂ ಅಚ್ಚರಿಯಾಗುವಂತೆ ಅದು ಜಯ ಗಳಿಸಿರುವುದರ ಹಿಂದೆ ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರರಾವ್ ಅವರ ಚುನಾವಣಾ ತಂತ್ರಗಾರಿಕೆ, ಹಣ, ವಿರೋಧಿ ಪಕ್ಷಗಳ ಮಾತನ್ನು ತೆಲಂಗಾಣ ಜನ ನಂಬಿಸುವಲ್ಲಿ ವಿಫಲತೆ ಕೆಲಸ ಮಾಡಿದೆ.

ಹಾಗೆ ನೋಡಿದರೆ ತೆಲಂಗಾಣ ವಿದಾನಸಭಾ ಚುನಾವಣೆಗಳು 2019ರ ಮೇ ತಿಂಗಳ ಲೋಕಸಭಾ ಚುನಾವಣೆಗಳ ಜೊತೆಗೆ ನಡೆಯಬೇಕಿತ್ತು. ಆದರೆ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರ ರಾಜಕೀಯ ಅಂಶಗಳಿಂದ ಪ್ರಾದೇಶಿಕ ರಾಜಕೀಯ ಪಕ್ಷ ಟಿಆರ್ ಎಸ್ ಗೆ ಹಿನ್ನಡೆ ತಪ್ಪಿಸಿಕೊಳ್ಳಲೆಂಬಂತೆ ಕೆ.ಸಿ.ಆರ್. ಅವಧಿಗೆ ಮುನ್ನವೇ ವಿಧಾನಸಭೆ ವಿಸರ್ಜಿಸಿ ರಾಜ್ಯಕ್ಕೆ ಪ್ರತ್ಯೇಕವಾಗಿ ಚುನಾವಣೆ ನಡೆಯುವಂತೆ ನೋಡಿಕೊಂಡರು. ಅವರ ಈ ನಿರ್ಧಾರವನ್ನು ವಿರೋಧಪಕ್ಷಗಳು ಟೀಕಿಸಿ, ರಾಜಕೀಯ ಪಂಡಿತರು ಅವರ ಈ ಲೆಕ್ಕಾಚಾರ ಉಲ್ಟಾ ಹೊಡೆಯಲಿದೆಯೆಂದು ನಂಬಿದ್ದರು. ಆದರೆ ಇಂತಹ ಅಭೂತಪೂರ್ವ ಗೆಲುವು ತಮ್ಮದಾಗಬಹುದೆಂದು ಬಹುಶಃ ಸ್ವತ: ಅವರೇ ನಿರೀಕ್ಷಿಸಿರಲಿಲ್ಲ

ಅವರ ಈ ಗೆಲುವಿಗೆ ಇರಬಹುದಾದ ಕೆಲವು ಕಾರಣಗಳು ಹೀಗಿವೆ

1. ಜನಪ್ರಿಯ ಕಾರ್ಯಕ್ರಮಗಳು.

ರಾವ್ ತಮ್ಮ ಅಧಿಕಾರದ ಪ್ರಾರಂಭದಿಂದಲೂ ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಲೇ ಬಂದಿದ್ದರು. ಅವರು ಜಾರಿಗೊಳಿಸಿದ ರೈತಬಂಧು ಕಾರ್ಯಕ್ರಮ ತೆಲಂಗಾಣದ ಕೃಷಿವಲಯದಲ್ಲಿ ಜನಪ್ರಿಯವಾಗಿತ್ತು. ಅವರು ಪರಿಚಯಿಸಿದ ಸಾಮಾಜಿಕ ಭದ್ರತೆ ಒದಗಿಸುವ ಪಿಂಚಣಿ ವ್ಯವಸ್ಥೆ, ಕುಡಿಯುವ ನೀರಿನ ಯೋಜನೆಗಳು, 24x7ವಿದ್ಯುತ್ ಪೂರೈಕೆ, ಬಡವರಿಗಾಗಿ ಜಾರಿಗೊಳಿಸಿದ ವಸತಿ ಸಂಕೀರ್ಣಗಳು, ಜನಸಮುದಾಯದಲ್ಲಿ ಭಾರೀ ಜನಪ್ರಿಯತೆ ತಂದುಕೊಟ್ಟವು. ಹೆಣ್ಣುಮಕ್ಕಳ ಮದುವೆಗಾಗಿ ಸರಕಾರ ಒಂದು ಲಕ್ಷ ರೂಪಾಯಿ ನೀಡುವ ಕಲ್ಯಾಣಲಕ್ಷ್ಮಿ/ಶಾದಿ ಮುಬಾರಕ್ ಯೋಜನೆಗಳು ಮತದಾರರನ್ನು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾದವು.

ಅದರಲ್ಲೂ ರಾವ್ ಕೃಷಿಗೆ ಬೇಕಾದ ಸಣ್ಣ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದು ರಾಜ್ಯದ ಸಣ್ಣ ರೈತರ ನಡುವೆ ಅವರ ಜನಪ್ರಿಯತೆ ಹೆಚ್ಚಾಗಲು ಕಾರಣವಾಯಿತು.

ಇದರ ಜೊತೆಗೆ ವಿಧಾನಸಭೆ ವಿಸರ್ಜಿಸುವ ಕೆಲವೇ ದಿನಗಳ ಮೊದಲು ರಾಜ್ಯದ ಜನತೆಗೆ ಮತ್ತಷ್ಟು ಉಚಿತ ಕಾರ್ಯಕ್ರಮಗಳನ್ನು, ಜನಪ್ರಿಯ ಯೋಜನೆಗಳನ್ನು ಘೋಷಿಸಿದ್ದು ಜನತೆ ಟಿಆರ್‌ಎಸ್ ಪರ ನಿಲ್ಲುವಂತೆ ಮಾಡಿತು.

ಚುನಾವಣೆಯಲ್ಲಿ ಹಣ, ಮದ್ಯ, ಆಮೀಷಗಳೂ ಭಾರೀ ಪ್ರಭಾವ ಬೀರಿದವು.

2. ಕಾಂಗ್ರೆಸ್, ತೆಲುಗುದೇಶಂ, ಸಿಪಿಐ, ತೆಲಂಗಾಣ ಜನ ಸಮಿತಿ ಮಹಾ ಕೂಟ

ಇಷ್ಟೆಲ್ಲದರ ನಡುವೆಯೂ ಇದ್ದಿರಬಹುದಾದ ಆಡಳಿತ ವಿರೋಧಿ ಅಲೆಯನ್ನು ಉಪಯೋಗಿಸಿಕೊಳ್ಳುವ ಸಾಧ್ಯತೆ ಇದ್ದ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಕೊನೆ ಕ್ಷಣದಲ್ಲಿ ತೆಲುಗುದೇಶಂ ಜೊತೆ ಮೈತ್ರಿ ಮಾಡಿಕೊಂಡಿದ್ದು ತೆಲಂಗಾಣ ಜನತೆಯ ಕೋಪಕ್ಕೆ ಕಾರಣವಾಯಿತು. ಮೊದಲಿನಿಂದಲೂ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯ ವಿರುದ್ಧವಿದ್ದ ತೆಲುಗುದೇಶಂ ಪಕ್ಷದ ಮೇಲಿದ್ದ ತೆಲಂಗಾಣ ಜನತೆಯ ಕೋಪ ಸಹಜವಾಗಿಯೇ ಈ ಮಹಾ ಕೂಟಕ್ಕೆ ನಷ್ಟವನ್ನುಂಟು ಮಾಡಿತು. ಆಂಧ್ರಪ್ರದೇಶದ ರಾಜಧಾನಿ ವಿಜಯವಾಡ ಮತ್ತು ದಿಲ್ಲಿಯ ಗುಲಾಮರ ಸರಕಾರ ನಮಗೆ ಬೇಕಾಗಿಲ್ಲವೆಂಬ ರಾವ್ ಅವರ ಹೇಳಿಕೆ ತೆಲಂಗಾಣ ಜನತೆ ಟಿಆರ್‌ಎಸ್ ಪರವಾಗಿ ಧ್ರುವೀಕರಣಗೊಳ್ಳುವಂತೆ ಮಾಡಿತು. ಅವರು ತೆಲಂಗಾಣ ಜನತೆಯ ದೃಷ್ಟಿಯಲ್ಲಿ ಇವತ್ತಿಗೂ ತೆಲುಗುದೇಶಂ ಚಂದ್ರಬಾಬು ನಾಯ್ಡು ರನ್ನು ಖಳನಾಯಕನಂತೆ ಬಿಂಬಿಸಿದರು. ಅದರ ಜೊತೆ ಸೇರಿದ ಕಾಂಗ್ರೆಸನ್ನು ಸಹ ಅವರು ಅದೇ ದೃಷ್ಟಿಯಲ್ಲಿ ನೋಡಿದ್ದು ಮಹಾ ಕೂಟಕ್ಕೆ ದೊಡ್ಡ ಹಿನ್ನಡೆಯನ್ನುಂಟು ಮಾಡಿತು. ಇಲ್ಲಿ ಕೆಸಿಆರ್ ತೆಲಂಗಾಣ ಅಸ್ಮಿತೆಯನ್ನು ಜನತೆಯಲ್ಲಿ ಪ್ರಚೋದಿಸಿದ್ದು ಕೆಲಸ ಮಾಡಿದೆ.

3. ಕಾಂಗ್ರೆಸ್‌ನ ನೇತೃತ್ವದ ಮಹಾ ಕೂಟದ ನಾಯಕತ್ವದ ಕೊರತೆ

ಕಾಂಗ್ರೆಸ್ ಪಕ್ಷದೊಳಗೆ ಹತ್ತಾರು ಜನ ಮುಖ್ಯಮಂತ್ರಿಗಳ ಕುರ್ಚಿಯ ಆಕಾಂಕ್ಷಿಗಳಿದ್ದು ಅವರಲ್ಲಿ ಸಮನ್ವಯತೆಯ ಕೊರತೆ ಎದ್ದು ಕಾಣುತ್ತಿತ್ತು. ಹೀಗಾಗಿ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಉತ್ತಮ ಕುಮಾರ್ ರೆಡ್ಡಿಯವರಿಗೆ ಎಲ್ಲ ನಾಯಕರನ್ನೂ ಒಟ್ಟಿಗೆ ಕರೆದೊಯ್ಯಲು ಸಾಧ್ಯವೇ ಆಗಲಿಲ್ಲ. ಹಳೆಯ ಮುಖಗಳನ್ನೇ ನಂಬಿಕೊಂಡಿದ್ದ ಕಾಂಗ್ರೆಸ್‌ಗೆ ಯುವ ಜನತೆಯ ಬೆಂಬಲ ದೊರಕದೆ ಹೋಗಿದ್ದು ಸಹ ಟಿಆರ್‌ಎಸ್ ಗೆಲುವಿಗೆ ಕಾರಣವಾಯಿತು. ಮಹಾಕೂಟದ ನಾಯಕತ್ವದ ಬಗ್ಗೆ ಜನತೆಯ ಅವಿಶ್ವಾಸ ಸಹ ಅದಕ್ಕೆ ಮುಳುವಾಯಿತು.

4. ನಕಾರಾತ್ಮಕ ಪ್ರಚಾರ.

ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಮತ್ತು ಭಾಜಪ ಗಳೆರಡೂ ತಮ್ಮ ಪ್ರಣಾಳಿಕೆಗಳ ಬಗ್ಗೆ ಹೆಚ್ಚು ಮಾತಾಡದೆ ರಾವ್ ಅವರ ಕುಟುಂಬದ ವಿರುದ್ಧ ವೈಯಕ್ತಿಕ ದಾಳಿ ನಡೆಸಿದ್ದು ಜನರಲ್ಲಿ ಕೆಸಿಆರ್ ಬಗೆ ಅನುಕಂಪದ ಅಲೆಗೆ ಕಾರಣವಾಯಿತು. ವಿರೋಧ ಪಕ್ಷಗಳ ಇಂತಹ ನಕಾರಾತ್ಮಕ ಪ್ರಚಾರ ಟಿಆರ್‌ಎಸ್‌ಗೆ ವರವಾಗುತ್ತ ಹೋಯಿತು.

5. ತಿಂಗಳುಗಳ ಪೂರ್ವ ಸಿದ್ಧತೆ.

ವಿಧಾನಸಭೆಯನ್ನು ವಿಸರ್ಜಿಸಿದ ಕೂಡಲೇ ಟಿಆರ್‌ಎಸ್ ತನ್ನ ಚುನಾವಣಾ ಸಿದ್ಧತೆಯನ್ನು ಆಂಭಿಸಿತ್ತು. ಸೆಪ್ಟಂಬರ್ ಮೊದಲ ವಾರದ ಹೊತ್ತಿಗೆ ಅದು ಶೇ. 90 ರಷ್ಟು ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿಯಾಗಿತ್ತು. ಹಾಗಾಗಿ ಅದರ ಅಭ್ಯರ್ಥಿಗಳು ಮೊದಲೇ ತಮ್ಮ ಪ್ರಚಾರವನ್ನು ಆರಂಭಿಸಿಯಾಗಿತ್ತು. ಕೊನೆಗಳಿಗೆಯವರೆಗೂ ಸೀಟು ಹಂಚಿಕೆಯ ಕಸರತ್ತಿನಲ್ಲಿ ಮುಳುಗಿದ್ದ ವಿರೋಧ ಪಕ್ಷಗಳು ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ.

6. ಟಿಆರ್‌ಎಸ್ ಒಳಗೊಳಗೆ ಮುಸ್ಲಿಂ ಮೂಲಭೂತವಾದಿ ಅಸಾವುದ್ದೀನ್ ಓವೈಸಿ ಪಕ್ಷ ಎಂಐಎಂ (ಹೈದರಾಬಾದ್ ನಗರದಲ್ಲಿ ಮಾತ್ರ ಪ್ರಭಾವ ಇರುವ) ಜೊತೆಗೆ ಒಪ್ಪಂದ ಮಾಡಿಕೊಂಡು ಉಳಿದ ಕ್ಷೇತ್ರಗಳಿಗೆ ಅಲ್ಪಸಂಖ್ಯಾತರ ಮತಗಳು ಕಾಂಗ್ರೆಸ್ ಮೈತ್ರಿ ಕೂಟದ ಕಡೆಗೆ ಹೋಗದಂತೆ ಮಾಡಿದ ಟಿಆರ್‌ಎಸ್ ತಂತ್ರಗಾರಿಕೆ ಕೆಲಸ ಮಾಡಿದಂತೆ ಕಾಣುತ್ತದೆ.

ಬಿಜೆಪಿಗೆ ಬಾರಿ ಮುಖಭಂಗ

2014ರ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ತೆಲುಗು ದೇಶಂ ಜೊತೆಗೆ ಮೈತ್ರಿ ಮಾಡಿಕೊಂಡು 5 ಕ್ಷೇತ್ರಗಳಲ್ಲಿ ಗೆದ್ದಿತ್ತು. ಈ ಬಾರಿಯ ಟಿ.ಆರ್.ಎಸ್ ಜೊತೆಗೆ ಹೊಂದಾಣಿಕೆಗಾಗಿ ಬೇಡಿಕೊಂಡು ಫಲ ಸಿಗಲಿಲ್ಲ. ಮೋದಿ, ಅಮಿತ್ ಶಾ, ಯೋಗಿ ಅಬ್ಬರ ಪ್ರಚಾರ ನಡೆಸಿದರು ಈ ಬಾರಿ ಒಂದು ಸ್ಥಾನ ಮಾತ್ರ ಗೆದ್ದು ಕಳೆದ ಬಾರಿ ಗೆದ್ದಿದ್ದ 4 ಕ್ಷೇತ್ರದಲ್ಲಿ ಸೋತಿದೆ. ಮಾತ್ರವಲ್ಲ ಈ ಬಾರಿ ಎಲ್ಲಾ 119 ಕ್ಷೇತ್ರಗಳಲ್ಲಿ (ಕಳೆದ ಬಾರಿಯ ಟಿ.ಡಿ.ಪಿ.ಯೊಂದಿಗೆ ಮೈತ್ರಿಯ ಭಾಗವಾಗಿ 47 ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸಿದ್ದರೂ) ಅದರ ಮತಗಳಿಕೆ 2014ರ ಶೇ. 15 ರಿಂದ ಶೇ. 8ಕ್ಕೆ ಕುಸಿದಿದೆ.

ಕಾಂಗ್ರೆಸ್ 2014ರಲ್ಲಿ ಎಲ್ಲಾ 119 ಸೀಟುಗಳಲ್ಲಿ ಸ್ಪರ್ಧಿಸಿ, 21 ಸೀಟು ಗೆದ್ದಿತ್ತು. ಅದರ ಮತಗಳಿಕೆ ಶೇ. 25 ಆಗಿತ್ತು. ಈ ಬಾರಿ 100 ಸೀಟುಗಳಲ್ಲಿ ಸ್ಪರ್ಧಿಸಿ, 19 ಸೀಟು ಗೆದ್ದಿದೆ. ಅದರ ಮತಗಳಿಕೆ ಶೇ. 28.4ಕ್ಕೆ ಏರಿದೆ.

ತೆಲುಗು ದೇಶಂ 2014ರಲ್ಲಿ ಬಿಜೆಪಿ ಜತೆ ಮೈತ್ರಿಯಲ್ಲಿ 72 ಸೀಟುಗಳಲ್ಲಿ ಸ್ಪರ್ಧಿಸಿ, 15 ಸೀಟು ಗೆದ್ದಿತ್ತು. ಅದರ ಮತಗಳಿಕೆ ಶೇ. 15 ಆಗಿತ್ತು. ಈ ಬಾರಿ 13 ಸೀಟುಗಳಲ್ಲಿ ಸ್ಪರ್ಧಿಸಿ, 2 ಸೀಟು ಮಾತ್ರ ಗೆದ್ದಿದೆ. ಅದರ ಮತಗಳಿಕೆ ಶೇ. 3.5ಕ್ಕೆ ಕುಸಿದಿದೆ.

ತೆಲಂಗಾಣದಲ್ಲಿ ಟಿ.ಆರ್.ಎಸ್. ಭರ್ಜರಿ ಗೆಲುವು ಪಂಚ ರಾಜ್ಯಗಳ ಚುನಾವಣೆಗಳ ಅಚ್ಚರಿಗಳಲ್ಲಿ ಒಂದು. ಇದಕ್ಕೆ ಕಾರಣಗಳೇನು? ರಾಜಸ್ಥಾನ ಮತ್ತು ತೆಲಂಗಾಣಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯೇತರ ರಾಜಕೀಯ ಶಕ್ತಿಗಳ ಮೂರನೇಯ ರಂಗ ಎಲ್ಲಾ ಸ್ಥಾನಗಳನ್ನು ಸ್ಪರ್ಧಿಸಿದ್ದು ಪಂಚ ರಾಜ್ಯಗಳ ಚುನಾವಣೆಯ ವಿಶಿಷ್ಟತೆಗಳಲ್ಲಿ ಒಂದಾಗಿತ್ತು. ತೆಲಂಗಾಣದ ಅನುಭವಗಳೇನು?

'ನವತೆಲಂಗಾಣ' ಪತ್ರಿಕೆಯ ವಿಶ್ಲೇಷಣೆ ಆಧಾರಿತ ಕಿರು ಲೇಖನಗಳು– ವಾಸುದೇವ ರೆಡ್ಡಿ ಕೆ.

ಎಡ ಐಕ್ಯತೆಯ ಅಭಾವಕ್ಕೆ ಬೆಲೆ ತೆತ್ತ ಮೂರನೇ ರಂಗ

ಕೆಂಬಾವುಟದ ಹೋರಾಟದ ವೀರ ಚರಿತ್ರೆಯ ನೆಲ ತೆಲಂಗಾಣದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಬಿಡಿ ಬಿಡಿಯಾಗಿ ಸ್ಪರ್ಧಿಸಿ ಭಾರಿ ಬೆಲೆ ತೆತ್ತಿವೆ. ಚುನಾವಣೆಗೆ ಮೊದಲೇ ಎಡ ಪಕ್ಷಗಳ ಐಕ್ಯತೆಯ ಸ್ಪರ್ಧೆಗಾಗಿ ಹಲವು ಸುತ್ತಿನ ಮಾತುಕತೆ ನಡೆಸಿದರೂ ಕಾರ್ಯ ರೂಪಕ್ಕೆ ಬರಲಿಲ್ಲ.

ಕೊನೆಯ ಗಳಿಗೆಯಲ್ಲಿ ತೆಲಂಗಾಣ ದಲ್ಲಿ ಸಿಪಿಐ ಪಕ್ಷ ಕಾಂಗ್ರೆಸ್ ನೇತೃತ್ವದ ಮಹಾ ಕೂಟದಲ್ಲಿ ಸೇರಿ ಮುಖಭಂಗ ಅನುಭವಿಸಿದ್ದಾರೆ. ಸಿಪಿಐ(ಎಂ)ನೇತೃತ್ವದಲ್ಲಿ ರೂಪುಗೊಂಡಿದ್ದ ಎಡ, ಸಾಮಾಜಿಕ ರಾಜಕೀಯ ಪರ್ಯಾಯ ವೇದಿಕೆಯಾಗಿದ್ದ ಬಹುಜನ ಲೆಫ್ಟ್ ಫ್ರಂಟ್ (ಬಿಎಲ್‌ಎಫ್) ನಲ್ಲಿ ಸೇರಲು ಸಿಪಿಐ ಗೆ ಆಹ್ವಾನ ನೀಡಿದರೂ ಪ್ರಯೋಜನವಾಗಲಿಲ್ಲ. ಇದರಿಂದ ಪ್ರತಿ ಬಾರಿ ವಿಧಾನಸಭೆ ಯಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಇರುತ್ತಿದ್ದ ತೆಲಂಗಾಣ ವಿಧಾನಸಭೆಯಲ್ಲಿ ಈ ಬಾರಿ ಕಮ್ಯುನಿಸ್ಟ್ ಶಾಸಕರಿಲ್ಲದಿರುವುದು ಬೇಸರದ ಸಂಗತಿಯಾಗಿದೆ.

ಕಾಂಗ್ರೆಸ್ ನ್ನು ನಂಬಿ ಮೈತ್ರಿ ಕೂಟದಲ್ಲಿ ಸೇರಿದ್ದ ಸಿಪಿಐ ಪ್ರಾರಂಭದಲ್ಲಿ 15 ಕ್ಷೇತ್ರಗಳಿಗೆ ಬೇಡಿಕೆ ಇಟ್ಟಿತ್ತು. ಆದರೆ ಕಾಂಗ್ರೆಸ್ ನೀಡಿದ ಕೇವಲ 3 ಕ್ಷೇತ್ರಗಳಿಗೆ ಸೀಮಿತವಾಗಿ ಸ್ಪರ್ಧೆ ನಡೆಸಿತು, ಮಿಕ್ಕ ಕಡೆ ಕಾಂಗ್ರೆಸ್ ಮೈತ್ರಿ ಕೂಟ ಬೆಂಬಲಿಸಿತು. ಆದರೆ ದುರಂತವೆಂದರೆ ಮೈತ್ರಿ ಕೂಟ ನೀಡಿದ 3 ಕ್ಷೇತ್ರಗಳಲ್ಲಿಯೂ ಕೂಟದ ಮಿತ್ರ ಪಕ್ಷಗಳಿಂದ ಸಹಕಾರ ಬೆಂಬಲ ಸಿಗಲಿಲ್ಲ ಎಂದು ಸಿಪಿಐ ತೆಲಂಗಾಣ ರಾಜ್ಯ ಕಾರ್ಯದರ್ಶಿ ಚಾಡ ವೆಂಕಟರೆಡ್ಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇನ್ನು ಎಡಪಂಥೀಯ ಹೋರಾಟದ ಐಕಾನ್ ಎಂದು ಬಿಂಬಿತವಾಗಿದ್ದ ಗದ್ದರ್ ಚುನಾವಣೆಯ ಮುನ್ನ ಬಿಎಲ್ ಎಫ್ ಜೊತೆಗಿದ್ದು.. ನಂತರ ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿಯನ್ನು ತನ್ನ ಕುಟುಂಬ ಸದಸ್ಯರೊಂದಿಗೆ ಭೇಟಿಯಾಗಿ ಸೈಲೆಂಟ್ ಆದರು.

ಈ ರೀತಿಯಾಗಿ ತೆಲಂಗಾಣ ರಾಜ್ಯದಲ್ಲಿ ಕೆಲವು ಕ್ಷೇತ್ರಗಳಲ್ಲಿ ನಿರಂತರವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬೆರಳೆಣಿಕೆಯಷ್ಟು ಆದರೂ ಶಾಸಕರನ್ನು ಗೆಲ್ಲಿಸಿಕೊಳ್ಳುತ್ತಿದ್ದ ಎಡ ಪಕ್ಷಗಳು ಬಿಡಿ ಬಿಡಿಯಾಗಿ ಸ್ಪರ್ಧಿಸಿದ್ದು ಸರಿಯಲ್ಲ ಎಂದು ಜನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದರ ಮಧ್ಯೆಯೇ ಸಿಪಿಐ(ಎಂ) 26 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 94,490 (0.4%) ಮತ ಗಳಿಸಿದೆ. ಇನ್ನು ಉಳಿದ ಕ್ಷೇತ್ರಗಳಲ್ಲಿ ಬಹುಜನ ಲೆಫ್ಟ್ ಫ್ರಂಟ್ ಚಿಹ್ನೆ ಮೇಲೆ ಸ್ಪರ್ಧಿಸಿ 1,37,000 (0.7%) ಗಳಿಸಿದೆ. ಒಟ್ಟು ಮೂರನೇ ರಂಗ ಸುಮಾರು 1.1 % ಮತ ಗಳಿಸಿದೆ. ಒಂದು ಕ್ಷೇತ್ರದಲ್ಲಿ 2 ನೇ ಸ್ಥಾನ ಮತ್ತು 6 ಕ್ಷೇತ್ರಗಳಲ್ಲಿ ಮೂರನೇ ಸ್ಥಾನ ಪಡೆದಿದೆ.

ಕಳೆದ ಬಾರಿ ಸಿಪಿಎಂ ಗೆದ್ದಿದ್ದ ಏಕೈಕ ವಿಧಾನಸಭಾ ಕ್ಷೇತ್ರ ಭದ್ರಾಚಲಂ ನ ಪ್ರಮುಖ 3 ಮಂಡಲ ಗಳನ್ನು ಪೋಲವರಂ ಪ್ರಾಜೆಕ್ಟ್ ಮುಳುಗು ಪ್ರದೇಶಗಳಾಗಿರುವುದರಿಂದ ಆಂಧ್ರ ಪ್ರದೇಶಕ್ಕೆ ಮರು ಸೇರ್ಪಡೆ ಮಾಡಿದ್ದು ಸಿಪಿಎಂ ನಿರಂತರವಾಗಿ ಗೆಲ್ಲುವ ಕ್ಷೇತ್ರದ ವಿಭಜನೆಯಾಗಿದೆ. ಇನ್ನು ಕಮ್ಯುನಿಸ್ಟ್ ಕಂಚು ಕೋಟೆ ಎಂದು ಪರಿಗಣಿಸಲಾಗಿದ್ದ ಖಮ್ಮಂ ಜಿಲ್ಲೆಯ ವೈರಾ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಎಂ ವಿರುದ್ಧ ಕಾಂಗ್ರೆಸ್ ಮೈತ್ರಿ ಕೂಟ ಸಿಪಿಐ ಗೆ ಟಿಕೆಟ್ ನೀಡಿತು. ಈ ಕ್ಷೇತ್ರದಲ್ಲಿ ಸಿಪಿಐ 32,000 ಮತ್ತು ಸಿಪಿಎಂ 13,000 ಮತ ಪಡೆದುಕೊಂಡು ಕಮ್ಯುನಿಸ್ಟ್ ಮತಗಳ ವಿಭಜನೆಯಿಂದ ಈ ಕ್ಷೇತ್ರದಲ್ಲಿ ಗೆಲ್ಲುವ ಅವಕಾಶ ಕೈ ತಪ್ಪಿದೆ. ಎಡಪಕ್ಷಗಳೆಲ್ಲ ಒಟ್ಟಾಗಿ ಸ್ಪರ್ಧಿಸಿದ್ದರೆ ಕನಿಷ್ಠ 3 ರಿಂದ 5 ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶವಿತ್ತು.





ಛತ್ತೀಸ್‌ಗಡದಲ್ಲಿ ಬಿಜೆಪಿಯ ಭರ್ಜರಿ ಸೋಲು

ಛತ್ತೀಸ್‌ಗಡ ರಾಜ್ಯದ ಫಲಿತಾಂಶ ಎಲ್ಲರಿಗೂ ಅಚ್ಚರಿ ಮೂಡಿಸಿದೆ. ಒಟ್ಟು 90 ಸ್ಥಾನಗಳಲ್ಲಿ ಕಾಂಗ್ರೆಸ್ 68ನ್ನು ಪಡೆದರೆ, ಬಿಜೆಪಿ ಕೇವಲ 15ನ್ನು ಪಡೆಯಿತು. 2013ರಲ್ಲಿ 41% ಮತಗಳಿಸಿ 49 ಸ್ಥಾನಗಳನ್ನು ಪಡೆದು ಅದು ಸರಕಾರ ರಚಿಸಿತ್ತು. 2008ರಲ್ಲೂ 40.33% ಮತಗಳಿಸಿ 50 ಸ್ಥಾನಗಳನ್ನು ಪಡೆದಿತ್ತು. 2013ಕ್ಕೆ ಹೋಲಿಸಿದರೆ ಈ ಬಾರಿ 8% ಮತಗಳನ್ನು ಕಳಕೊಂಡರೆ, 2014ರ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ 15.7% ಮತಗಳನ್ನು ಕಳಕೊಂಡಿದೆ. ರಾಜ್ಯದ 11 ಲೋಕಸಭಾ ಸ್ಥಾನಗಳಲ್ಲಿ 10ನ್ನು ಇದು ಪಡೆದಿತ್ತು, ಕೇವಲ 1 ಕಾಂಗ್ರೆಸ್‌ಗೆ ದೊರೆತಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಛತ್ತೀಸ್‌ಗಡದ ಆಗುಹೋಗುಗಳನ್ನು ಹತ್ತಿರದಿಂದ ನೋಡಿದವರಿಗೆ ಇದರಲ್ಲಿ ಆಶ್ಚರ್ಯವೇನೂ ಅನಿಸುತ್ತಿಲ್ಲವಂತೆ. ಬಿಜೆಪಿಯ ಸರಕಾರ ಯಾವುದೇ ಮುಲಾಜಿಲ್ಲದೆ ಅದು 'ವನವಾಸಿ'ಗಳೆಂದು ಹೇಳುವ ಆದಿವಾಸಿ ಜನಗಳ ಹಿತಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಷ್ಟೇ ಅಲ್ಲ, ಕಾರ್ಪೊರೇಟ್‌ಗಳ ಪರವಾಗಿ ಆದಿವಾಸಿಗಳ ವಿರುದ್ಧವಾಗಿ ಕೆಲಸ ಮಾಡಿದ್ದೇ ಇದಕ್ಕೆ ಪ್ರಧಾನ ಕಾರಣ ಎನ್ನಲಾಗಿದೆ. ಮುಖ್ಯವಾಗಿ ಬಿಜೆಪಿ ಮುಖ್ಯಮಂತ್ರಿಯ ಬಲಗೈ ಬಂಟನಂತಿದ್ದ ಪೋಲಿಸ್ ಸೂಪರಿಂಟೆಂಡೆಂಟ್ ಎಸ್.ಪಿ.ಕಲ್ಲೂರಿ ನಕ್ಸಲರ ಅಥವ ಮಾವೋವಾದಿಗಳ ದಮನದ ಹೆಸರಿನಲ್ಲಿ ನಡೆಸಿದ ಆದಿವಾಸಿಗಳ ತೀವ್ರ ದಮನದಿಂದ ಸಿಟ್ಟಿಗೆದ್ದ ಆದಿವಾಸಿ ಜನಗಳು ಬಿಜೆಪಿ ಸರಕಾರವನ್ನು ಕಿತ್ತೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆಧಿವಾಸಿಗಳ ಮೂಲಭೂತ ಪ್ರಜಾಪ್ರಭುತ್ವ ಹಕ್ಕುಗಳ ದಮನ, ಆ ಹಕ್ಕುಗಳ ರಕ್ಷಣೆಯಲ್ಲಿ ಅವರಿಗೆ ನೆರವಾಗಲು ಬಂದವರ ಮೇಲೂ ದಮನ, ಬುಡಕಟ್ಟು ಜನಗಳ ಭೂಮಿಗಳನ್ನು ಕಾನೂನುಬಾಹಿರವಾಗಿ ಕಾರ್ಪೊರೇಟ್‌ಗಳಿಗೆ ವಹಿಸಿಕೊಟ್ಟದ್ದು, ಇವೆರಡೂ ಸಾಲದೆಂಬಂತೆ ತನ್ನ ಹಿಂದುತ್ವ ರಾಜಕೀಯದ ಭಾಗವಾಗಿ ಬುಡಕಟ್ಟು ಜನಗಳನ್ನು ಹಿಂದುಗಳು ಮತ್ತು ಕ್ರೈಸ್ತರು ಎಂದು ವಿಭಜಿಸುವ ಪ್ರಯತ್ನ ಕೂಡ ಈ ಜನಗಳಲ್ಲಿ ಆಕ್ರೋಶ ಉಂಟು ಮಾಡಿತ್ತು ಎನ್ನಲಾಗಿದೆ.

ಈ ರಾಜ್ಯದ ಒಟ್ಟು 90 ಸ್ಥಾನಗಳಲ್ಲಿ 29 ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಿರುವ ಸ್ಥಾನಗಳು. 2013ರಲ್ಲಿ ಬಿಜೆಪಿ ಇವುಗಳಲ್ಲಿ 18 ಗೆದ್ದಿತ್ತು. ಆದರೆ ಈ ಬಾರಿ ಅದಕ್ಕೆ ದಕ್ಕಿದ್ದು ಕೇವಲ 3. ಕಾಂಗ್ರೆಸ್ 25ನ್ನು ಪಡೆದರೆ, ಉಳಿದ ಒಂದು ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿ, ಮತ್ತು ಈಗ ಜನತಾ ಕಾಂಗ್ರೆಸ್ ಛತ್ತೀಸ್‌ಗಡ(ಜೆಸಿಸಿ) ಪಕ್ಷದ ಮುಖ್ಯಸ್ಥ ಅಜಿತ್ ಜೋಗಿ ಗೆದ್ದಿದ್ದಾರೆ. ಇಲ್ಲಿ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಹೋಗಿದೆ.

ಅಜಿತ್ ಜೋಗಿಯವರ ಪಕ್ಷ ಬಿಎಸ್‌ಪಿಯೊಂದಿಗೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿರುವುದರಿಂದ ಬಿಜೆಪಿಗೆ ಲಾಭವಾಗಬಹುದು ಎಂದು ಹಲವರು ನಿರೀಕ್ಷಿಸಿದ್ದರೂ, ಅಜಿತ್ ಜೋಗಿಯವರು ಸ್ಪರ್ಧಿಸಿದ ಒಂದರಲ್ಲಿ ಮಾತ್ರ ಅದು ಕಂಡು ಬಂದಿದೆ. ಈ ಮೈತ್ರಿಕೂಟ 12% ಮತ ಗಳಿಸಿ 7 ಸ್ಥಾನಗಳನ್ನು ಪಡೆದಿದೆ.

ಒಟ್ಟಿನಲ್ಲಿ ಛತ್ತೀಸ್‌ಗಡದಲ್ಲಿ ಕಾಂಗ್ರೆಸ್ ಕಳೆದ ಬಾರಿಗಿಂತ ಕೇವಲ 3% ಹೆಚ್ಚಿನ ಮತಗಳಿಸಿ 30% ದಷ್ಟು ಹೆಚ್ಚಿನ ಸ್ಥಾನಗಳ ಮೂಲಕ 3/4 ಬಹುಮತ ಗಳಿಸಿದೆ. ನಿಜ, ಬಿಜೆಪಿಯ ಕಾರ್ಪೊರೇಟ್–ಪರ ದುರಾಡಳಿತದ ಹಿನ್ನೆಲೆಯಲ್ಲಿ ಸಾಲಮನ್ನಾ ಮುಂತಾದ ಬುಡಕಟ್ಟು ಮತ್ತಿತರ ಬಡಜನಸಮೂಹಗಳ ಪರವಾದ ಆಶ್ವಾಸನೆಗಳೂ ಪಾತ್ರ ವಹಿಸಿವೆ. ಆದರೂ ಇದು ಕಾಂಗ್ರೆಸಿನ ಭರ್ಜರಿ ಗೆಲುವು ಎನ್ನುವುದಕ್ಕಿಂತ ಬಿಜೆಪಿಯ ರಾಜಕೀಯಕ್ಕೆ ಆಗಿರುವ ಒಂದು ಭರ್ಜರಿ ಸೋಲು ಎನ್ನುವುದೇ ಹೆಚ್ಚು ಸೂಕ್ತ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ರಾಜಸ್ಥಾನ, ಮಧ್ಯಪ್ರದೇಶದಲ್ಲಿ ತಲಾ 13 ಛತ್ತೀಸ್‌ಗಡದಲ್ಲಿ 8 ಮಂತ್ರಿಗಳ ಸೋಲು

- ಛತ್ತೀಸ್‌ಗಡ ಬಿಜೆಪಿ ಮಂತ್ರಿಮಂಡಳದ ಮುಖ್ಯಮಂತ್ರಿ ಮತ್ತು ಅವರ ಮೂವರು ಸಹಯೋಗಿಗಳು ಮಾತ್ರ ಈ ಬಾರಿ ಗೆದ್ದಿದ್ದಾರೆ. ಉಳಿದ ಎಂಟು ಮಂತ್ರಿಗಳು ಸೋತಿದ್ದಾರೆ. ವಿಧಾನಸಭಾ ಅಧ್ಯಕ್ಷರು ಕೂಡ ಕಾಂಗ್ರೆಸ್‌ನ ಯುವ ಅಭ್ಯರ್ಥಿಯಿಂದ ಸೋಲುಂಡಿದ್ದಾರೆ.
- ರಾಜಸ್ಥಾನದ 19 ಬಿಜೆಪಿ ಮಂತ್ರಿಗಳಲ್ಲಿ 13 ಮಂತ್ರಿಗಳನ್ನು ಮತದಾರರು ತಿರಸ್ಕರಿಸಿದ್ದಾರೆ. ಮುಖ್ಯಮಂತ್ರಿಗಳ ಗೆಲುವಿನ ಅಂತರವೂ ಸುಮಾರು ಅರ್ಧಕ್ಕೆ ಇಳಿದಿದೆ: 60,896 ರಿಂದ 34,980ಕ್ಕೆ. ಸೋತ ಮಂತ್ರಿಗಳಲ್ಲಿ ಬಿಜೆಪಿಯ ಏಕೈಕ ಮುಸ್ಲಿಂ ಅಭ್ಯರ್ಥಿಯೂ ಸೇರಿದ್ದಾರೆ. ಅವರು ಕಾಂಗ್ರೆಸ್ ರಾಜ್ಯ ಅಧ್ಯಕ್ಷ ಸಚಿನ್ ಪೈಲಟ್ ಎದುರು 54179 ಮತಗಳಿಂದ ಸೋತಿದ್ದಾರೆ.
- ಮಧ್ಯಪ್ರದೇಶದಲ್ಲಿ 20ರಲ್ಲಿ 13 ಮಂತ್ರಿಗಳು ಮತದಾರರ ತಿರಸ್ಕಾರಕ್ಕೆ ತುತ್ತಾಗಿದ್ದಾರೆ. ಇವರಲ್ಲಿ ದೇಶದ ಮೊದಲ 'ಸಂತೋಷದ ಮಂತ್ರಿ' ಲಾಲ್ ಸಿಂಗ್ ಆರ್ಯ ಪ್ರಮುಖರು. ಜನಗಳಿಗೆ ಸಂತೋಷ ಒದಗಿಸಲೆಂದೇ ಒಬ್ಬ ಮಂತ್ರಿಯನ್ನು ನೇಮಿಸಿರುವ 'ಹೆಗ್ಗಳಿಕೆ' ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಚೌಹಾಣ್‌ರದ್ದು. ಮತದಾರರು ಇಂತಹ ಸ್ಟಂಟ್‌ಗಳು ತಮಗೆ ಬೇಕಿಲ್ಲ ಎಂದು ಸಾರಿ ಹೇಳಿದ್ದಾರೆ. ಈ ಮಂತ್ರಿಗಳೂ ತಮ್ಮ ಸೋಲಿಗೆ ಮುಖ್ಯಮಂತ್ರಿಗಳನ್ನೇ ದೂಷಿಸಿದ್ದಾರಂತೆ!
- 33 ವರ್ಷಗಳ ನಂತರ ಮಧ್ಯಪ್ರದೇಶದ ವಿಧಾನಸಭೆಗೆ ಈ ಬಾರಿ ಇಬ್ಬರು ಮುಸ್ಲಿಮ್ ಅಭ್ಯರ್ಥಿಗಳು ಆರಿಸಿ ಬಂದಿದ್ದಾರೆ. ಇವರು ಬಿಜೆಪಿ ಅಭ್ಯರ್ಥಿಗಳಲ್ಲ ಎಂದು ಬೇರೆ ಹೇಳಬೇಕಾಗಿಲ್ಲ!

ಮಿಝೋರಾಂ ಬಿಜೆಪಿ ಅಧ್ಯಕ್ಷರಿಗೆ ಠೇವಣಿ ನಷ್ಟ

ಮಿಝೊ ನ್ಯಾಶನಲ್ ಫ್ರಂಟ್ ಅಥವ ಎಂಎನ್‌ಎಫ್ ಈಶಾನ್ಯ ಭಾರತದಲ್ಲಿ ನೆಲೆಯೂರಲು ಬಿಜೆಪಿ ರಚಿಸಿದ ಈಶಾನ್ಯ ಭಾರತ ಎನ್‌ಡಿಎ ರಂಗದ ಭಾಗವಾಗಿದ್ದರೂ ಬಿಜೆಪಿಯೊಂದಿಗೆ ಮೈತ್ರಿಗೆ ಒಪ್ಪದೆ ಸ್ವತಂತ್ರವಾಗಿ ಸ್ಪರ್ಧಿಸಿ 40 ರಲ್ಲಿ 26 ಸ್ಥಾನಗಳಲ್ಲಿ ಜಯಗಳಿಸಿ ಅಧಿಕಾರ ಪಡೆದಿದೆ.

ಬಿಜೆಪಿ 39 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಬಿಜೆಪಿ ರಾಜ್ಯ ಅಧ್ಯಕ್ಷರು ಸೇರಿದಂತೆ 33 ಮಂದಿ ಠೇವಣಿ ಕಳಕೊಂಡಿದ್ದಾರೆ. ಇವರೂ ಸೇರಿದಂತೆ ಬಹಳಷ್ಟು ಬಿಜೆಪಿ ಅಭ್ಯರ್ಥಿಗಳು ಕಾಂಗ್ರೆಸ್ ಪಕ್ಷಾಂತರಿಗಳು ಎಂಬುದು ಗಮನಾರ್ಹ. ಈ ಮೂಲಕ ಕಾಂಗ್ರೆಸ್ ಈಶಾನ್ಯ ಭಾರತದಲ್ಲಿ ಉಳಿದುಕೊಂಡಿದ್ದ ಏಕೈಕ ಸರಕಾರವನ್ನೂ ಕಳೆದುಕೊಂಡಿರುವುದರಿಂದ ಈಶಾನ್ಯ ಭಾರತವನ್ನಂತೂ ಕಾಂಗ್ರೆಸ್–ಮುಕ್ತಗೊಳಿಸಲು ಸಾಧ್ಯವಾಗಿದೆ ಎಂಬ ಸಂತೃಪ್ತಿಯಂತೆ ಬಿಜೆಪಿ ಮುಖಂಡರಿಗೆ!

ಯೋಗೀಜೀ ಫ್ಲಾಪ್ ಷೋ

"ನಿಮ್ಮ ರಾಮಮಂದಿರ ನಿಮಗಿರಲಿ, ನಮಗೆ ರೊಟ್ಟಿ, ಕೆಲಸ ಬೇಕು"

ಪುಟ 9 ರಿಂದ

ಇಂತಹ ಘೋಷಣೆಗಳನ್ನು ಬಹುವಾಗಿ ನಂಬಿರುವ ದಾಖಲೆಯಿರುವ ಮೂರು ಹಿಂದಿ–ಭಾಷಿಕ ರಾಜ್ಯಗಳ ಮತದಾರರು, "ಅಯೋಧ್ಯೆಯಲ್ಲ, ಸಾಲಮನ್ನಾ ಬೇಕು" ಎಂಬ ಎರಡು ವಾರಗಳ ಹಿಂದೆ ದಿಲ್ಲಿಯಲ್ಲಿ ಸಾವಿರಾರು ರೈತರ ಘೋಷಣೆಗಿಂತ ಇನ್ನೂ ಮುಂದೆ ಹೋಗಿ "ನಿಮ್ಮ ರಾಮಮಂದಿರ ನಿಮಗಿರಲಿ, ನಮಗೆ ರೊಟ್ಟಿ ಬೇಕು" ಎಂದು ಸಾರಿ ಹೇಳಿದ್ದಾರೆ.

ಈ ಬಾರಿ ವಿಧಾನಸಭಾ ಚುನಾವಣೆಗಳ ಪ್ರಚಾರದಲ್ಲಿ ಉತ್ತರಪ್ರದೇಶದ ಈ ಮುಖ್ಯಮಂತ್ರಿ ಪ್ರಧಾನ ಮಂತ್ರಿಗಳನ್ನು ಮೀರಿಸಿ ಸುಮಾರು 100 ಪ್ರಚಾರ ಸಭೆಗಳಲ್ಲಿ ರಾಮಮಂದಿರ ನಿರ್ಮಾಣದ ಬಗ್ಗೆ ಹೇಳುತ್ತ "ರಾಮನಿಗೆ ಸಲ್ಲದವರು ನಮಗೆ ಕೆಲಸಕ್ಕೆ ಬಾರದವರು"(ಜೋ ರಾಮ್ ಕಾ ನಹೀ, ವೊ ಹಮಾರೇ ಕಿಸೀ ಕಾಮ್ ಕಾ ನಹೀ) ಎಂದು ಗುಡುಗಿದರು.

ಬಾಬ್ರಿ ಮಸೀದಿ ಧ್ವಂಸದ ಖ್ಯಾತಿಯ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಉಮಾ ಭಾರತಿ ಕೂಡ ಈ ಗುಡುಗು ಸ್ಪರ್ಧೆಯಲ್ಲಿದ್ದರು. ಆದರೆ ಈ ಮೂರು ರಾಜ್ಯಗಳ ಮತದಾರರು ಅವಕ್ಕೆಲ್ಲ ಸೊಪ್ಪು ಹಾಕದೆ "ಅನ್ನ, ಕೆಲಸ ಕೊಡಲಾರದವರು ನಮ್ಮ ಕೆಲಸಕ್ಕೆ ಬಾರದವರು" ಎಂದು ಪ್ರತ್ಯುತ್ತರ ನೀಡಿದ್ದಾರೆ. ಈಗ ಮಾಜಿಯಾಗಿರುವ ಮುಖ್ಯಮಂತ್ರಿಗಳು ಈ ಯೋಗಿವರ್ಯರ ಪಾದಪೂಜೆ ಮಾಡಿದ ಛತ್ತೀಸ್‌ಗಡದಲ್ಲಿ, ಮಹಾಸಂತನ ಆದರೋಪಚಾರಗಳನ್ನು ಪಡೆದು 20ಕ್ಕೂ ಹೆಚ್ಚು ಸಭೆಗಳಲ್ಲಿ ಭಾಷಣ ಮಾಡಿದರಂತೆ. ಆದರೆ ಅಲ್ಲಿಯ ಮತದಾರರು ತಮ್ಮ ಶಕ್ತಿಯನ್ನೆಲ್ಲ ಬಳಸಿ ಪ್ರತ್ಯುತ್ತರ ನೀಡಿರುವಂತೆ ಕಾಣುತ್ತದೆ.

ಮೂರು ಹಿಂದಿ ರಾಜ್ಯಗಳಲ್ಲಿ ಬಿಜೆಪಿ 30 ರಿಂದ 44 ಸೀಟು ಕಳೆದುಕೊಳ್ಳಲಿದೆ

ಪುಟ 9 ರಿಂದ

ರಾಜ್ಯಗಳ 65 ಸೀಟುಗಳಲ್ಲಿ 44 ಸೀಟುಗಳನ್ನು ಕಳೆದುಕೊಂಡು 21 ಸೀಟುಗಳಿಗೆ ಇಳಿಯಲಿದೆ.

ಇಡೀ ದೇಶದ ಮೇಲೆ ಈ ಪರಿಣಾಮಗಳನ್ನೂ, ಮತ್ತು ಇವನ್ನು ದೇಶದ 'ಮೂಡ್' ಎಂದು ತೆಗೆದುಕೊಂಡು ಲೆಕ್ಕಾಚಾರ ಹಾಕಿ ಒಟ್ಟು ಬಿಜೆಪಿ 100 ಸೀಟುಗಳನ್ನು ಕಳೆದುಕೊಳ್ಳಬಹುದು ಎಂದು ಹೇಳಲಾಗಿದೆ.

ಈ ಎರಡೂ ವಿಧಾನಗಳನ್ನು ಪ್ರಶ್ನಿಸುವವರೂ ಇದ್ದಾರೆ. ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳು ಬೇರೆ. ಮೋದಿಯ ಪ್ರಭಾವ ಲೋಕಸಭಾ ಚುನಾವಣೆಯಲ್ಲಿ ಈಗಿದ್ದಕ್ಕಿಂತ ಹೆಚ್ಚಿರಲಿದೆ. ಇದಕ್ಕೆ ಪ್ರತಿಯಾಗಿ ಮಧ್ಯ ಪ್ರದೇಶ ಮತ್ತು ಛತ್ತಿಸಗಡದಲ್ಲಿ ರಾಜ್ಯ ಮುಖ್ಯಮಂತ್ರಿಗಳು 'ಜನಪ್ರಿಯ'ರಾಗಿದ್ದರೂ ಬಿಜೆಪಿ ಸೋತದ್ದು ಹೇಗೆ ಎಂದು ಪ್ರಶ್ನಿಸಿ, ಈ ಎರಡು ರಾಜ್ಯಗಳಲ್ಲಿ ಪ್ರಧಾನಿ ಮೋದಿಯ ಮತ್ತು ಕೇಂದ್ರ ಸರಕಾರದ ವೈಫಲ್ಯಗಳ ವಿರುದ್ಧ ಆಕ್ರೋಶ ಎಂದು ವಾದಿಸುವವರೂ ಇದ್ದಾರೆ. ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಇನ್ನಷ್ಟು ಮತಗಳನ್ನು ಕಳೆದುಕೊಳ್ಳಲಿದೆ. ಬಿಜೆಪಿ–ವಿರೋಧಿ ಪಕ್ಷಗಳ ಮೈತ್ರಿಕೂಟ ಈ ಮೂರು ರಾಜ್ಯಗಳಲ್ಲಂತೂ ರಚನೆಯಾಗಲಿದೆ. ಅದರ ಒಟ್ಟು ಪರಿಣಾಮ ಇನ್ನಷ್ಟು ಹೆಚ್ಚು ಇರುತ್ತದೆ ಎನ್ನುತ್ತಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಘಟಕವಾದ ಅಕಾಲಿ ದಳದ ಸರಸದ್ ಸದಸ್ಯ ನರೇಶ ಗುಜ್ರಾಲ್ ಪ್ರಕಾರ ಬಿಜೆಪಿಯ ಸೀಟುಗಳ ಸಂಖ್ಯೆ 200ನ್ನೂ ದಾಟುವುದಿಲ್ಲ!

ದಲಿತ ಮಾನವ ಹಕ್ಕುಗಳ ಸಂಘಟನೆಯಿಂದ ದಲಿತ ಪ್ರಣಾಳಿಕೆ ಬಿಡುಗಡೆ:

ನ್ಯಾಯದ ಹಕ್ಕು, ಆರ್ಥಿಕ ಅಧಿಕಾರಗಳು ಮತ್ತು ಖಾಸಗಿ ರಂಗದಲ್ಲಿ ಮೀಸಲಾತಿಗೆ ಆಗ್ರಹ

2019ರ ಸಾರ್ವತ್ರಿಕ ಚುನಾವಣೆಗಳಲ್ಲಿ ದಲಿತರ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಒಂದು 'ದಲಿತ' ಪ್ರಣಾಳಿಕೆಯನ್ನು 'ರಾಷ್ಟ್ರೀಯ ದಲಿತ ಮಾನವ ಹಕ್ಕುಗಳ ಪ್ರಚಾರಾಂದೋಲನ'(ಎನ್‌ಸಿಡಿಹೆಚ್‌ಆರ್) ಡಿಸೆಂಬರ್ 10 ರಂದು ಬಿಡುಗಡೆ ಮಾಡಿದೆ. 12 ವಿಧಗಳ ಅಡಿಯಲ್ಲಿ ತನ್ನ ಬೇಡಿಕೆಗಳನ್ನು ಪಟ್ಟಿ ಮಾಡಿರುವ ಈ ಸಂಘಟನೆ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ದಲಿತರ ಪ್ರಶ್ನೆಗಳ ಬಗ್ಗೆ ಕಾಳಜಿಗಳನ್ನು ಸೇರಿಸಬೇಕು ಎಂದು ಮನವಿ ಮಾಡಿದೆ.



20 ವರ್ಷಗಳಿಂದ ದಲಿತ ಹಕ್ಕುಗಳ ರಂಗದಲ್ಲಿ ಕೆಲಸ ಮಾಡುತ್ತಿರುವ ಈ ಸಂಘಟನೆಯ ರಾಷ್ಟ್ರೀಯ ಸಂಯೋಜಕರಾಗಿ ಮತ್ತೆ ಪುನರಾಯ್ಕೆಗೊಂಡಿರುವ ಪ್ರೊ. ವಿಮಲ್ ಥೋರಟ್ ಈ ಬಗ್ಗೆ ಹೇಳುತ್ತ, ದಲಿತರ ಮೇಲೆ ಅತ್ಯಾಚಾರಗಳು ಕಳೆದ ಕೆಲವು ವರ್ಷಗಳಿಂದ ಹೆಚ್ಚುತ್ತಿವೆ, ಪ್ರಸಕ್ತ ಬಿಜೆಪಿ ಸರಕಾರದ ಅಡಿಯಲ್ಲಿ ದಲಿತ ವಿಭಾಗಗಳಿಗೆಡ ರಕ್ಷಣೆ ಸಿಗುವ ಬದಲು ಅವರ ಜೀವನ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ, ಇದು ಆರೋಗ್ಯ ಮತ್ತು ಶಿಕ್ಷಣಕ್ಕೆ ಬಜೆಟಿನಲ್ಲಿ ನೀಡಿರುವ ಹಣದ ಕಡಿತದಲ್ಲಿ ಕಾಣುತ್ತದೆ ಎಂದಿದ್ದಾರೆ.

ಯುವ ದಲಿತರು ಮತ್ತು ಆದಿವಾಸಿಗಳು ಶಿಕ್ಷಣ ಪಡೆಯುವಲ್ಲಿ ಕೂಡ ದೊಡ್ಡ ಪ್ರಶ್ನೆಗಳನ್ನು ಎದುರಿಸುತ್ತಿದ್ದಾರೆ, ಏಕೆಂದರೆ ಮ್ಯಾಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳನ್ನು ಕಳೆದ ಮೂರು ವರ್ಷಗಳಿಂದ ಕೊಡಲಾಗುತ್ತಿಲ್ಲ, ಇದು ಸಾವಿರಾರು ವಿದ್ಯಾರ್ಥಿಗಳನ್ನು ಬಾಧಿಸುತ್ತಿದೆ ಎಂದು ಅವರು ಹೇಳಿದರು.

ದಲಿತರ ಹಕ್ಕುಗಳಿಗೆ ಸಮಾಜದಲ್ಲಿ ಮಾನ್ಯತೆ ಮತ್ತು ಬೆಂಬಲ ಸಿಕ್ಕಿರುವುದು ಬಹಳ ಕಡಿಮೆ ಎಂದಿರುವ ಈ ಪ್ರಣಾಳಿಕೆ ನ್ಯಾಯದ ಲಭ್ಯತೆ, ದಲಿತ ಮಹಿಳೆಯರಿಗೆ ನ್ಯಾಯ ಪಡೆಯುವ ಹಕ್ಕು, ಆರ್ಥಿಕ ಅಧಿಕಾರಗಳನ್ನು, ಶಿಕ್ಷಣವನ್ನು, ಆರೋಗ್ಯರಕ್ಷಣೆಯನ್ನು ಪಡೆಯುವ ಹಕ್ಕುಗಳು, ಖಾಸಗಿ ವಲಯದಲ್ಲಿ ಮೀಸಲಾತಿ, ಸೌಲಭ್ಯಗಳನ್ನು, ಪರಿಹಾರಗಳನ್ನು ಒದಗಿಸುವಲ್ಲಿ ನಿಷ್ಪಕ್ಷಪಾತತೆ, ಭೂಮಿ ಹಕ್ಕುಗಳ ರಕ್ಷಣೆ, ಒಕ್ಕಲೆಬ್ಬಿಸದಂತೆ ರಕ್ಷಣೆ ಮುಂತಾದ ಪ್ರಶ್ನೆಗಳನ್ನು ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಎತ್ತಬೇಕು ಎಂದು ಈ ದಲಿತ ಪ್ರಣಾಳಿಕೆ ಆಗ್ರಹಿಸಿದೆ. ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ ವಿಶೇಷ ಘಟಕ ಯೋಜನೆಯನ್ನು ನಿಷ್ಕ್ರಿಯಗೊಳಿಸದಂತೆ ಅದನ್ನು ಕುರಿತಂತೆ ಒಂದು ಕೇಂದ್ರೀಯ ಶಾಸನ ತರಬೇಕು, ಈಗಿರುವ ಭೂಮಿ ಕುರಿತ ಕಾನೂನುಗಳನ್ನು ಸರಿಯಾಗಿ ಜಾರಿ ಮಾಡಬೇಕು, ಪ್ರತಿಯೊಂದು ಪರಿಶಿಷ್ಟ ಜಾತಿ/ಬುಡಕಟ್ಟು ಕುಟುಂಬಕ್ಕೆ 5 ಎಕ್ರೆ ಕೃಷಿಯೋಗ್ಯ ಭೂಮಿಯನ್ನು ಕೊಡಬೇಕು ಎಂದು ಈ ದಲಿತ ಪ್ರಣಾಳಿಕೆ ಆಗ್ರಹಿಸಿದೆ.

ಬುಲೆಟ್ ರೈಲು: ಅಚ್ಚೇ ದಿನ್‌ಗಳಲ್ಲಿ ಸಿಗದ ನ್ಯಾಯಕ್ಕೆ ಈಗ ಸಾಲ ಕೊಡುವ ಜಪಾನಿಗೇ ಮೊರೆ!

ಅಚ್ಛೆ ದಿನ್‌ಗಳ ಪ್ರತೀಕವಾಗಿಸಿದ ಬುಲೆಟ್ ರೈಲು ಅಹವಾಲು ಈಗ ನೇರವಾಗಿ ಅದಕ್ಕೆ ಹಣಕಾಸು ಒದಗಿಸುವ ಜಪಾನೀ ಸಂಸ್ಥೆಯನ್ನೇ ತಟ್ಟಿದೆ. ಈ 1.1ಲಕ್ಷ ಕೋಟಿ ರೂ.ಗಳ ಪ್ರಧಾನಿಗಳ ಪರಮಪ್ರಿಯ ಪ್ರಾಜೆಕ್ಟಿಗೆ 'ಜಪಾನ್ ಇಂಟರ್‌ನ್ಯಾಶನಲ್ ಕೋ-ಅಪರೇಶನ್ ಏಜೆನ್ಸಿ' ಅಥವ ಜೆಐಸಿಎ 88,000 ಕೋಟಿ ರೂ.ಗಳ ಕಡಿಮೆ ಬಡ್ಡಿಯ ಸಾಲ ಒದಗಿಸುತ್ತಿದೆ. ಆದರೆ ಈ ಸಂಸ್ಥೆ ಒಂದು ಅಂತರ್‍ರಾಷ್ಟ್ರೀಯ ಸಂಧಿಗೆ ಸಹಿ ಹಾಕಿದ್ದು, ಅದರ ಪ್ರಕಾರ ಅದು 42 ಪುಟಗಳ ಮಾರ್ಗದರ್ಶಕ ನಿಯಮಗಳನ್ನು ತಯಾರಿಸಿದೆ. ತಾನು ಸಾಲ ಕೊಡುವಾಗ ಈ ಮಾರ್ಗದರ್ಶಕ ನಿಯಮಗಳ ಉಲ್ಲಂಘನೆಯಾಗುತ್ತಿದೆಯೇ ಎಂದು ಅದು ಖಾತ್ರಿ ಪಡಿಸಿಕೊಳ್ಳಬೇಕಾಗುತ್ತದೆ. ಕೇವಲ 750 ಮಂದಿ ಅಹಮದಾಬಾದಿನಿಂದ ಮುಂಬೈಗೆ ಆರು ಗಂಟೆಗಳ ಬದಲು ಎರಡು ಗಂಟೆಯಲ್ಲೇ ತಲುಪುವಂತೆ ಮಾಡುವ ಈ ಮಹಾನ್ ಪ್ರಾಜೆಕ್ಟ್ ಬುಲೆಟ್ ರೈಲು ಹಾದು ಹೋಗುವ ಗುಜರಾತ್‌ನ ಎಂಟು ಜಿಲ್ಲೆಗಳು ಮತ್ತು ಮಹಾರಾಷ್ಟ್ರದ ಮೂರು ಜಿಲ್ಲೆಗಳ 3600 ರೈತ ಮತ್ತು ಆದಿವಾಸಿ ಕುಟುಂಬಗಳನ್ನು ಬಾಧಿಸುತ್ತದೆ. ಇದನ್ನು ನಿರ್ಲಕ್ಷಿಸಿ ಗುಜರಾತ್ ಸರಕಾರ ಈಗಿರುವ ಕಾಯ್ದೆಗಳನ್ನು ಉಲ್ಲಂಘಿಸಿ ಭೂಸ್ವಾಧೀನದ ಪ್ರಕ್ರಿಯೆಯನ್ನು ಆರಂಭಿಸಿದೆ, ಆದ್ದರಿಂದ ಇವರು ಇದರ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಜೆಐಸಿಎಗೂ ಅವರು ಈ ಬಗ್ಗೆ ಬರೆದಿದ್ದರು. ಆದರೆ ಅದು ಅವರ ಅಹವಾಲುಗಳಿಗೆ ಗಮನ ಹರಿಸಿರಲಿಲ್ಲ. ಅದರೆ 1200 ಕ್ಕೂ ಹೆಚ್ಚು ರೈತರು ತಾವು ಈ ಪ್ರಾಜೆಕ್ಟಿಗಾಗಿ ತಮ್ಮ ಜಮೀನನ್ನು ಬಿಟ್ಟುಕೊಡುವುದಿಲ್ಲ ಎಂದು ಗುಜರಾತ್ ಹೈಕೋರ್ಟಿನಲ್ಲಿ ಅಫಿಡವಿಟ್ ಸಲ್ಲಿಸಿದ ಮೇಲೆ ಗುಜರಾತ್ ಸರಕಾರ ಗಮನ ಹರಿಸದಿದ್ದರೂ, ಜೆಐಸಿಎ ಗಮನ ಹರಿಸಬೇಕಾಗಿ ಬಂದಿದೆ. ಏಕೆಂದರೆ ಅದರ 42 ಪುಟಗಳ ಮಾರ್ಗದರ್ಶಕ ನಿಯಮಗಳು ಕಟ್ಟುನಿಟ್ಟಾಗಿವೆ ಎನ್ನಲಾಗಿದೆ. ಮೂಲನಿವಾಸಿಗಳ ಹುಕ್ಕುಗಳ ಉಲ್ಲಂಘನೆಯಾಗಬಾರದು, ಸಾಮಾಜಿಕ ಆಯಾಮಗಳನ್ನು, ಪರಿಸರ ಆಯಾಮಗಳನ್ನು ಪರಿಶೀಲಿಸಬೇಕು, ಮಾನವ ಹಕ್ಕುಗಳ ಪ್ರಶ್ನೆಯನ್ನೂ ಪರಿಶೀಲಿಸಬೇಕು ಎಂದೆಲ್ಲ ಇದೆ. ಇವೆಲ್ಲವುಗಳ ಉಲ್ಲಂಘನೆಯಾಗುತ್ತಿದೆ ಎಂಬ ಅಹವಾಲು ಹೋದ ಮೇಲೆ, ಹೈಕೋರ್ಟಿನಲ್ಲಿ ಅಫಿಡವಿಟ್‌ಗಳನ್ನು ಕೂಡ ಸಲ್ಲಿಸಿದ ಮೇಲೆ ಅವರು ಈ ಬಗ್ಗೆ ಪರಿಶೀಲನೆ ಮಾಡಲೆ ಬೇಕಾಗಿ ಬಂದಿದ್ದು, ಡಿಸೆಂಬರ್ 7-8ರಂದು ಅವರ ಮೂವರು ಸದಸ್ಯರ ತಂಡ ಈ ಪ್ರದೇಶಕ್ಕೆ ಭೇಟಿ ನೀಡಿದೆ. ಡಿಸೆಂಬರ್ 7ರಂದು ನವಸಾರಿ, ವಲ್ಸಾಡ್, ಭರುಚ್ ಮತ್ತು ಸುರತ್‌ನ ನೂರಾರು ರೈತರನ್ನು ಮತ್ತು ಮರುದಿನ ರೈತ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಪರಿಸರ ಕ್ಷೇತ್ರದಲ್ಲಿ ಕೆಲಸ ಮಾಡುವ ಎನ್‌ಜಿಒ ಗಳ ಪ್ರತಿನಿಧಿಗಳನ್ನು ಭೇಟಿ ಮಾಡಿದೆ. ಮಹಾರಾಷ್ಟ್ರದ ಇಬ್ಬರು ಆದಿವಾಸಿಗಳ ಪ್ರತಿನಿಧಿಗಳನ್ನೂ ಭೇಟಿ ಮಾಡಿದೆ ಎಂದು ತಿಳಿದು ಬಂದಿದೆ.

ಈ ನಡುವೆ ಕೇಂದ್ರದ 2013ರ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ಕುರಿತಂತೆ ಸುಪ್ರಿಂ ಕೋರ್ಟ್ ಐದು ರಾಜ್ಯ ಸರಕಾರಗಳಿಗೆ ನೋಟೀಸು ಕಳಿಸಿದೆ. ಇದರಲ್ಲಿ ಗುಜರಾತ್ ಕೂಡ ಸೇರಿದೆ. ಭೂಸ್ವಾಧೀನದ ವೇಳೆಯಲ್ಲಿ ಬಾಧಿತರ ಸಮ್ಮತಿ ಪಡೆಯಬೇಕು, ಸಾಮಾಜಿಕ ಪರಿಣಾಮಗಳ ಪರಿಶೀಲನೆ ಮಾಡಬೇಕು, ಸಾರ್ವಜನಿಕ ಸಮಾಲೋಚನೆ ನಡೆಸಬೇಕು, ಎಂಬಿತ್ಯಾದಿ ಈ ಕಾಯ್ದೆಯ ಅಂಶಗಳನ್ನು ಕೇಂದ್ರ ಸರಕಾರ ಅಚ್ಚೇ ದಿನ್‌ಗಳ ಆರಂಭದಲ್ಲೇ ಕೈಬಿಡುವ ತಿದ್ದುಪಡಿಗಳನ್ನು ತರಲು ಪ್ರಯತ್ನಿಸಿದಾಗ ಅದಕ್ಕೆ ದೇಶಾದ್ಯಂತ ರೈತ ಸಂಘಟನೆಗಳಿಂದ ತೀವ್ರ ಪ್ರತಿರೋಧ ಬಂದ ನಂತರ ಕೈಬಿಡಬೇಕಾಗಿ ಬಂದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೂ ತನ್ನ ಆಳ್ವಿಕೆಯ ರಾಜ್ಯ ಸರಕಾರಗಳ ಮೂಲಕ ಇದನ್ನು ಪರೋಕ್ಷವಾಗಿ ತರಲು ಪ್ರಯತ್ನಿಸಿದ್ದನ್ನು ಕೂಡ ನೆನಪಿಸಿಕೊಳ್ಳಬಹುದು. ಇದನ್ನು ಬಳಸಿಕೊಂಡೇ ಗುಕರಾತ್ ಮತ್ತು ಮಹಾರಾಷ್ಟ್ರ ಸರಕಾರಗಳು ರೈತರ, ಆದಿವಾಸಿಗಳ ಪ್ರತಿಭಟನೆಯನ್ನೂ ಲೆಕ್ಕಿಸದೆ 'ಸಾರ್ವಜನಿಕ ಹಿತಾಸಕ್ತಿ'ಯ ಹೆಸರಲ್ಲಿ ಭೂಸ್ವಾಧೀನ ಮಾಡುವ ಪ್ರಯತ್ನ ನಡೆಸುತ್ತಿವೆ..

ಈಗ ಇದು ಜೆಐಸಿಎ ಪರಿಶೀಲನೆಗೂ, ಸುಪ್ರಿಂ ಕೋರ್ಟ್ ಪರಿಶೀಲನೆಗೂ ಹೋಗಿರುವುದು ಬಾಧಿತ ರೈತರು, ಆದಿವಾಸಿಗಳಲ್ಲಿ ಹೊಸ ಆಸೆ ಚಿಗುರಿಸಿದೆ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂದು ಹೇಳುತ್ತಲೇ ಅದನ್ನು ಆಗಲೇ ಜುಮ್ಲಾ ಮಾಡಿ ಬಿಟ್ಟಿರುವ ಪಕ್ಷದ ಈ ಸರಕಾರಗಳು ಇನ್ನೇನಾದರೂ ಹುನ್ನಾರ ನಡೆಸಿ ಇದನ್ನೂ ಚಿವುಟಿ ಹಾಕುತ್ತಾರೆಯೇ ಕಾದು ನೋಡಬೇಕಾಗಿದೆ.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಸುಪ್ರಿಂ ಕೋರ್ಟಿನಿಂದ ವಿಳಂಬವಾಗುತ್ತಿದ್ದರೆ ಸುಗ್ರೀವಾಜ್ಞೆ ತನ್ನಿ ಎಂಬ ಒತ್ತಡ ಹೆಚ್ಚುತ್ತಿದೆ

– ಸುದ್ದಿ 1

ಸುಪ್ರಿಂ ಕೊರ್ಟ್ ವಿಚಾರಣೆಯನ್ನು ವಿಳಂಬ ಮಾಡುವಂತೆ ಕಾಂಗ್ರೆಸ್ ಮುಖಂಡರು ಬೆದರಿಸಿದ್ದಾರೆ ಎಂದು ಪ್ರಧಾನ ಮಂತ್ರಿಗಳು ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದರು


–ಸುದ್ದಿ 2

ನಾನೀಗ ಪ್ರಜಾಪ್ರಭುತ್ವದ ಮಂದಿರವನ್ನು ಪ್ರವೇಶಿಸುತ್ತಿದ್ದೇನೆ ಎಂದು ಪ್ರಧಾನ ಮಂತ್ರಿಗಳು ಮೊದಲ ಬಾರಿಗೆ ಸಂಸದ್ ಭವನ ಪ್ರವೇಶಿಸುವ ಮೊದಲು ಸಾಷ್ಟಾಂಗ ನಮಸ್ಕಾರ ಮಾಡಿದರು

–ನಾಲ್ಕೂವರೆ ವರ್ಷಗಳ ಹಿಂದಿನ ಒಂದು ಸುದ್ದಿ



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್



1ರೂ. ಕೆ.ಜಿ. ಈರುಳ್ಳಿಯ ವಂತಿಗೆ ಆನ್‌ಲೈನ್ ಕಳಿಸುವಂತೆ ತಾಕೀತು ಮಾಡಿದ ಪ್ರಧಾನ ಸೇವಕರ ಕಚೇರಿ!

ಆನ್‌ಲೈನ್ 750 ಕೆಜಿ ಈರುಳ್ಳಿಗೆ ಮಾರುಕಟ್ಟೆಯಲ್ಲಿ ಕೇವಲ 1064 ರೂ. ಸಿಕ್ಕಿದ್ದರಿಂದ ಬೇಸರಗೊಂಡ ಮಹಾರಾಷ್ಟ್ರದ ರೈತ ಸಂಜಯ್ ಸಾಠೆ ಅದನ್ನು ತನ್ನ ಸಂಕಟದ ಸಂಕೇತವಾಗಿ ಪ್ರಧಾನ ಮಂತ್ರಿಗಳ ವಿನಾಶ ಪರಿಹಾರ ನಿಧಿಗೆ ವಂತಿಗೆಯಾಗಿ ಕಳಿಸಿದ್ದು ಈ ಹಿಂದೆ ಸುದ್ದಿಯಾಗಿತ್ತು. ಆದರೆ ಪ್ರಧಾನ ಮಂತ್ರಿಗಳ ಕಚೇರಿಯ ಮಂದಿಗೆ ಈ ಸಂಕಟ ಅರ್ಥವಾದಂತಿಲ್ಲ. ಪ್ರಧಾನ ಸೇವಕರು ಎಂಬವರ ಆ ಕಚೇರಿ ಅದನ್ನು ಹಿಂದಕ್ಕೆ ಕಳಿಸಿ ಮನಿ ಆರ್ಡರ್ ಬದಲಿಗೆ ಬ್ಯಾಂಕಿನಿಂದ ಆನ್‌ಲೈನ್ ವರ್ಗಾವಣೆ ಮಾಡುವಂತೆ ಸೂಚಿಸಿದ್ದಾರೆ ಎಂದು ವರದಿಯಾಗಿದೆ. (ನ್ಯೂಸ್ ಸೆಂಟ್ರಲ್, ಡಿ.11)

ಸಂಜಯ್ ಸಾಠೆಯ ನಂತರ ಅದೇ ಜಿಲ್ಲೆಯ ಇನ್ನೊಬ್ಬ ರೈತ ಚಂದ್ರಶೇಖರ್ ದೇಶಮುಖ್ ಇನ್ನೂ ಕಡಿಮೆ, ಅಂದರೆ ಕೆ.ಜಿ.ಗೆ ಕೇವಲ 51 ಪೈಸೆ ಪಡೆದಿದ್ದಾರೆ. 545 ಕೆ.ಜಿ.ಗೆ ಎಪಿಎಂಸಿ ಶುಲ್ಕ ಕಳೆದು 216 ರೂ. ಸಿಕ್ಕಿತು. ಇದರಿಂದ ಹೇಗೆ ಸಂಸಾರ ತೂಗಿಸಲಿ ಎಂದಿರುವ ಆತ ಅದನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ನಿಧಿಗೆ ಕಳಿಸಿದ್ದಾರಂತೆ. ಬಹುಶಃ ಅದೂ ಆನ್‌ಲೈನ್ ಟ್ರಾನ್ಸ್‌ಫರ್‌ಗೆ ವಾಪಾಸು ಬರಬಹುದು– ಹಿರಿಯಣ್ಣನ ಚಾಳಿಯಂತೆ. ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರಿಗೆ ಪರಿಹಾರದ ಮಾತಂತೂ ಇದುವರೆಗೆ ಬಂದಿಲ್ಲ.

2018ರ ಚುನಾವಣೆಗಳಲ್ಲಿ 120 ಕೋಟಿ ರೂ. ವಶ: ನೋಟುರದ್ದತಿ ಹಣಬಲವನ್ನು ತಡೆದಿಲ್ಲ ಎಂಬುದಕ್ಕೆ ಸಾಕ್ಷಿ–ಚುನಾವಣಾ ಆಯುಕ್ತರು

ಡಿಸೆಂಬರ್ 7 ರ ಮತದಾನ ಸಮೀಪಿಸುತ್ತಿದ್ದಂತೆ ಎಟಿಎಂಗಳಲ್ಲಿ ನಗದಿನ ಅಭಾವವಿದ್ದರೂ, ಪೋಲೀಸರು 120 ಕೋಟಿ ರೂ.ಗಳ ನಗದನ್ನು ವಶಪಡಿಸಿಕೊಂಡಿದ್ದಾರೆ, ಇವೆಲ್ಲವೂ 500 ರೂ. ಮತ್ತು 2000ರೂ. ನೋಟುಗಳಲ್ಲಿದ್ದವು ಎಂದು ಹೈದರಾಬಾದಿನಿಂದ ಬಂದ ಸುದ್ದಿ ಹೇಳಿತ್ತು. ಇವೆಲ್ಲವೂ ಹವಾಲಾ ಹಣವೇ ಎಂದು ಪೋಲಿಸ್ ಮೂಲಗಳು ಖಚಿತ ಪಡಿಸಿವೆ. ಈ ಮೂಲಕ ನೋಟುರದ್ಧತಿಯ ಘೋಷಿತ ಉದ್ದೇಶವನ್ನೇ ಇದು ವಿಫಲಗೊಳಿಸಿದೆ. ವಾಸ್ತವವಾಗಿ ಕಳೆದ ಬಾರಿಗಿಂತ ಹೆಚ್ಚೇ ನಗದನ್ನು ವಶಪಡಿಸಕೊಳ್ಳಲಾಗಿದೆ ಎಂದು ಚುನಾವಣಾ ಅಧಿಕಾರಿಗಳು ಹೇಳಿದ್ದಾರಂತೆ.

ಡಿಸೆಂಬರ್ 1 ರಂದು ನಿವೃತ್ತರಾದ ಮುಖ್ಯ ಚುನಾವಣಾ ಆಯುಕ್ತ ಒ.ಪಿ. ರಾವತ್ "ನೋಟುರದ್ದತಿ ಚುನಾವಣೆಗಳ ಸಮಯದಲ್ಲಿ ಹಣದ ದುರುಪಯೋಗವನ್ನು ಕಡಿಮೆ ಮಾಡುವ ಒಂದು ದಾರಿ ಎಂದು ಹೇಳಲಾಗಿತ್ತು. ಆದರೆ ಬುಡಮಟ್ಟದ ವಾಸ್ತವತೆ ಬೇರೆಯೇ ಆಗಿದೆ. ನೋಟುರದ್ಧತಿಯ ನಂತರ ಹಣದ ದುರುಪಯೋಗ ಕಡಿಮೆಯಾಗುತ್ತದೆ ಎಂಬುದು ವಶಪಡಿಸಿಕೊಂಡ ನಗದಿನ ಮಾಹಿತಿಯ ಆಧಾರದಲ್ಲಿ ಸಾಬೀತಾಗಿಲ್ಲ" ಎಂದು ನೇರವಾಗಿಯೇ ಹೇಳಿದ್ದಾರೆ.

ಆದರೂ ಅಚ್ಚೇ ದಿನ್‌ವಾಲಾಗಳಿಂದ ನೋಟುರದ್ಧತಿಯ ಗುಣಗಾನ ನಿಂತಿಲ್ಲ.

ನಂತರ ಪ್ರಧಾನ ಮಂತ್ರಿಗಳ ಮಾಜಿ ಆರ್ಥಿಕ ಸಲಹೆಗಾರರೂ ನೋಟುರದ್ಧತಿಯನ್ನು ಟೀಕಿಸಿದರೂ ಈ ಗುಣಗಾನ ನಿಂತಿಲ್ಲ.

ನೋಟುರದ್ದತಿಯನ್ನು ಬೆಂಬಲಿಸಿದವರು, ಸಮರ್ಥಿಸಿದವರು ಈಗ ಪ್ರಧಾನ ಮಂತ್ರಿಗಳ ಹೊಸ ಮುಖ್ಯ ಆರ್ಥಿಕ ಸಲಹೆಗಾರರಾಗಿ ನೇಮಕ ಗೊಂಡಿದ್ದಾರೆ, ನೋಟುರದ್ದತಿಯ ವೇಳೆ ಸರಕಾರದ ಹಿರಿಯ ಹಣಜಾಸು ಅಧಿಕಾರಿಗಳಾಗಿದ್ದವರು, ಪ್ರತಿದಿನ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದವರು ಈಗ ಹೊಸ ರಿಝರ್ವ್ ಬ್ಯಾಂಕ್ ಗವರ್ನರ್ ಆಗಿ ನೇಮಕಗೊಂಡಿದ್ದಾರೆ.

ಸಪ್ಟಂಬರ್ 2016 ರಲ್ಲಿ ಭಾರತೀಯ ಸೇನೆ ಭಾರತ–ಪಾಕಿಸ್ತಾನ ಗಡಿಯಲ್ಲಿ ಭಯೋತ್ಪಾದಕ ನೆಲೆಗಳ ಮೇಲೆ 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್) ನಡೆಸಿದಾಗ ಆ ವಿಭಾಗದ ಸೇನಾಪತಿಗಳಾಗಿದ್ದ ನಿವೃತ್ತ ಲೆಫ್ಟಿನೆಂಟ್ ಜನರಲ್ ಡಿ ಎಸ್ ಹೂಡ ಅವರು ಈ ಕಾರ್ಯಾಚರಣೆಯ ಬಗ್ಗೆ ಪ್ರಚಾರದ ಅಬ್ಬರ ಹೆಚ್ಚಾಯಿತು ಎಂದು ಹೇಳಿರುವುದು ಈಗ ದೊಡ್ಡ ಸುದ್ದಿಯಾಗಿದೆ. ಇಂತಹ ಅಬ್ಬರದ ಪ್ರಚಾರದಿಂದ ಏನಾದರೂ ಸಹಾಯವಾಯಿತೇ ಎಂದು ಅವರೇ ಪ್ರಶ್ನೆ ಕೇಳುತ್ತ ಖಂಡಿತ ಇಲ್ಲ ಎಂದು ಉತ್ತರಿಸಿದ್ದಾರೆ. "ಮಿಲಿಟರಿ ಕಾರ್ಯಾಚರಣೆಗಳಿಗೆ ರಾಜಕೀಯ ರಿಂಗಣಗಳು ಬಂದರೆ ಅದು ಒಳ್ಳಯದಲ್ಲ. ಎರಡೂ ಕಡೆಗಳಿಂದ ವಿಪರೀತ ರಾಜಕೀಯ ಪರಿಹಾಸಗಳು ನಡೆದವು. ಮಿಲಿಟರಿ ಕಾರ್ಯಾಚರಣೆಗಳು ರಾಜಕೀಯಕರಣಗೊಳ್ಳುವುದು ಒಳ್ಳೆಯದಲ್ಲ" ಎಂದು ಅವರು ಮುಂದುವರೆದು ಹೇಳಿದರು.. ಒಂದು ಪ್ರಶ್ನೆಗೆ ಉತ್ತರಿಸುತ್ತ, ಈ ಮಿಂಚಿನ ಪ್ರಹಾರವನ್ನು ಗುಪ್ತವಾಗಿ ಮಾಡಿದ್ದರೆ ಒಳ್ಳೆಯದಿತ್ತು ಎಂದು ಈಗ ಅನಿಸುತ್ತಿದೆ ಎಂದು ಹೇಳಿರುವುದಾಗಿಯೂ ವರದಿಯಾಗಿದೆ.

ಗುಪ್ತವಾಗಿ ನಡೆಸಿದ್ದರೆ 56 ಅಂಗುಲ ಕೀರ್ತಿ ಹೇಗೆ ತಾನೇ ಸಾಧ್ಯವಿತ್ತು ಎಂಬುದು ಬೇರೆ ಪ್ರಶ್ನೆ. **ವ್ಯಂಗ್ಯಚಿತ್ರ: ಪಿ.ಮಹಮ್ಮದ್**



ಮೋದಿ ಸರ್ಕಾರ, ಆರ್‌ಬಿಐ ಗವರ್ನರ್ ಮತ್ತು ಭಾರತದ ಗೊಂದಲಮಯ ಅರ್ಥವ್ಯವಸ್ಥೆ



ಆಳುವವರಿಂದ ಬ್ಯಾಂಕ್ ಸಾಲ, ತೆರಿಗೆ ರಿಯಾಯ್ತಿ ಮುಂತಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಬಾಚಿಕೊಂಡ ಬಂಡವಾಳಗರು ಸಮಾಜಕ್ಕೆ ಏನನ್ನೂ ಹಿಂತಿರುಗಿಸಲಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ, ಉತ್ಪಾದಕರು ಹಾಗೂ ಬಳಕೆದಾರರಿಗೆ ಹಣ ಲಭ್ಯವಾಗುತ್ತಿಲ್ಲ. ಕೊಟ್ಟ ಸಾಲಗಳು ಹಿಂತಿರುಗಿ ಬಾರದ ಪರಿಣಾಮವಾಗಿ ಬ್ಯಾಂಕುಗಳು ಕೊಡುವ ಸಾಲದ ಪ್ರಮಾಣ ಇಳಿಯುತ್ತಿದೆ. ನೋಟು ರದ್ದತಿ ಸೃಷ್ಟಿಸಿದ ಹಾವಳಿ ಮತ್ತು ರೂಪಿಸುವಾಗಲೇ ಕೆಟ್ಟದಾಗಿದ್ದ ಮತ್ತು ಇನ್ನಷ್ಟು ಕೆಟ್ಟದಾಗಿ ಜಾರಿಯಾದ ಜಿಎಸ್‌ಟಿ, ಇವುಗಳ ಪರಿಣಾಮವಾಗಿ ಅನೇಕಾನೇಕ ಔದ್ಯಮಿಕ/ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ ಮತ್ತು ಗ್ರಾಮೀಣ ಭಾರತದಲ್ಲಿ ರೈತರು ಮತ್ತು ಕೃಷಿ ಕೂಲಿಗಾರರು ಹತಾಶೆ ತಾಳಲಾರದೆ ಕೋಪಗೊಂಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಉರ್ಜಿತ್ ಪಟೇಲ್ ಇದ್ದಕ್ಕಿದ್ದಂತೆ ಆರ್‌ಬಿಐ ಗವರ್ನರ್ ಹುದ್ದೆಗೆ ರಾಜಿನಾಮೆ ಕೊಟ್ಟಿದ್ದಾರೆ. ಆರ್ಥಿಕ ನೀತಿಗಳ ಉಸ್ತುವಾರಿ ಏನಾಗುತ್ತಿದೆ ಎಂಬ ಅರಿವಿಲ್ಲದ, ಆದರೆ ಭಂಡ ಧೈರ್ಯದ ರಾಜಕೀಯ ನಾಯಕತ್ವದ ಕೈಯ್ಯಲ್ಲಿದೆ. ಹಾಗಾಗಿ, ಏನು ಬೇಕಾದರೂ ಆಗಬಹುದು. ದುರದೃಷ್ಟವಷಾತ್, ಅವರು ಏನು ಮಾಡುತ್ತಾರೆಯೋ, ಅದು ಭಾರತದ ಜನತೆಗೆ ಒಳ್ಳೆಯ ಸುದ್ದಿಯೇನೂ ಆಗಿರುವುದಿಲ್ಲ ಎಂಬುದಂತೂ ಸ್ಪಷ್ಟವಾಗಿದೆ.

ಪ್ರೊ. ಜಯತಿ ಘೋಷ್

ಅನು: ಕೆ.ಎಂ.ನಾಗರಾಜ್

ಅಧಿಕಾರ ಹಿಡಿದ ಆರಂಭದಿಂದಲೂ ಮೋದಿ ಸರ್ಕಾರದ ಆರ್ಥಿಕ ನೀತಿಗಳ ನಿರೂಪಣೆ ಮತ್ತು ಅವುಗಳ ಅನುಷ್ಠಾನದಲ್ಲಿ ಅವ್ಯವಸ್ಥೆ ಮತ್ತು ಪ್ರಜ್ಞಾ ಶೂನ್ಯತೆಯ ಅಂಶಗಳು ಎದ್ದುಕಾಣುತ್ತವೆ. ಹಠಮಾರಿ ಮತ್ತು ಆಕ್ರಮಣಕಾರಿ ನಿಲುವಿನ ರಾಜಕೀಯ ನಾಯಕತ್ವವು ದುಡುಕುಬುದ್ಧಿಯ ನೀತಿಗಳನ್ನು, ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸದೆ ಮತ್ತು ಜನ ಸಾಮಾನ್ಯರ ಮೇಲೆ ಅವು ಎಂತಹ ಪರಿಣಾಮ ಬೀರುತ್ತವೆ ಎಂಬುದನ್ನು ಲೆಕ್ಕಿಸದೆ, ಬೆದರಿಕೆಯ ಮೂಲಕ ಜಾರಿಗೊಳಿಸುತ್ತದೆ ಎಂಬುದೂ ಮತ್ತು ತಜ್ಞರು ಹಾಗೂ ಜನಸಾಮಾನ್ಯರನ್ನು ತಿರಸ್ಕಾರದಿಂದ ಕಾಣುತ್ತದೆ ಎಂಬುದೂ ಈಗ ಎಲ್ಲರಿಗೂ ಗೊತ್ತಾಗಿದೆ. ವಿಶೇಷವಾಗಿ, ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಆರ್ಥಿಕ ನೀತಿ ನಿರೂಪಕರಿಗೆ ಮತ್ತು ಆರ್ಥಿಕ ಸಲಹೆಗಾರರಿಗೆ ಈ ಎಲ್ಲಾ ಅಂಶಗಳೂ ಗೊತ್ತಿವೆ.

ದೇಶದ ಕೇಂದ್ರ ಬ್ಯಾಂಕಿನ ಗವರ್ನರ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮತ್ತು ಅವರೊಂದಿಗೆ ಸಮಾಲೋಚನೆ ಮಾಡದೆ, ಜನಸಾಮಾನ್ಯರನ್ನು ಮಾತ್ರವಲ್ಲದೆ ಇಡೀ ಅರ್ಥವ್ಯವಸ್ಥೆಯನ್ನೇ ದುರವಸ್ಥೆಗೆ ತಳ್ಳಿದ ನೋಟುರದ್ದತಿಯಂತಹ ಮುಖ್ಯವಾದ ತೀರ್ಮಾನ ಕೈಗೊಂಡಾಗ, ಆತ್ಮ-ಗೌರವಕ್ಕೆ ಬೆಲೆಕೊಡುವ, ಗವರ್ನರ್ ಹುದ್ದೆಯಲ್ಲಿರುವ ಯಾವುದೇ ವ್ಯಕ್ತಿಯಾಗಲಿ (ಆರ್ಥಿಕ ಸಲಹೆಗಾರರಿಗೂ ಈ ಮಾತು ಅನ್ವಯವಾಗುತ್ತದೆ) ತಮ್ಮ ಹುದ್ದೆಗೆ ರಾಜೀನಾಮೆ ಕೊಡುತ್ತಿದ್ದರು. ಅದೇ ರೀತಿಯಲ್ಲಿ, ಸಾರ್ವಜನಿಕರ ಹಣ, ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಸರ್ಕಾರದ ಬೊಕ್ಕಸದಿಂದ ಒದಗಿಸಬಹುದಾದ ಎಲ್ಲ ರೀತಿಯ ಸವಲತ್ತುಗಳೂ ಸೇರಿದಂತೆ ಸಂಪನ್ಮೂಲಗಳನ್ನು ತಮ್ಮ ಬಾಲಬಡುಕ ಬಂಡವಾಳಗಾರರು ಬಳಸಿಕೊಳ್ಳಲು ನೆರವಾದ ಸಂದರ್ಭಗಳಲ್ಲಿ ಅಥವಾ ಸ್ವಲ್ಪವೂ ಪೂರ್ವ ತಯಾರಿ ಇಲ್ಲದೆ ಆತುರಾತುರವಾಗಿ ಜಿಎಸ್‌ಟಿ ಜಾರಿಗೊಳಿಸಿದ ಸಂದರ್ಭದಲ್ಲಿ ಅಥವಾ ರಾಜಕೀಯ ಉದ್ದೇಶದಿಂದ ಅಧಿಕೃತ ಅಂಕಿ-ಅಂಶಗಳನ್ನು ಬದಲಾಯಿಸಿದ ಸಂದರ್ಭದಲ್ಲಿ, ಉನ್ನತ ಹುದ್ದೆಯಲ್ಲಿರುವವರಿಗೆ ಉಂಟಾಗಬಹುದಾದ ಮುಜುಗುರವು ಅವರನ್ನು ಅಂತಹ ಕೃತ್ಯಗಳಿಂದ ದೂರ ಉಳಿಯುವಂತೆ ಮಾಡುತ್ತಿದ್ದವು.

ಆದರೆ, ಉನ್ನತ ಹುದ್ದೆಯಲ್ಲಿರುವವರು ಅನೇಕ ಸಂರ್ಭಗಳಲ್ಲಿ ಆ ರೀತಿಯ ನಡವಳಿಕೆ ತೋರಿಸಲಿಲ್ಲ ಎಂದು ಭಾಸವಾಗುತ್ತದೆ. ಆದರೆ, ಉರ್ಜಿತ್ ಪಟೇಲ್ ಇದ್ದಕ್ಕಿದ್ದಂತೆ ತಮ್ಮ ಹುದ್ದೆ ತ್ಯಜಿಸಿದ್ದಾರೆ. ಆರ್‌ಬಿಐ ಗವರ್ನರ್ ಇದ್ದಕ್ಕಿದ್ದಂತೆ ರಾಜಿನಾಮೆ ಕೊಟ್ಟಿದ್ದನ್ನು, ಅದೊಂದು "ಪ್ರತಿಭಟನೆ" ಎಂದು ಹಿಂದಿನ ಗವರ್ನರ್ ಬಣ್ಣಿಸಿದ್ದಾರೆ. ತೀರ ಇತ್ತೀಚಿನವರೆಗೆ ಆರ್ಥಿಕ ಸಲಹೆಗಾರ ಹುದ್ದೆಯಲ್ಲಿದ್ದ ವ್ಯಕ್ತಿಯೊಬ್ಬರು ತಾವು ಅಧಿಕಾರದಲ್ಲಿದ್ದ ಅವಧಿಯಲ್ಲಿ ಆರ್ಥಿಕ ನೀತಿಗಳಲ್ಲಿ ಕೆಲವು ತಪ್ಪುಗಳಿದ್ದವು ಎಂಬುದಾಗಿ ತಮ್ಮ ಅಭಿಪ್ರಾಯಗಳನ್ನು ಮುಚ್ಚು ಮರೆ ಇಲ್ಲದೆ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ಈಗ ಪರಿಸ್ಥಿತಿ ಬದಲಾಗಿದೆಯೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಪರಿಸ್ಥಿತಿಯನ್ನು ಬದಲಿಸಿಸುವ ನಿಟ್ಟಿನಲ್ಲಿ ನಡೆದ ಪ್ರಯತ್ನಗಳ ಫಲವೇ, ಇದು? ಅಥವಾ ಭಾರತದ ಅನೇಕ ಸಾಂವಿಧಾನಿಕ ಸಂಸ್ಥೆಗಳನ್ನು ಹಾಳುಗೆಡವಿದ ಅಥವಾ ಇನ್ನೇನು ನೆಲ ಕಚ್ಚಲಿವೆ ಎಂಬುದರ ಅರಿವು ಇದ್ದಕ್ಕಿಂದಂತೆ ಉಂಟಾಯಿತೇ? ಅಥವಾ ಎಂತಹ ಬದಲಾವಣೆಗಳು ಆಗಬಾರದು ಎಂದು ಬಯಸಿ ಅವುಗಳನ್ನು ತಡೆಯಲು ಆಳುವ ಪಕ್ಷ ಮಾಡಿದ ಹತಾಶ ಪ್ರಯತ್ನಗಳ ನಂತರವೂ ರಾಜಕೀಯ ಹವಾ ಬದಲಾಗುತ್ತಿದೆ ಎಂಬ ವಾಸನೆ ಬಡಿಯುತ್ತಿರುವುದು ಕಾರಣವೇ?

ಅದೇನೇ ಇರಲಿ, ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ನಡುವೆ ಬಹಳ ದಿನಗಳಿಂದಲೂ ನಡೆಯುತ್ತಿದ್ದ ತಿಕ್ಕಾಟದ ಕಾರಣದಿಂದ, ಉರ್ಜಿತ್ ಪಟೇಲ್ ಆರ್‌ಬಿಐ ಗವರ್ನರ್ ಹುದ್ದೆಗೆ ಇದ್ದಕ್ಕಿದ್ದಂತೆ ರಾಜಿನಾಮೆ ಕೊಟ್ಟಿದ್ದಾರೆ. ಈ ತಿಕ್ಕಾಟದ ಹಿಂದೆ ಅನೇಕ ಕಾರಣಗಳಿವೆ. ಅವುಗಳಲ್ಲಿ, (1) ರಿಸರ್ವ್ ಬ್ಯಾಂಕ್ ಕೂಡಿಟ್ಟುಕೊಂಡಿರುವ ಅಪಾರ ಮೊತ್ತದ ಮೀಸಲು ಹಣವನ್ನು ತನಗೆ ವರ್ಗಾಯಿಸಬೇಕೆಂಬುದು ಕೇಂದ್ರ ಸರ್ಕಾರದ ಒತ್ತಾಯ. ಈ ಒತ್ತಾಯ ಪರೋಕ್ಷವಾಗಿದೆ. ರಿಸರ್ವ್ ಬ್ಯಾಂಕ್ ತನ್ನ ಒಡೆತನದಲ್ಲಿದೆ. ಆದುದರಿಂದ ಮೀಸಲು ಹಣದಲ್ಲಿ ಸಾಕಷ್ಟು ಮೊತ್ತವನ್ನು (ಕೊನೆಯ ಪಕ್ಷ ಮೂರು ಲಕ್ಷ ಕೋಟಿ ರೂಗಳು) ವರ್ಗಾಯಿಸಿದರೆ, ಚುನಾವಣೆಗಳಿಗೆ ಮೊದಲು ತನ್ನ ಮಹತ್ವಾಕಾಂಕ್ಷೆಯ ಸ್ಕೀಂಗಳಿಗೆ ಖರ್ಚುಮಾಡಬಹುದು ಎಂಬುದು ಸರ್ಕಾರದ ಬಯಕೆ. (2) ಪರಿಸ್ಥಿತಿ ಹದಗೆಟ್ಟಿರುವ ಹನ್ನೊಂದು ಬ್ಯಾಂಕ್‌ಗಳ ಮೇಲೆ ಸಾಲ ಮಂಜೂರಾತಿಗೆ ಸಂಬಂಧಿಸಿದ ನಿರ್ಬಂಧಗಳನ್ನು ರಿಸರ್ವ್ ಬ್ಯಾಂಕ್ ಸಡಿಲಗೊಳಿಸಬೇಕು ಎಂಬುದು ಕೇಂದ್ರ ಸರ್ಕಾರದ ಆಗ್ರಹ. ಸಾಲ ಭಾರದಿಂದ ಮುಳುಗುತ್ತಿರುವ ಕೆಲವು ಕಾರ್ಪೋರೇಟ್‌ಗಳಿಗೆ (ಯಾವ ಯಾವ ಕಂಪೆನಿಗಳು ಯಾರಿಗೆ ಆಪ್ತರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ) ಈ ಕ್ರಮದಿಂದ ಹೊಸ ಸಾಲಗಳು ಸಿಗುತ್ತವೆ. (3) ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಸಾಲ ಪಡೆಯಲು ಬೇಕಾದ ಅರ್ಹತೆಗಳಲ್ಲಿ ಕೆಲವು ವಿನಾಯ್ತಿ ಮತ್ತು ಏಕ-ಗವಾಕ್ಷಿ ವ್ಯವಸ್ಥೆಯ ಮೂಲಕ ಅವರಿಗೆ ಸಾಲ ವಿತರಣೆ. ಇವು ಪ್ರಮುಖ ಕಾರಣಗಳು.

ಈ ಅಂಶಗಳಿಗೆ ಸಂಬಂಧಿಸಿದಂತೆ ತಿಕ್ಕಾಟ ಬಹಳ ದಿನಗಳಿಂದ ನಡೆಯುತ್ತಿದ್ದರೂ, ಕೇಂದ್ರ ಸರ್ಕಾರದ ಒತ್ತಾಯಕ್ಕೆ ರಿಸರ್ವ್ ಬ್ಯಾಂಕ್ ಬಗ್ಗಿರಲಿಲ್ಲ. ರಿಸರ್ವ್ ಬ್ಯಾಂಕ್‌ನ ಈ ಪ್ರತಿಕ್ರಿಯೆಯಿಂದ ಕೆರಳಿದ ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕ್ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿತು. ಈ ಅಂಶಗಳ ಬಗ್ಗೆ, ಸೆಕ್ಷನ್ 7ರ (ಆರ್ ಬಿ ಐ ಕಾಯ್ದೆ 1934) ಪ್ರಕಾರವಾಗಿ ಆರ್‌ಬಿಐ ಬೋರ್ಡ್ ತೀರ್ಮಾನ ಕೈಗೊಳ್ಳಬೇಕೆಂಬ ನಿರ್ದೇಶನವನ್ನು ಕೇಂದ್ರ ಸರ್ಕಾರ ನೀಡಿತು. ಈ ಕ್ರಮದಿಂದ ಆತಂಕಕ್ಕೊಳಗಾದ ಆರ್‌ಬಿಐ ಗವರ್ನರ್ ತಮ್ಮ (ಸಹಾಯಕ) ಡೆಪ್ಯುಟಿ ಗವರ್ನರ್ ವಿರಳ್ ಆಚಾರ್ಯ ಅವರ ಮೂಲಕ ಆರ್‌ಬಿಐನ ಸ್ವಾಯತ್ತತೆಯ ಬಗ್ಗೆ ಆಡಿಸಿದ ಮಾತುಗಳ ಬಗ್ಗೆ ಬಿಸಿ ಬಿಸಿ ಚರ್ಚೆಗಳಾದವು. ತರುವಾಯ ನಡೆದ ಆರ್‌ಬಿಐನ ಬೋರ್ಡ್ ಮೀಟಿಂಗಿನಲ್ಲಿ (ಈ ಸಭೆಯಲ್ಲಿ, ಕೇಂದ್ರ ಸರ್ಕಾರದ ಪ್ರತಿನಿಧಿಗಳು ಮತ್ತು ಇತ್ತೀಚೆಗೆ ನೇಮಕಗೊಂಡ ಒಬ್ಬ ರಾಜಕಾರಣಿಯೂ ಇದ್ದರು) ಒಂದು ರೀತಿಯ ರಾಜಿ ಒಪ್ಪಂದವೂ ಆಗಿತ್ತು ಎಂಬುದೂ ಸಹ ವರದಿಯಾಗಿತ್ತು. ಆದರೆ, ಈ ನಂತರದಲ್ಲಿ, ಯಾವ ಬದಲಾವಣೆಯಿಂದಾಗಿ ಉರ್ಜಿತ್ ಪಟೇಲ್ ಆರ್‌ಬಿಐ ಗವರ್ನರ್ ಹುದ್ದೆಗೆ ಇದ್ದಕ್ಕಿದ್ದಂತೆ ರಾಜಿನಾಮೆ ಕೊಟ್ಟರು ಎಂಬುದು ಸಾರ್ವಜನಿಕರಿಗೆ ಇನ್ನೂ ಗೊತ್ತಾಗಿಲ್ಲ. ಆದರೆ, ಸರ್ಕಾರಿ ಹುದ್ದೆಯಿಂದ ಕಳಚಿಕೊಂಡ 'ಕೂಡಲೇ ಎಲ್ಲವನ್ನೂ ಬಿಚ್ಚಿಡುವ ಪ್ರವೃತ್ತಿಯುಳ್ಳ ಈ ಬಾಡಿಗೆ ತಜ್ಞರಿಂದ ವಿಷಯ ಏನೆಂಬುದು ತಿಳಿಯುತ್ತದೆ, ಬೇಗ.

ಆದರೆ, ಘಟನೆಯ ಸುತ್ತ ಮುತ್ತ ಇರುವ ಕಾರಣಗಳಿಂದ ಇಡೀ ಕತೆ ಗೊತ್ತಾಗುವುದಿಲ್ಲ. ಹುದ್ದೆ ತೊರೆದಕೂಡಲೇ ಎಲ್ಲವನ್ನೂ ಹೇಳಿಬಿಡುವ ಸಾಂಕ್ರಾಮಿಕ ಜಾಡ್ಯವು ಮಾಜಿ-ನೀತಿ ನಿರೂಪಕರನ್ನು ಆವರಿಸಿರುವುದರಿಂದ, ಬಹುಷ:, ಈ ರಾಜಿನಾಮೆಯ ಪ್ರಕರಣವು ಬೇಸರಹಿಡಿಸುವ ಒಂದು ವಾಸ್ತವವನ್ನು ತೆರೆದಿಡಬಹುದು. ತನ್ನ ವೃತ್ತಿಯಲ್ಲಿ ಖ್ಯಾತಿ ಪಡೆದ ಯಾವುದೇ ಒಬ್ಬ ಅರ್ಥಶಾಸ್ತ್ರಜ್ಞನು ಭಾರತದ ಅರ್ಥವ್ಯವಸ್ಥೆಯು ಸಧ್ಯದಲ್ಲಿ ಒಳಗಾಗಿರುವ ತೀವ್ರ ಅವ್ಯವಸ್ಥೆಯೊಂದಿಗೆ ಗುರುತಿಸಿಕೊಳ್ಳಲು ಬಯಸುವುದಿಲ್ಲ.


ಇತ್ತೀಚೆಗೆ ಕಚ್ಚಾ ತೈಲದ ಬೆಲೆ ಇಳಿದಿದ್ದರಿಂದಾಗಿ ವಿದೇಶಿ ವಿನಿಮಯದ ಚಿಂತೆಯೂ ತುಸು ಇಳಿದಿತ್ತು. ಅಷ್ಟಾಗಿಯೂ ನಮ್ಮ ಅರ್ಥವ್ಯವಸ್ಥೆಯು ಅಪಾಯದಿಂದ ಪಾರಾಗಿಲ್ಲ. ಅರ್ಥವ್ಯವಸ್ಥೆ ದುರ್ಬಲವಾಗಿರುವುದನ್ನು, ಉದ್ಯೋಗಗಳು ಬೆಳೆಯದ ಅಥವಾ ಸ್ಥಗಿತಗೊಂಡಿರುವ ಪರಿಸ್ಥಿತಿ, ನಮ್ಮ ಅರ್ಥವ್ಯವಸ್ಥೆಯ ಬೆನ್ನೆಲುಬಿನಂತಿರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಕುಸಿತ, ಚಾಲ್ತಿ ಖಾತೆಯ ಕೊರತೆಯ ಏರಿಕೆ ಮತ್ತು ವಿದೇಶಿ ಬಂಡವಾಳದ ಒಳಹರಿವಿನ ಇಳಿಕೆಯ ಅಂಶಗಳು ಸೂಚಿಸುತ್ತವೆ.

ಸಧ್ಯದ ಪರಿಸ್ಥಿತಿಯಲ್ಲಿ, ಉತ್ಪಾದಕರು ಹಾಗೂ ಬಳಕೆದಾರರಿಗೆ ಹಣ ಲಭ್ಯವಾಗುತ್ತಿಲ್ಲ. ಕೊಟ್ಟ ಸಾಲಗಳು ಹಿಂತಿರುಗಿ ಬಾರದ ಪರಿಣಾಮವಾಗಿ ಬ್ಯಾಂಕುಗಳು ಕೊಡುವ ಸಾಲದ ಪ್ರಮಾಣ ಇಳಿಯುತ್ತಿದೆ. ನೋಟು ರದ್ದತಿ ಸೃಷ್ಟಿಸಿದ ಹಾವಳಿ ಮತ್ತು ರೂಪಿಸುವಾಗಲೇ ಕೆಟ್ಟದಾಗಿದ್ದ ಮತ್ತು ಇನ್ನಷ್ಟು ಕೆಟ್ಟದಾಗಿ ಜಾರಿಯಾದ ಜಿಎಸ್‌ಟಿ, ಇವುಗಳ ಪರಿಣಾಮವಾಗಿ ಅನೇಕಾನೇಕ ಔದ್ಯಮಿಕ/ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ ಮತ್ತು ಗ್ರಾಮೀಣ ಭಾರತದಲ್ಲಿ ರೈತರು ಮತ್ತು ಕೃಷಿ ಕೂಲಿಗಾರರು ಹತಾಶೆ ತಾಳಲಾರದೆ ಕೋಪಗೊಂಡಿದ್ದಾರೆ.


ಕಳೆದ ಕೆಲವು ವರ್ಷಗಳಲ್ಲಿ, ಅಧಿಕಾರದ ಗದ್ದುಗೆ ಹಿಡಿದವರು ತಮಗೆ ಬೇಕಾದ ಕೆಲವು ಮಂದಿ ದೊಡ್ಡ ದೊಡ್ಡ ಬಂಡವಾಳಗಾರರಿಗೆ ನೈಸರ್ಗಿಕ ಸಂಪನ್ಮೂಲಗಳೂ ಸೇರಿದಂತೆ, ಬ್ಯಾಂಕ್ ಸಾಲ, ತೆರಿಗೆ ರಿಯಾಯ್ತಿ ಮುಂತಾದ ಎಲ್ಲಾ ರೀತಿಯ ಸೌಲಭ್ಯಗಳ ಸುರಿ ಮಳೆಯನ್ನೇ ಸುರಿಸಿದ್ದಾರೆ. ಆದರೆ, ಅದನ್ನೆಲ್ಲಾ ಬಾಚಿಕೊಂಡ ಈ ಬಂಡವಾಳಿಗರು ಹೆಚ್ಚಿನ ಮಟ್ಟದ ಹೂಡಿಕೆ ಮಾಡಬಹುದಿತ್ತು ಅಥವಾ ತಮ್ಮ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಬಹುದಿತ್ತು. ಆದರೆ, ಈ ಮಂದಿ ಸಮಾಜಕ್ಕೆ ಏನನ್ನೂ ಹಿಂತಿರುಗಿಸಲಿಲ್ಲ.

ಕೀಳು ಮಟ್ಟದ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ರಾಷ್ಟ್ರೀಯ ವರಮಾನಕ್ಕೆ ಸಂಬಂಧಿಸಿದ ಅಧಿಕೃತ ಅಂಕಿ ಆಂಶಗಳನ್ನು ಬದಲಾಯಿಸಿದ ಮೂರ್ಖತನದ ಕೃತ್ಯವೂ ಲಾಭ ತರಲಿಲ್ಲ. ಬದಲಿಗೆ, ಮೂರನೆಯ ಜಗತ್ತಿನ ದೇಶಗಳ ಪೈಕಿ, ಅಂಕಿ ಅಂಶ ಸಂಗ್ರಹಣೆಯಲ್ಲಿ ಭಾರತ ಹೊಂದಿರುವ ವ್ಯವಸ್ಥೆ ಅತ್ಯಂತ ವಿಶ್ವಾಸಾರ್ಹವಾದದ್ದು ಎಂದು ಗಳಿಸಿದ್ದ ಪ್ರತಿಷ್ಠೆ ಮಣ್ಣು ಪಾಲಾಯಿತು.

ಇಂತಹ ಸನ್ನಿವೇಶದಲ್ಲಿ ಉರ್ಜಿತ್ ಪಟೇಲ್ ಇದ್ದಕ್ಕಿದ್ದಂತೆ ಆರ್‌ಬಿಐ ಗವರ್ನರ್ ಹುದ್ದೆಗೆ ರಾಜಿನಾಮೆ ಕೊಟ್ಟಿದ್ದಾರೆ. ಆರ್ಥಿಕ ನೀತಿಗಳ ಉಸ್ತುವಾರಿ ಏನಾಗುತ್ತಿದೆ ಎಂಬ ಅರಿವಿಲ್ಲದ, ಆದರೆ ಭಂಡ ಧೈರ್ಯದ ರಾಜಕೀಯ ನಾಯಕತ್ವದ ಕೈಯ್ಯಲ್ಲಿದೆ. ಹಾಗಾಗಿ, ಏನು ಬೇಕಾದರೂ ಆಗಬಹುದು. ದುರದೃಷ್ಟವಷಾತ್, ಅವರು ಏನು ಮಾಡುತ್ತಾರೆಯೋ, ಅದು ಭಾರತದ ಜನತೆಗೆ ಒಳ್ಳೆಯ ಸುದ್ದಿಯೇನೂ ಆಗಿರುವುದಿಲ್ಲ ಎಂಬುದಂತೂ ಸ್ಪಷ್ಟವಾಗಿದೆ.



ವ್ಯಂಗ್ಯಚಿತ್ರ: ಮಂಜುಲ್



ವ್ಯಂಗ್ಯಚಿತ್ರ: ಅರ್. ಪ್ರಸಾದ್

ಎಸ್. ವರಲಕ್ಷ್ಮಿ

ಜನವರಿ 8–9ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದತ್ತ

ಭಾರತದ 48 ಕೋಟಿ ಶ್ರಮಿಕರನ್ನು ಪ್ರತಿನಿಧಿಸುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಹಲವು ಅಖಿಲ ಭಾರತ ಕ್ಷೇತ್ರವಾರು ಉದ್ಯೋಗಿಗಳ ಫೆಡರೇಶನುಗಳು ಜಂಟಿಯಾಗಿ ಮಹತ್ವದ 8–9, ಜನವರಿ 2019 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆಯನ್ನು ಕೊಟ್ಟಿವೆ. ಈ ಮುಷ್ಕರದಲ್ಲಿಟ್ಟಿರುವ ಪ್ರಮುಖ ಹಕ್ಕೊತ್ತಾಯಗಳ ಬಗ್ಗೆ ಲೇಖನ ಸರಣಿಯ ಮೊದಲ ಕಂತು ಇದು.



ಭಾರತದಲ್ಲಿ 1991ರಲ್ಲಿ ಹೊಸ ಆರ್ಥಿಕ ನೀತಿಗಳು "ಒಂದೇ ಪರ್ಯಾಯ"ವೆಂಬ ಭರ್ಜರಿ ಪ್ರಚಾರದೊಂದಿಗೆ ಜಾರಿ ಮಾಡಲು ಇಂದಿಗೆ 27 ವರ್ಷಗಳಾಗಿವೆ. ಇಷ್ಟು ವರ್ಷಗಳ ನಂತರದಲ್ಲಿ ಭಾರತದಲ್ಲಿ ಕೃಷಿ, ಕೈಗಾರಿಕೆ, ಉದ್ಯೋಗ, ಬಡತನ, ಆಹಾರ ವಸ್ತುಗಳ ಲಭ್ಯತೆ, ಶಿಕ್ಷಣ, ಆರೋಗ್ಯ, ಅಪೌಷ್ಠಿಕತೆ ಮುಂತಾದ ಅಂಶಗಳು ಜನರ ಹಿತಾಸಕ್ತಿಗೆ ಅನುಗುಣವಾಗಿ ಬದಲಾಗಿದೆಯೇ?

ಇಂದು ಅನ್ನ ಕೊಡುವ ರೈತ ವಿಷ ತೆಗೆದುಕೊಂಡು ಸಾಯುತ್ತಿದ್ದಾನೆ. ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕ ಕೇವಲ ಉಪಯೋಗಿಸಿ ಬಿಸಾಡುವ ಪರಿಸ್ಥಿತಿಯಲ್ಲಿ ಬಂದು ನಿಂತಿದ್ದಾನೆ. ಸೇವೆಯನ್ನು ಕೊಡುವ ನೌಕರ ಇಂದು ತನಗೆ ತಾನು ಸೇವೆ ಮಾಡುವ ಸಂಸ್ಥೆಗೆ ಸಂಬಂಧವಿಲ್ಲ ಎಂಬಂತೆ ಗಂಭೀರ ಪರಿಸ್ಥಿತಿ ಬಂದಿದೆ.

ಈ ಹೊಸ ಆರ್ಥಿಕ ನೀತಿಗಳ ಸಂಪೂರ್ಣ ಉಪಯೋಗ ಪಡೆದಿರುವ ಬಂಡವಾಳಗಾರ ಇಂದು ಅತಿ ಲಾಭದ ಆಸೆಯನ್ನು ಈಡೇರಿಸಿಕೊಳ್ಳಲು ಪ್ರಭುತ್ವವನ್ನೇ ತನ್ನ ಮುಷ್ಟಿಯಲ್ಲಿರಿಸಿಕೊಂಡು ತನಗೆ ಬೇಕಾದ ಹಾಗೆ ಗರಿಷ್ಟ ಲಾಭಗಳಿಸಲು ಬೇಕಾದ ಪರಿಸ್ಥಿತಿ ಇಂದು ನಿರ್ಮಾಣಗೊಳ್ಳುತ್ತಿದೆ. ಇದರಿಂದಾಗಿ ಭಾರತ ದೇಶದ 48 ಕೋಟಿ ಶ್ರಮಿಕರನ್ನು ಪ್ರತಿನಿಧಿಸುವ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಹೆಚ್‌ಎಂಎಸ್, ಟಿಯುಸಿಸಿ, ಯುಟಿಯುಸಿ, ಎಐಯುಟಿಯುಸಿ, ಸೇವಾ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ವಿಮಾ, ಬ್ಯಾಂಕ್, ಸಾರ್ವಜನಿಕ ಕೈಗಾರಿಕೆಗಳು, ರಾಜ್ಯ ಮತ್ತು ಕೇಂದ್ರ ಸೇವೆ ಮತ್ತು ರಕ್ಷಣಾ ಇಲಾಖೆಯ ಎಲ್ಲಾ ಸಂಘಟನೆಗಳು ಮತ್ತೊಂದು ಮಹತ್ವದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆಯನ್ನು ಕೊಟ್ಟಿವೆ. 8–9, ಜನವರಿ 2019ರ ಮುಷ್ಕರದಲ್ಲಿಟ್ಟಿರುವ ಪ್ರಮುಖ ಹಕ್ಕೊತ್ತಾಯಗಳ ಬಗ್ಗೆ ಚರ್ಚಿಸೋಣ.

ಅಗತ್ಯ ವಸ್ತುಗಳ ಬೆಲೆಯೇರಿಕೆಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ವಹಿಸಿ

ಅಂತರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಸುಮಾರು 27% ಇಳಿದರೂ ಭಾರತದಲ್ಲಿ ಪೆಟ್ರೋಲ್–ಡಿಸೆಲ್ 75–84 ರೂ.ಗಳಿಗೆ ಏರಿದೆ. ಒಂದು ಅಡುಗೆ ಸಿಲಿಂಡರ್ ಬೆಲೆ 450 ರೂ.ಗಳಿಂದ 1000 ರೂ.ಗಳಿಗೇರಿದೆ. ಇದರಿಂದ ಸರಕು ಸಾಗಾಣಿಕೆಗಳ ಮೇಲಿನ ವೆಚ್ಚ ಹೆಚ್ಚಾಗಿದೆ. ಕಚ್ಚಾ ತೈಲ ಮತ್ತು ಪೆಟ್ರೋಲ್ ಉತ್ಪನ್ನಗಳ ಮೇಲಿನ ಕೇಂದ್ರದ ತೆರಿಗೆ 2014–15ರಲ್ಲಿ 1.26 ಲಕ್ಷ ಕೋಟಿಯಿಂದ 2016–17ರಲ್ಲಿ 2.73 ಲಕ್ಷ ಕೋಟಿಗಳಿಗೆ ಹೆಚ್ಚಳವಾಗಿದೆ.

ಜನತೆಯ ಕಲ್ಯಾಣವನ್ನು ಬಯಸಿ ಜನರ ಕಲ್ಯಾಣಕ್ಕಾಗಿ ತೆರಿಗೆಗಳನ್ನು ಕಡಿಮೆ ಮಾಡುವ ಬದಲಿಗೆ ಸಾಮಾನ್ಯ ಜನರಿಂದ ಇಷ್ಟೊಂದು ಲಾಭವನ್ನು ಗಳಿಸಿದೆ. ಮಾತ್ರವಲ್ಲದೆ ಆಹಾರ ಧಾನ್ಯಗಳ ಉತ್ಪಾದನೆ ಇಳಿಕೆಯಿಂದಾಗಿ ಆಮದು ಮೇಲಿನ ಅವಲಂಬನೆ ಹೆಚ್ಚಿದೆ ಮತ್ತು ವಾಯಿದೆ (ಫ್ಯೂಚರ್) ವ್ಯಾಪಾರ ನೀತಿಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ 17% ಮತ್ತು 21% ರಷ್ಟು ನಗರ ಪ್ರದೇಶದಲ್ಲಿ 4 ವರ್ಷಗಳಲ್ಲಿ ಬೆಲೆ ಹೆಚ್ಚಾಗಿದೆ.

ಇದರಿಂದಾಗಿ ದಿನನಿತ್ಯದ ಅಗತ್ಯ ವಸ್ತುಗಳಾದ ಬೇಳೆ, ಈರುಳ್ಳಿ, ಎಣ್ಣೆ ಇತ್ಯಾದಿಗಳ ಬೆಲೆ ಹೆಚ್ಚಳವಾಗಿದೆ. ಚುನಾವಣಾ ಪೂರ್ವದಲ್ಲಿ ಕೇಂದ್ರ ಸರ್ಕಾರ ಕೊಟ್ಟಂತಹ ಭರವಸೆ ಸಂಪೂರ್ಣ ಹುಸಿಯಾಗಿದೆ.

ನವ–ಉದಾರವಾದಿ ವ್ಯವಸ್ಥೆ ಜಾರಿಗೊಳ್ಳುವ ಮೊದಲು ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಮುಂತಾದವುಗಳನ್ನು ಕಡಿಮೆ ಬೆಲೆಯಲ್ಲಿ ಮಾರುತ್ತಿದ್ದ ರೇಷನ್ ಅಂಗಡಿಗಳು, ಸರ್ಕಾರಿ ಶಾಲೆಗಳು, ಸರ್ಕಾರಿ ಆಸ್ಪತ್ರೆಗಳು, ಸಾಮಾನ್ಯ ಜನರಿಗೆ ಸ್ವಲ್ಪ ಪರಿಹಾರ ಒದಗಿಸುತ್ತಿದ್ದವು. ಆದರೆ ಅವುಗಳ ಮೇಲಿನ ಸಬ್ಸಿಡಿಗಳ ಕಡಿತವನ್ನು ನವ–ಉದಾರವಾದಿ ನೀತಿಗಳು ನಾಶ ಮಾಡಿವೆ.

ಆಹಾರ ಪದಾರ್ಥಗಳ ಬೆಲೆಗಳಲ್ಲಿನ ಹೆಚ್ಚಳವು ರೈತರಿಗೆ ಸಹಾಯ ಮಾಡುವುದಿಲ್ಲ. ಏಕೆಂದರೆ ರಸಗೊಬ್ಬರಗಳು, ಕೀಟನಾಶಕಗಳು, ವಿದ್ಯುತ್, ಡೀಸಲ್ ಮುಂತಾದ ಕೃಷಿ ಲಾಗುವಾಡುಗಳ ಬೆಲೆಗಳು ಸಹ ಮೇಲೇರಿವೆ. ರೈತರಿಗೆ ಲಾಭದಾಯಕ ಬೆಲೆಗಳು ಸಿಗುವುದಿಲ್ಲ,. ಬಹುತೇಕ ರೈತರು ತಮ್ಮ ಉತ್ಪನ್ನಗಳನ್ನು ಮಧ್ಯವರ್ತಿಗಳಿಗೆ ಮತ್ತು ಲೇವಾದೇವಿಗಾರರಿಗೆ ಕಡಿಮೆ ಬೆಲೆಗೆ ಮಾರುವ ಒತ್ತಡಕ್ಕೆ ಸಿಲುಕುತ್ತಾರೆ ಮತ್ತು ಆಹಾರ ಪದಾರ್ಥಗಳನ್ನು ಹೆಚ್ಚಿನ ಬೆಲೆ ಕೊಟ್ಟು ಖರೀದಿಸುತ್ತಾರೆ. ಮಧ್ಯವರ್ತಿಗಳು, ಕಾಳಸಂತೆಕೋರರು, ಜೂಜುಕೋರರು, ಗ್ರಾಮೀಣ ಶ್ರೀಮಂತ ವ್ಯಾಪಾರಿ ಜನರು ಮಾತ್ರ ಇದರಿಂದ ಲಾಭ ಮಾಡುತ್ತಾರೆ. ಬೆಲೆ ಏರಿಕೆಗೆ ಆಹಾರ ಪದಾರ್ಥಗಳ ಮೇಲೆ ನಡೆಯುವ ಸಟ್ಟಾ ವ್ಯಾಪಾರವೂ ಒಂದು ದೊಡ್ಡ ಕಾರಣವಾಗಿದೆ.

ಕಾರ್ಮಿಕ ಸಂಘಗಳು ಸತತವಾಗಿ ಒತ್ತಾಯ ಮಾಡುತ್ತಿದ್ದರೂ ಸಹ ದೊಡ್ಡ ಬಂಡವಾಳದಾರರು ಮತ್ತು ವ್ಯಾಪಾರಿಗಳ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂಬ ಕಾರಣಕ್ಕೆ ಅಗತ್ಯವಸ್ತುಗಳ ಸಟ್ಟಾ ವ್ಯಾಪಾರವನ್ನು ನಿಷೇಧ ಮಾಡಲು ಸರ್ಕಾರ ತಯಾರಿಲ್ಲ. ಆದ್ದರಿಂದ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣ ಮಾಡಬೇಕೆಂದು ಪ್ರಮುಖ ಒತ್ತಾಯವಾಗಿದೆ.

ಹೊಸ ಮತ್ತು ಸಭ್ಯ ಉದ್ಯೋಗಗಳ ಸೃಷ್ಟಿ ಮಾಡುವ ನೀತಿಗಳು ಬೇಕು

ಇತ್ತೀಚೆಗೆ ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿಯಾಗುತ್ತಿದೆ ಎಂದು ಸಮರ್ಥಿಸಿಕೊಳ್ಳುತ್ತಿದೆ. ಉದ್ಯೋಗ ಸೃಷ್ಟಿಗೆ ಸರಕಾರ ಕೊಡುತ್ತಿರುವ ವಿವರಗಳನ್ನು ಗಮನಿಸಿ. ಹೊಸದಾಗಿ ಪ್ರಾವಿಡೆಂಟ್ ಫಂಡ್‌ಗೆ 10 ಲಕ್ಷ ಸದಸ್ಯರು ಆಗಿದ್ದಾರೆ. ಹೊಸ ನಿವೃತ್ತಿ ವೇತನದಡಿಯಲ್ಲಿ (ಎನ್‌ಪಿಎಸ್) ಮತ್ತು ಪ್ರಧಾನಮಂತ್ರಿ ರೋಜ್‌ಗಾರ ಯೋಜನೆ (ಪಿಎಂಆರ್.ವೈ)ಯಡಿಯಲ್ಲಿ 85 ಲಕ್ಷ ಸದಸ್ಯರು ಸೇರ್ಪಡೆಯಾಗಿದ್ದಾರೆ. 2014 ರಿಂದ ಯಾರು ಹೊಸದಾಗಿ ಈ 3 ಯೋಜನೆಗಳಲ್ಲಿ ಸೇರ್ಪಡೆ ಆಗಿದ್ದಾರೋ ಅದು ಉದ್ಯೋಗ ಸೃಷ್ಟಿ ಎನ್ನಲಾಗುತ್ತಿದೆ.

ಇದರ ನಿಜವಾದ ಮುಖ ಏನು?

ರಾಜ್ಯದಲ್ಲಿ–ದೇಶದಲ್ಲಿ ಲಕ್ಷಾಂತರ ಯುವಕ–ಯುವತಿಯರು ಗುತ್ತಿಗೆ, ಹೊರಗುತ್ತಿಗೆ, ಸಂಭಾವನೆ, ಗೌರವಧನ ಮುಂತಾದ ಹೆಸರುಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರುಗಳು ಸಂಘಟಿತರಾಗಿ ಸಾಮಾಜಿಕ ಭದ್ರತೆಯ ಸೌಲಭ್ಯಗಳಿಗಾಗಿ ನಡೆಯುವ ಹೋರಾಟಗಳ ಪರಿಣಾಮವಾಗಿ ಪಿಎಫ್‌ನ್ನು ಕೊಡಬೇಕಾಗುತ್ತದೆ. ಉದಾ: ಕೆಪಿಟಿಸಿಎಲ್, 5 ಎಸ್ಕಾಂಗಳಲ್ಲಿ ಸುಮಾರು 20 ಸಾವಿರ ಜನರು 15 ವರ್ಷಗಳಿಂದ ದುಡಿಯುತ್ತಿದ್ದಾರೆ. ಈಗ ಅವರಿಗೆ ಪಿಎಫ್‌ನ್ನು ಕಡ್ಡಾಯ ಮಾಡಲಾಗಿದೆ. ಪಿಎಫ್‌ನ್ನು ಕಡ್ಡಾಯಗೊಳಿಸಿದ್ದರಿಂದ 20 ಸಾವಿರ ಜನ ಹೊಸದಾಗಿ ಸೇರ್ಪಡೆಯಾದರು. ಆದರೆ ಇವು ಹೊಸ ಉದ್ಯೋಗಗಳಲ್ಲ.

ಹಾಗೆಯೇ ಅಂಗನವಾಡಿ–ಬಿಸಿಯೂಟ ಮುಂತಾದ ಸ್ಕೀಮುಗಳಲ್ಲಿ ದುಡಿಯುವವರಿಗೆ ಎನ್‌ಪಿಎಸ್‌ನ್ನು ವಿಸ್ತರಿಸುತ್ತಾರೆ. ಅವರು ಎನ್‌ಪಿಎಸ್‌ಗೆ ಹೊಸ ಸದಸ್ಯರೇ. ಆದರೆ ಉದ್ಯೋಗದಲ್ಲಿ 30–40 ವರ್ಷಗಳಿಂದಿದ್ದಾರೆ. ಕೇಂದ್ರ ಸರ್ಕಾರ ಹೇಳುತ್ತದೆ ಇದು ಹೊಸ ಉದ್ಯೋಗ ಸೃಷ್ಟಿ ಅಂತ.


ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸಲಾಗುವುದೆಂಬ ಆಶ್ವಾಸನೆಯಿತ್ತು, ಅದರ ಪ್ರಕಾರ ಮೇಕ್ ಇನ ಇಂಡಿಯಾ, ಸ್ಕಿಲ್ ಇಂಡಿಯಾ, ಸ್ಮಾರ್ಟ್ ಇಂಡಿಯಾ, ಡಿಜಿಟಲ್ ಇಂಡಿಯಾ, ಪ್ರಧಾನಮಂತ್ರಿ ರೋಜ್‌ಗಾರ ಪ್ರೋತ್ಸಾಹ ಯೋಜನಾ ಮತ್ತಿತರ ಯೋಜನೆಗಳ ಮೂಲಕ ಉದ್ಯೋಗ ಸೃಷ್ಟಿ ಎಂದು ಹೇಳುತ್ತಿದೆ.

ಇದು ಉದ್ಯೋಗಗಳ ಸೃಷ್ಟಿ ಬಗ್ಗೆ ಹೊಸ ಸುಳ್ಳುಗಳ ಸೃಷ್ಟಿಯಲ್ಲದೆ ಬೇರೇನೂ ಅಲ್ಲ.

ಆದರೆ ಸರಕಾರದ ಹೊಸ ಸುಳ್ಳುಗಳ ಸೃಷ್ಟಿ ಮೋಸ ಮಾಡಲಾಗದಷ್ಟು ವಾಸ್ತವವಿದೆ. ನಿಜವಾಗಿಯೂ ಹೆಚ್ಚುತ್ತಿರುವ ನಿರುದ್ಯೋಗದ ಪ್ರಮಾಣ ಕಣ್ಣಿಗೆ ಹೊಡೆಯುವಂತಿದೆ. ಹೆಚ್ಚೆಚ್ಚು ಆತಂಕವನ್ನು ಸೃಷ್ಟಿಸುತ್ತಿದೆ. ಕೆಲವು ಉದಾಹರಣೆಗಳು ಸಾಕು.

ಭಾರತೀಯ ರೈಲ್ವೆ ನೇಮಕಾತಿ ಮಂಡಳಿ 62,407 ಗ್ಯಾಂಗ್‌ಮನ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ 1.9 ಕೋಟಿ ಅರ್ಜಿಗಳನ್ನು ನಮ್ಮ ದೇಶದ ನಿರುದ್ಯೋಗಸ್ಥ ಜನರು ಹಾಕಿದ್ದಾರೆ. ಅದರಲ್ಲೂ ಹೆಚ್ಚಿನ ವಿದ್ಯಾವಂತರು, ಇದಷ್ಟೇ ಅಲ್ಲದೇ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದ ಅಧ್ಯಯನ "State of working India - 2018" 70 ಲಕ್ಷ ಉದ್ಯೋಗ ನಷ್ಟವಾಗಿದೆ ಎಂದಿದೆ. ಇನ್ನೊಂದು ವರದಿ ಪ್ರಕಾರ ಟೆಲಿಕಾಂ ರಂಗದಲ್ಲಿ 15–20 ಸಾವಿರ ಉದ್ಯೋಗ ನಷ್ಟವಾಗುತ್ತದೆ. 2019ರೊಳಗೆ 65 ಸಾವಿರ ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಾರೆ.

ಭಾರತೀಯ ಅರ್ಥ ವ್ಯವಸ್ಥೆಯ ಮೇಲ್ವಿಚಾರಣಾ ಕೇಂದ್ರದ ಪ್ರಕಾರ 2017 ಅಕ್ಟೋಬರ್‌ನಲ್ಲಿ ಉದ್ಯೋಗದಲ್ಲಿದ್ದ ಕಾರ್ಮಿಕರ ಸಂಖ್ಯೆ 40.7 ಕೋಟಿ ಯಿಂದ 2018 ಅಕ್ಟೋಬರ್‌ಗೆ 39.7 ಕೋಟಿಗಿಳಿದಿದೆ. ಅಂದರೆ 90 ಲಕ್ಷ ಉದ್ಯೋಗಗಳು ನಷ್ಟವಾಗಿವೆ. ಉದ್ಯಮಗಳೂ ಹೆಚ್ಚೆಚ್ಚು ಬಂಡವಾಳ–ತೀವ್ರತೆಯವು ಆಗಿದ್ದು, ಉದ್ಯೋಗ ಸೃಷ್ಟಿ ಕುಂಠಿತವಾಗುತ್ತಿದೆ. 1980ರ ದಶಕದಲ್ಲಿ ಒಂದು ಕೋಟಿ ರೂ. ಬಂಡವಾಳ 90 ಉದ್ಯೋಗಗಳನ್ನು ಸೃಷ್ಟಿಸಿದರೆ ಈ ದಶಕದಲ್ಲಿ ಅದು 10ಕ್ಕೆ ಇಳಿದಿದೆ. ಮಾತ್ರವಲ್ಲದೆ ಉತ್ಪಾದನಾ ವಲಯದಲ್ಲಿ ಹೆಚ್ಚು ತಂತ್ರಜ್ಞಾನ ಮತ್ತು ಅಟೋಮೇಶನ್ ಬಳಸುವ ಮೂಲಕ ಉದ್ಯೋಗಗಳನ್ನು ನಾಶಪಡಿಸಲಾಗುತ್ತಿದೆ. ಉದಾಹರಣೆಗೆ ವೋಲ್ವೋ ಇಂಡಿಯಾ ಗ್ರೂಪ್ ಬಸ್ ಮತ್ತು ಟ್ರಕ್ಸ್‌ನ್ನು ತಯಾರಿಸುವ ಕಂಪನಿ. ಅದರ 3 ಘಟಕಗಳಲ್ಲಿ ಕಾರ್ಮಿಕರ ಸಂಖ್ಯೆ 540. ಒಂದು ವರ್ಷದ ವಹಿವಾಟು 2,200 ಕೋಟಿ.



ಕೃಪೆ: ಸತೀಶ್ ಆಚಾರ್ಯ

ನಮ್ಮ ದೇಶದಲ್ಲಿ ನಿರುದ್ಯೋಗದ ಸ್ಫೋಟಕ ಬೆಳವಣಿಗೆಗೆ ಕಾಣಿಕೆ ಕೊಟ್ಟಿರುವ ಬಹುದೊಡ್ಡ ಅಂಶಗಳೆಂದರೆ:

* ನಮ್ಮ ಆರ್ಥಿಕ ವ್ಯವಸ್ಥೆ ಸರಕುಗಳನ್ನು ಉತ್ಪಾದಿಸುವ ರಂಗವಾಗಿರುವ ಬದಲು ಲಾಭಕೋರ ಎಂಎನ್‌ಸಿಗಳಿಗೆ ಮಾರುಕಟ್ಟೆಯ ಸ್ಥಳವಾಗಿ ವೇಗವಾಗಿ ಪರಿವರ್ತಿತಗೊಳ್ಳುತ್ತಿರುವುದು, ನವೀನ ಯೋಜನೆಗಳಲ್ಲಿ ದೊಡ್ಡ ಹೂಡಿಕೆ ಇಲ್ಲದಿರುವುದು, ಚಾಲ್ತಿಯಲ್ಲಿರುವ ಉದ್ದಿಮೆಗಳಲ್ಲಿ ರೋಗಗ್ರಸ್ಥತೆ, ಮುಚ್ಚುವಿಕೆ, ಕಂಪನಿಗಳ ವಿಲೀನ–ಸ್ವಾಧೀನಗಳು ಭಾರೀ ಪ್ರಮಾಣದಲ್ಲಿ ಕೆಲಸಗಾರರನ್ನು ಕಡಿತ ಮಾಡಲು ಕಾರಣವಾಗುತ್ತಿರುವುದು.
* ಸದಾ ಹೆಚ್ಚುತ್ತಿರುವ ಗ್ರಾಮೀಣ ಬಡತನದಿಂದಾಗಿ ಭೂಹೀನ ಕೃಷಿ ಕೂಲಿಕಾರರ ಸಂಖ್ಯೆಯಲ್ಲಿ ಭಾರೀ ಹೆಚ್ಚಳ, ದೇಶದಲ್ಲಿ ಕೃಷಿಯಲ್ಲಿ ಬಂಡವಾಳಶಾಹಿ ಮಾದರಿ ಉತ್ಪಾದನೆಯ ಬೆಳವಣಿಗೆಯಿಂದಾಗಿ ಕೃಷಿ ಕಾರ್ಮಿಕರಿಗೆ ಒಂದು ವರ್ಷದಲ್ಲಿ ಸಿಗುವ ಫಲಕಾರಿ ಉದ್ಯೋಗದ ದಿನಗಳ ಸಂಖ್ಯೆ ಇಳಿಮುಖಗೊಳ್ಳುತ್ತಿರುವುದು
* ಕಾರ್ಷಿಕ ಬಿಕ್ಕಟ್ಟು ಮುಂದುವರಿಯುತ್ತಿದ್ದು, ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ರೈತರಿಗೂ ಕೂಡಾ ಕೃಷಿ ಮಾಡುವುದು ನಷ್ಟದ ಬಾಬತ್ತಾಗಿ ಪರಿಣಮಿಸಿರುವುದರಿಂದ ಭೂಮಿ ಕೇಂದ್ರೀಕರಣದತ್ತ ಹಸ್ತಾಂತರಗೊಳ್ಳುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಕೃಷಿಯಿಂದ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಜನತೆ ವಲಸೆ ಹೋಗಿ, ನಿರುದ್ಯೋಗಿಗಳ ಮೀಸಲು ಸೈನ್ಯ ಸೇರಿಕೊಳ್ಳುವಂತಾಗಿದೆ. ಇದು ನಗರ ಪ್ರದೇಶದ ನಿರುದ್ಯೋಗವನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ.

ಶ್ರಮ ಶಕ್ತಿಯ ಬೆಳವಣಿಗೆ ಹಾಗೂ ಉದ್ಯೋಗದ ಬೆಳವಣಿಗೆ ನಡುವಿನ ಅಂತರ ಹೆಚ್ಚುತ್ತಿದೆ. ಅದೇ ರೀತಿ, ಆರ್ಥಿಕ ಹಾಗೂ ಉದ್ಯೋಗದ ಬೆಳವಣಿಗೆ ನಡುವಿನ ಅಂತರ ಕೂಡಾ. ಕೇಂದ್ರ ಸರ್ಕಾರ ಬೆಳವಣಿಗೆಯ ದರ 7% ರಷ್ಟಾಗಿದೆ ಎಂದು ಸಮರ್ಥಿಸುವಾಗಲೇ ಉದ್ಯೋಗ ಹೆಚ್ಚಳದ ದರ 1% ಗಿಂತ ಕಡಿಮೆಯಿದೆ ಎನ್ನುವುದನ್ನು ಗಮನಿಸಬೇಕಾಗಿದೆ.

2014ರಲ್ಲಿ ಬಿಜೆಪಿ ಹೇಳಿದ ತನ್ನ ಪ್ರಣಾಳಿಕೆಯಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗದ ಸೃಷ್ಟಿಯ ಬದಲಿಗೆ ಬಂಡವಾಳಕ್ಕೆ ಅನುಕೂಲವಾಗುವ ನೀತಿಗಳನ್ನು ಅನುಸರಿಸುತ್ತಿದೆ. ಉದ್ಯೋಗ ಸೃಷ್ಟಿಯಾಗದಿರುವ ಸವಾಲು ದೇಶದ ಪ್ರಜಾಪ್ರಭುತ್ವ ಆರ್ಥಿಕ ಅಡಿಗಲ್ಲನ್ನು ಅಲ್ಲಾಡಿಸುತ್ತದೆ. ಉದ್ಯೋಗ ಸೃಷ್ಟಿಸುವ ನೀತಿಗಳ ಅಂಗೀಕಾರ ಮತ್ತು ಜಾರಿ ಸಾರ್ವತ್ರಿಕ ಮುಷ್ಕರದ ಪ್ರಮುಖ ಹಕ್ಕೊತ್ತಾಯಗಳಲ್ಲೊಂದು. ●

'ಹಳದಿ' ಫ್ರೆಂಚ್ ದಂಗೆ



ಫ್ರಾನ್ಸ್ ನಲ್ಲಿ ಇಂಧನ ಬೆಲೆಗಳ ಮೇಲೆ ತೆರಿಗೆ ಏರಿಕೆಯ ವಿರುದ್ಧ ಆರಂಭಗೊಂಡ "ಹಳದಿ ನಡುವಂಗಿ" (ಯೆಲ್ಲೋ ವೆಸ್ಟ್ ಅಥವಾ ಫ್ರೆಂಚ್ ನಲ್ಲಿ "ಗಿಲೆಟ್ಸ್ ಜೌನ್ಸ್") ಚಳುವಳಿ ಹೆಸರಿನಲ್ಲಿ ಹೊಸ ಸ್ವರೂಪ ತಾಳಿ, ಇದೀಗ ಫ್ರಾನ್ಸ್ ನ ಅಧ್ಯಕ್ಷ ಎಮ್ಯೂನೆಲ್ ಮ್ಯಾಕ್ರಾನ್ ರ ರಾಜೀನಾಮೆಗೆ ಪಟ್ಟು ಹಿಡಿದಿದೆ. ಈ ಹಳದಿ ನಡುವಂಗಿದಾರರ ಪ್ರತಿಭಟನೆ ಫ್ರಾನ್ಸ್ ನ ಭವಿಷ್ಯದ ಮೇಲೆ ಮಹತ್ವದ ಪರಿಣಾಮ ಬೀರಲಿದೆ. ಏಕೆಂದರೆ ಮೇಲ್ನೋಟಕ್ಕೆ ಇಂಧನ ತೆರಿಗೆ ಹೆಚ್ಚಳದ ವಿರುದ್ದವಾಗಿದ್ದರೂ ಸಹಾ, ಸಾರತಃ ಬಂಡವಾಳಶಾಹಿ ಪ್ರೇರಿತ ನವ-ಉದಾರವಾದ ಆರ್ಥಿಕ ನೀತಿಗಳ ದುಷ್ಪರಿಣಾಮಗಳ ವಿರುದ್ಧ ರಾಜಕೀಯ ಹೋರಾಟದ ಭಾಗವಾಗಿದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

"ಹಳದಿ ನಡುವಂಗಿ" ಎಂಬ ಹೆಸರಿನ ಈ ಪ್ರತಿಭಟನೆ ನವೆಂಬರ್ 17 ರಂದು, ಅಂದರೆ ನಾಲ್ಕು ವಾರಗಳ ಹಿಂದೆಯೇ ಆರಂಭವಾಯಿತು. ಮ್ಯಾಕ್ರಾನ್ ಸರಕಾರವು ಪ್ರಸ್ತಾವಿಸಿರುವ ಇಂಧನ ಬೆಲೆಗಳ ಮೇಲಿನ ತೆರಿಗೆಯ ಹೆಚ್ಚಳವನ್ನು ವಾಪಸ್ ಪಡೆಯಬೇಕೆಂದು ಆರಂಭಗೊಂಡ ಈ ಪ್ರತಿಭಟನೆಯಲ್ಲಿ ಹೆಚ್ಚಾಗಿ ಟ್ರಕ್ ವಾಹನ ಚಾಲಕರ ಭಾಗವಹಿಸುವಿಕೆ ಇತ್ತು. ಆ ನಂತರ ಮ್ಯಾಕ್ರಾನ್ ಸರಕಾರದ ಪ್ರಚೋದನೆ ಹಾಗೂ ಅಕ್ರಮಣಕಾರಿ ನಡವಳಿಕೆಯಿಂದ, ಪ್ರಸ್ತುತ ಇಡೀ ಫ್ರಾನ್ಸ್ ಗೆ ಹಬ್ಬಿ ಬೀದಿಗಳು ಹೊತ್ತಿ ಉರಿಯುತ್ತಿವೆ. ಮಾತ್ರವಲ್ಲದೆ, ಮ್ಯಾಕ್ರಾನ್ ಸರಕಾರದ ರಾಜೀನಾಮೆಗೆ ಒತ್ತಾಯಿಸುತ್ತಿದೆ. ಇದು ಸರಕಾರಕ್ಕೆ ನಡುಕ ಹುಟ್ಟಿಸಿರುವುದಂತು ನಿಜ. ಬರಿಯ ಪ್ರತಿಭಟನೆಯಿಂದ ಆರಂಭವಾಗಿ ಸರಕಾರ ಉರುಳಿಸಲು ಶಕ್ತವಾದ ಪೂರ್ಣ ದಂಗೆಯ ರೂಪ ಪಡೆದಿದೆ.

ಪರಿಸ್ಥಿತಿಯ ತೀವ್ರತೆಯನ್ನು ಅರ್ಥಮಾಡಿಕೊಂಡ ಸರಕಾರ ಇಂಧನ ಮೇಲಿನ ತೆರಿಗೆ ಹೆಚ್ಚಳವನ್ನು ಹಿಂಪಡೆಯಬೇಕಾಯಿತು. ಸರಕಾರ ತುರ್ತು ಸಭೆಯನ್ನು ಕರೆದು ಪ್ರಸ್ತಾವನೆಗಳನ್ನು ತಡೆಹಿಡಿಯುವ ತೀರ್ಮಾನವನ್ನು ಪ್ರಧಾನಿ ಎಡ್ವರ್ಡ್ ಫಿಲಿಪ್ ರವರು ಘೋಷಿಸಿದರು. ಇದರಿಂದ ಮ್ಯಾಕ್ರಾನ್ ಮತ್ತು ಫ್ರೆಂಚ್ ಸರ್ಕಾರಕ್ಕೆ ಮುಖಭಂಗವಾಗಿದ್ದಂತೂ ನಿಜ. ಏಕೆಂದರೆ, ಆರಂಭದಲ್ಲಿ ಈ ಪ್ರತಿಭಟನಾಕಾರರನ್ನು "ಕೊಲೆ ಗಡುಕರು ಹಾಗೂ ಮೂರ್ಖರು", ಎಂದಿದ್ದ ಸರಕಾರ ತೆರಿಗೆ ಹೆಚ್ಚಳವನ್ನು ಯಾವುದೇ ಕಾರಣಕ್ಕೂ ಹಿಂಪಡೆಯುವುದಿಲ್ಲ ವೆಂಬ ಅಹಂಕಾರದ ಧೋರಣೆಯನ್ನು ತೆಗೆದುಕೊಂಡು, ತನ್ನ ನಿಲುವನ್ನು ಸಮರ್ಥನೆ ಗೊಳಿಸಲು ಸುಳ್ಳುಗಳ ಸರಮಾಲೆಗಳನ್ನು ಹೆಣೆದಿತ್ತು. ಅಲ್ಲದೆ ತೆರಿಗೆ ಏರಿಕೆಯು ದೇಶವನ್ನು ಆರ್ಥಿಕವಾಗಿ ಬಲಿಷ್ಟಗೊಳಿಸಲು ಉಪಯುಕ್ತ ವಾಗುತ್ತದೆ ಎಂದು ಮ್ಯಾಕ್ರಾನ್ ವರ್ಣಿಸಿದ್ದರು.

ಸುಳ್ಳು ಆರೋಪಗಳು

ಫ್ರಾನ್ಸ್‌ನಲ್ಲಿ ಒಟ್ಟು 1.7 ಕೋಟಿ ದುಡಿಯುವ ಜನರು ದೂರದ ಹೊರ ವಲಯಗಳಲ್ಲಿ ಕೂಲಿಗಾಗಿ ದುಡಿಯಲು ಹೋಗುತ್ತಾರೆ, ಇವರಲ್ಲಿ ಶೇ. 80 ರಷ್ಟು ಮಂದಿ ಸ್ವಂತ ವಾಹನಗಳಲ್ಲಿ ಪ್ರಯಾಣ ಮಾಡುತ್ತಾರೆ. ಏಕೆಂದರೆ, ಸಾರ್ವಜನಿಕ ಸಾರಿಗೆಯ ಅಸಮರ್ಪಕ ವ್ಯವಸ್ಥೆ ಹಾಗೂ ಕೊರತೆಯಿಂದ ಇವರೆಲ್ಲರೂ ತೈಲವನ್ನು ಬಳಸಲೇ ಬೇಕಾದ ಅನಿವಾರ್ಯತೆ ಇದೆ. ಇದರಿಂದಾಗಿ ಕೆಳ ಮಧ್ಯಮ ವರ್ಗದ ಜನರು ಹಾಗೂ ದುಡಿಯುವ ಜನರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ ಮಾತ್ರವಲ್ಲದೆ, ಇದರ ಪರಿಣಾಮದಿಂದಾಗಿ ಇತರೆ ಅಗತ್ಯ ವಸ್ತುಗಳ ಬೆಲೆಗಳು ಸಾಮಾನ್ಯವಾಗಿ ಹೆಚ್ಚಾಗುತ್ತವೆ. ಆದರೆ ಮ್ಯಾಕ್ರಾನ್ ಸರಕಾರ, ಹೆಚ್ಚು ಇಂಧನ ಬಳಕೆಯಿಂದಾಗಿ, ವಾಯು ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟಲು ಹಾಗೂ ಹವಮಾನ ಬದಲಾವಣೆ ಕಾಪಾಡುವ ಸಲುವಾಗಿಯೇ ಇಂಧನ ತೆರಿಗೆಯ ಮೇಲಿನ ಹೆಚ್ಚಳವನ್ನು ಮಾಡಲಾಗಿದೆ ಎಂಬ ಕುಂಟು ನೆಪವನ್ನು ಕೊಟ್ಟಿರುವುದು ಪ್ರತಿಭಟನೆಕಾರರಲ್ಲಿ ಆಕ್ರೋಶ ಮೂಡಿಸಿದೆ. ಹವಾಮಾನ ಬದಲಾವಣೆಯ ಪ್ರಶ್ನೆಯನ್ನು ಸರಕಾರ ಬಗೆಹರಿಸಲೇ ಬೇಕೆಂಬುದನ್ನು ಒಪ್ಪಿಕೊಳ್ಳಲೇಬೇಕು. ಅದಕ್ಕೆ ಪರಿಹಾರ ಮಾರ್ಗ ತೆರಿಗೆ ಹೆಚ್ಚಳವಲ್ಲ. ಬದಲಿಗೆ, ನಿಜವಾಗಿ ವಾಯು ಮಾಲಿನ್ಯ ತಡೆಗಟ್ಟಲು ಇಂಧನ ತಯಾರಿಕೆಯಲ್ಲಿ ತೊಡಗಿರುವ ಕಂಪನಿಗಳು ನಿಯಮ ಬಾಹಿರವಾಗಿ ಹೆಚ್ಚು ಹೆಚ್ಚು ಹೊಗೆಯನ್ನು ವಾತಾವರಣಕ್ಕೆ ಉಗಿಯುತ್ತಿರುವುದರಿಂದ ಹವಾಮಾನ ವೈಪರೀತ್ಯ ಉಂಟಾಗುತ್ತದೆ. ಆದ್ದರಿಂದ ಆ ಕಂಪನಿಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರಿಗೆ ಹೆಚ್ಚು ತೆರಿಗೆಯನ್ನು ಹಾಕಬೇಕೆಂದು ಪ್ರತಿಭಟನಾಕಾರರ ಒತ್ತಾಯವಾಗಿದೆ.

ಮತ್ತೊಂದು, ಸುಳ್ಳೆಂದರೆ ಹಳದಿ ಪ್ರತಿಭಟನೆಕಾರರು 'ಬಲಪಂಥೀಯ ದೋರಣೆಗಳನ್ನು ಅನುಸರಿಸುತ್ತಿದ್ದಾರೆ, ವಲಸೆಗಾರರನ್ನು ತೀವ್ರವಾಗಿ ವಿರೋಧಿಸುತ್ತಾರೆ ಎಂಬುದು. ಆದರೆ ಪ್ರತಿಭಟನೆಕಾರರು ನಾವು ಯಾವುದೇ ದೇಶದಿಂದ ಫ್ರಾನ್ಸ್ ಗೆ ಬಂದು ನೆಲೆಸಿರುವ ವಲಸೆಗಾರರನ್ನು ವಿರೋಧಿಸುವುದಿಲ್ಲ, ಬದಲಿಗೆ ಎಲ್ಲಾ ವಿದೇಶಿ ಕೆಲಸಗಾರರಿಗೆ, ಫ್ರಾನ್ಸ್ ನ ಕೆಲಸಗಾರರಿಗೆ ಕೊಡುವ ರೀತಿಯಲ್ಲಿ ಸಮಾನವಾದ ವೇತನವನ್ನು ಪಾವತಿಸಬೇಕು. ನಾವು ಎಲ್ಲರನ್ನೂ ಗೌರವದಿಂದಲೇ ಸ್ವೀಕರಿಸುತ್ತಿದ್ದೇವೆ ಎಂದಿದ್ದಾರೆ.

1968 ರ ದಂಗೆಗೆ ಹೋಲಿಸುವುದು ಸರಿಯಲ್ಲ ?

ಕಳೆದ ನಾಲ್ಕು ವಾರಗಳಿಂದ ನಿರಂತರವಾಗಿ ನಡೆಯುತ್ತಿರುವ ಹಳದಿ ದಂಗೆಯನ್ನು ಹಲವರು, 1968 ರಲ್ಲಿ ನಡೆದ ದಂಗೆಗೆ ಹೋಲಿಸುತ್ತಿದ್ದಾರೆ. ಆ ದಂಗೆಯಲ್ಲಿ ವಿದ್ಯಾರ್ಥಿಗಳು ಪ್ರಮುಖ ಪಾತ್ರವಹಿಸಿದ್ದರು. ಅಂದಿನ ಸರಕಾರ ರಾಜೀನಾಮೆ ಕೊಡ ಬೇಕಾದ ಪರಿಸ್ಥಿತಿ ಉದ್ಭವಗೊಂಡಿತ್ತು. ಆದರೆ 50 ವರ್ಷಗಳ ನಂತರ ನಡೆಯುತ್ತಿರುವ ಈ ಚಳುವಳಿಯಲ್ಲಿ ಹೋರಾಟದ ಕಣದಲ್ಲಿ, ನವ ಉದಾರವಾದ ನೀತಿಗಳ ದುಷ್ಪರಿಣಾಮ ಕ್ಕೆ ತುತ್ತಾಗಿರುವ ದುಡಿಯುವ ಜನರೇ ಬಹು ದೊಡ್ಡ ಪ್ರಮಾಣದಲ್ಲಿ ಇದ್ದಾರೆ ಎಂಬುದನ್ನು ಗಮನಿಸಬೇಕು. ಮೇಲ್ನೋಟಕ್ಕೆ ಈ ಎರಡೂ ಚಳುವಳಿಗಳು ಒಂದಕ್ಕೊಂದು ಹೋಲಿಕೆಯನ್ನು ಹೊಂದಿದ್ದರೂ ಸಹಾ, ಹಲವು ವ್ಯತ್ಯಾಸಗಳಿವೆ. ಪ್ರಸ್ತುತ, ಫ್ರಾನ್ಸ್ ನ ಶೇ.80 ರಷ್ಟು ಜನರು ಈ ಚಳುವಳಿಯನ್ನು ಬೆಂಬಲಿಸುತ್ತಿದ್ದಾರೆ. ಆರಂಭದಲ್ಲಿ, ಪೋಲಿಸರನ್ನು ಬಳಸಿ, ಹೋರಾಟವನ್ನು ಸದೆ ಬಡಿಯಲು ಸರಕಾರ ಮುಂದಾಗಿತ್ತು. ಸುಮಾರು 90 ಸಾವಿರ ಪೋಲೀಸರನ್ನು ನಿಯೋಜಿಸಿ. ಗಾಳಿಯಲ್ಲಿ ಗುಂಡು ಹಾರಿಸುವುದು, ಅಶ್ರು ವಾಯು ಪ್ರಯೋಗ ಮಾಡುವುದು, ಲಾಠಿ ಏಟುಗಳು – ಹೀಗೆ ಹತ್ತು ಹಲವು ರೀತಿಯಲ್ಲಿ ಪ್ರತಿಭಟನೆಕಾರರ ಮೇಲೆ ದಬ್ಬಾಳಿಕೆ ದಾಳಿಯನ್ನು ನಡೆಸಲಾಗಿದೆ. ಇಲ್ಲಿಯವರೆಗೆ ಲಭ್ಯವಿರುವ ಮಾಹಿತಿಗಳ ಪ್ರಕಾರ, ಸುಮಾರು ನಾಲ್ಕು ಜನರು ಕೊಲ್ಲಲ್ಪಟ್ಟಿದ್ದಾರೆ, ಸಾವಿರಾರು ಜನರು ಗಾಯಾಳುಗಳಾಗಿದ್ದಾರೆ. ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಹೋರಾಟಕ್ಕೆ ಕಾರ್ಮಿಕ ಸಂಘಗಳು ಬೆಂಬಲ ನೀಡಿವೆ. ಫ್ರಾನ್ಸ್ ಕಮ್ಯೂನಿಸ್ಟ್ ಪಕ್ಷದ ಮುಖಂಡ ಜೀನ್ ಲುಕ್ ಮೆಲೆನ್ಚೋನ್, ಮ್ಯಾಕ್ರಾನ್ ರ ರಾಜೀನಾಮೆ ಗೆ ಒತ್ತಾಯಿಸಿ, ಹೊಸ ಚುನಾವಣಾ ಜನಾದೇಶವನ್ನು ಪಡೆಯಬೇಕೆಂದು ಆಗ್ರಹಿಸಿದ್ದಾರೆ. ಇದರಿಂದ ಸರಕಾರ ವಿಚಲಿತವಾಗಿದೆ.

ಚಳುವಳಿಯ ಹಿನ್ನೆಲೆ

2017 ರಲ್ಲಿ ಕನ್ಸರ್ವೇಟಿವ್ ಮತ್ತು ಸೋಷಿಯಲಿಸ್ಟ್ ಪಕ್ಷಗಳನ್ನು ಸೋಲಿಸಿ, ಮ್ಯಾಕ್ರಾನ್ ಅಧ್ಯಕ್ಷರಾದ ನಂತರ, ಫ್ರೆಂಚ್ ಜನರು ಇವರಿಂದ ಜನಪರ ನೀತಿಗಳನ್ನು, ಅದರಲ್ಲೂ ಯುವ ಜನರು ಉದ್ಯೋಗಗಳನ್ನು ಹೆಚ್ಚಾಗಿ ಬಯಸಿದ್ದರು. ಏಕೆಂದರೆ, ನವ ಉದಾರವಾದ ನೀತಿಗಳ ದುಷ್ಪರಿಣಾಮಗಳಿಂದಾಗಿ, ಫ್ರೆಂಚ್ ಜನರ ಬವಣೆಗಳು ಹೆಚ್ಚಾಗಿ ಜನರು ಬದಲಾವಣೆಯ ಆಶಯವನ್ನು ಹೊಂದಿದ್ದರು. ತನ್ನ ಚುನಾವಣಾ ಭಾಷಣಗಳಲ್ಲಿ ಮುಗ್ಧ ಹಾಗೂ ಸಿಹಿ ಸಿಹಿ ಮಾತುಗಳಿಂದ ಭರವಸೆಗಳ ಮಹಾಪೂರವನ್ನೇ ಹರಿಸಿದ್ದ ಮ್ಯಾಕ್ರಾನ್ ರ ಬಣ್ಣ ಬಹು ಬೇಗನೆ ಬಯಲಾಯಿತು.

ಅಧಿಕಾರ ವಹಿಸಿಕೊಂಡ ತಕ್ಷಣ ಅದೇ ನವ ಉದಾರವಾದ ನೀತಿಗಳನ್ನು ಮತ್ತಷ್ಟು ತೀವ್ರ ತರದಲ್ಲಿ ಜಾರಿಗೊಳಿಸಲು ಮ್ಯಾಕ್ರಾನ್ ಮುಂದಾದರು. ಆರ್ಥಿಕ ಶಿಸ್ತಿನ ಹೆಸರಿನಲ್ಲಿ 'ಮಿತವ್ಯಯ' ಕ್ರಮಗಳನ್ನು ಕಟುವಾಗಿ ಅನುಷ್ಠಾನಗೊಳಿಸಲಾರಂಭಿಸಿದರು ಹಾಗೂ ಕಾರ್ಮಿಕರ ಹಕ್ಕುಗಳ ಮೇಲೆ ಗದಾ ಪ್ರಹಾರ ಮಾಡಿದರು. ಪಿಂಚಣಿಯ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದರು, ಗೃಹ ಭತ್ಯೆಯನ್ನು ಕಡಿತಗೊಳಿಸಿದರು. ಸಾಮಾಜಿಕ ಕಲ್ಯಾಣ ಯೋಜನೆಗಳ ಮೇಲೆ ಕಡಿತ ಹೇರಿದರು. ಕಾರ್ಮಿಕ ಸಂಘಗಳ ರಚನೆಗೆ ಕಡಿವಾಣ ಹಾಕಿ, ಮಾಲಿಕರ ಪರ ಕಾನೂನುಗಳನ್ನು ಜಾರಿಗೆ ತಂದರು. ಶಿಕ್ಷಣ ಕ್ಷೇತ್ರದ ಸುಧಾರಣೆಗಳ ಹೆಸರಿನಲ್ಲಿ, ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ವಿನಾಶ ಮಾಡುವ ಪ್ರಕ್ರಿಯೆಯನ್ನು ಆರಂಭಿಸಿ, ಜನರಿಗೆ ಶಿಕ್ಷಣ ಮರೀಚಿಕೆ ಯಾಗುವಂತೆ ಮಾಡಿದರು. ಕಾಲೇಜು ಮತ್ತು ಯೂನಿವರ್ಸಿಟಿಗಳಿಂದ ಯುವ ಜನಾಂಗವನ್ನು ದೂರವಿಡಲು ಪ್ರಯತ್ನಿಸಲಾಯಿತು. ಅವರು ಚುನಾವಣೆ ಯಲ್ಲಿ ಕೊಟ್ಟ ಭರವಸೆಗಳಿಗೂ ಹಾಗೂ ನವ-ಉದಾರವಾದ ನೀತಿಗಳ ಜಾರಿಗೆ ಅವರು ತೋರಿಸಿದ ಬದ್ಧತೆಗೂ ಇರುವ ವ್ಯತ್ಯಾಸಗಳನ್ನು ಜನರು ಬಹುಬೇಗ ಅರಿತುಕೊಂಡರು.



ಈ ಹಿನ್ನೆಲೆಯಲ್ಲಿ ಕಳೆದ ಮಾರ್ಚ್ ತಿಂಗಳಿನಿಂದಲೇ ಕಾರ್ಮಿಕರು ಬೀದಿಗಿಳಿದು ಹೋರಾಟಕ್ಕೆ ಧುಮುಕಿದರು. ಪರಿಹಾರ ಕಂಡು ಕೊಳ್ಳುವ ಬದಲಿಗೆ, ಸರಕಾರ ಹೋರಾಟಗಳನ್ನು ದಬ್ಬಾಳಿಕೆಯ ಮೂಲಕ ಹತ್ತಿಕ್ಕಲು ಪ್ರಯತ್ನಿಸಿತು. ಹೀಗೆ ಅಸಮಾಧಾನ ಹೊಂದಿದ ಜನರ ಮೇಲೆ ಶೇ.16 ರಷ್ಟು ಇಂಧನ ತೆರಿಗೆ ಹೆಚ್ಚಳ ದುಬಾರಿಯಾಗಿ, ಅದರಲ್ಲಿಯೂ, ಗ್ರಾಮೀಣ ಜನರ ಮೇಲೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಮಾರಕ ಪರಿಣಾಮ ಬೀರಿತು. ಈ ಎಲ್ಲಾ ಹಿನ್ನೆಲೆಯಲ್ಲಿ, ಪ್ರಸ್ತುತ ಹಳದಂಗೆಯ ಹೊಸ ರೂಪದಲ್ಲಿ, ಫ್ರಾನ್ಸ್ ಇದೀಗ ಹೊತ್ತಿ ಉರಿಯಲಾರಂಭಿಸಿದೆ. ಜನ ಮನ್ನಣೆಗೆ ಪಾತ್ರವಾಗಿರುವ ಈ ಆಕ್ರೋಶ ಭರಿತ ಹೋರಾಟಗಾರರ ಸಾಮಾನ್ಯ ಬೇಡಿಕೆಗಳು ಸಮಂಜಸವಾಗಿವೆ. ಅವುಗಳಲ್ಲಿ ಪ್ರಮುಖವಾಗಿ, ಒಂದು ಹೊಸ ರಾಷ್ಟ್ರೀಯ ಕ್ಷೇಮಾಭಿವೃದ್ಧಿ ತೆರಿಗೆಯ ಜಾರಿ, ತಿಂಗಳಿಗೆ ಯೂರೊ 1300 ಕನಿಷ್ಠ ವೇತನ ಮತ್ತು ಕನಿಷ್ಠ ಪಿಂಚಣಿ ಜಾರಿ, ಸರಕಾರಿ ಉದ್ಯೋಗ ಕಾರ್ಯ ಯೋಜನೆಗಳು, ಬಾಡಿಗೆ ನಿರ್ಬಂಧ ಕಾನೂನು, ಆರೋಗ್ಯ ಸಂರಕ್ಷಣಾ ಕಾರ್ಯಕ್ರಮ, ಆರ್ಥಿಕ ಮಿತವ್ಯಯ ನೀತಿಯ ಹಿಂಪಡೆತ, ಹಾಗೂ ದೊಡ್ಡ ಹಾಗೂ ಭಾರೀ ಪ್ರಮಾಣದ ಕಂಪನಿಗಳ ಮೇಲೆ ಹೆಚ್ಚಿನ ತೆರಿಗೆ ಜಾರಿ ಇವೇ ಇವರ ಪ್ರಮುಖ ಬೇಡಿಕೆಗಳಾಗಿವೆ.

ಇದಲ್ಲದೆ ಜನರ ಹಕ್ಕೊತ್ತಾಯಗಳಿಗೆ ಸ್ಪಂದಿಸದ ಕಾರ್ಪೋರೇಟುಗಳ ಕಪಮುಷ್ಟಿಯಲ್ಲಿರುವ ಇದು 'ಪ್ರಜಾಪ್ರಭುತ್ವ'ವಲ್ಲ. ಈ ವ್ಯವಸ್ಥೆಯನ್ನು ಬದಲಾಯಿಸಬೇಕೆಂಬ ಅತಿ ಮಹತ್ವದ ಒತ್ತಾಯವನ್ನೂ ಚಳುವಳಿ ಎತ್ತಿದೆ. ಒಂದು ವರ್ಷದೊಳಗೆ ಹೊಸ ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಲು ಹೊಸ ಸಂವಿಧಾನ ರಚಿಸಬೇಕು ಎಂಬುದರ ಬಗ್ಗೆ ಜನಮತಸಂಗ್ರಹ ನಡೆಯಬೇಕು ಎಂದು ಒತ್ತಾಯಿಸಿದೆ. ಹಿಂದಿನ ಹಲವು ದಂಗೆಗಳಂತೆ ಜನಪ್ರಿಯತೆ ಕಳೆದುಕೊಂಡ ಪ್ರಸಕ್ತ ಸರಕಾರದ ವಿರುದ್ಧ ಮಾತ್ರವಲ್ಲ ಪ್ರತಿಭಟನಾಕಾರರ ಆಕ್ರೋಶ. ಈ ರೀತಿಯ ಸರಕಾರಗಳು, ಅದನ್ನು ಎತ್ತಿ ಹಿಡಿಯುವ ವ್ಯವಸ್ಥೆಯನ್ನು ಬದಲಾಯಿಸಬೇಕೆಂಬ ಒತ್ತಾಯ ಜನಮಾನಸವನ್ನು ಆಗಲೇ ತಟ್ಟಿದೆ ಎಂಬುದು ಬಹಳ ಗಮನಾರ್ಹ ಸಂಗತಿ.

ಯಾವುದನ್ನು ವಿರೋಧಿಸಬೇಕು, ಏನನ್ನು ಪಡೆಯಬೇಕೆಂಬ ಸ್ಪಷ್ಟವಾದ ಬೇಡಿಕೆಗಳೊಂದಿಗೆ ಚಳುವಳಿ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಜನರ ಬೆಂಬಲವನ್ನು ಇಡೀ ದೇಶಾದ್ಯಂತ ಪಡೆಯುತ್ತಿದ್ದು, ಸರಕಾರಕ್ಕೆ ಇದರ ಬಿಸಿ ತಟ್ಟಿದೆ. ಈ ಹಿನ್ನೆಲೆಯಲ್ಲಿಯೇ ಸರಕಾರ ಇಂಧನದ ಮೇಲಿನ ತೆರಿಗೆ ಹೆಚ್ಚಳವನ್ನು ಹಿಂಪಡೆಯುವಂತಾಯಿತು. ಇದೀಗ ಹೆಚ್ಚಿನ ಜನರ ಬೆಂಬಲದಿಂದಾಗಿ ಹೊಸ ಸ್ವರೂಪ ಪಡೆದು ಕೊಂಡಿದೆ. ಇದು ನವ-ಉದಾರವಾದ ನೀತಿ ರೂಪಕರಿಗೆ ಕೊಡುತ್ತಿರುವ ಎಚ್ಚರಿಕೆಯ ಚಳುವಳಿಯಾಗಿ ಪರಿವರ್ತನೆಗೊಂಡು ಫ್ರಾನ್ಸ್ ನ ಭವಿಷ್ಯದಲ್ಲಿ ಹೊಸ ಮೈಲು ಗಲ್ಲಾಗಲಿ ಎಂದು ಆಶಿಸೋಣ. ●

JANASHAKTHI KANNADA VARA PATRIKE DECEMBER 17-23, 2018 Price: Rs. 10/- Date of Publication: 14 DECEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ರೈತರ ಸಮಾವೇಶದಲ್ಲಿ ಡಾ.ಅಶೋಕ ಧಾವಲೆ ಆಗ್ರಹ

ತೊಗರಿಗೆ ರೂ. 7,500 ಬೆಂಬಲ ಬೆಲೆ ನಿಗದಿಪಡಿಸಿ

'ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಆಧರಿಸಿ ಕೇಂದ್ರ ಸರ್ಕಾರ ಕ್ವಿಂಟಲ್ ತೊಗರಿಗೆ ರೂ.7,500 ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು ಹಾಗೂ ರೈತರಿಗೆ ರೂ. 5 ಸಾವಿರ ಪಿಂಚಣಿ ನೀಡಬೇಕು' ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ. ಅಶೋಕ ಧಾವಲೆ ಆಗ್ರಹಿಸಿದರು. ಅಖಿಲ ಭಾರತ ಕಿಸಾನ್ ಸಭಾ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘಟನೆಗಳು ಡಿಸೆಂಬರ್ 12 ರಂದು ಆಯೋಜಿಸಿದ್ದ ವಿಭಾಗ ಮಟ್ಟದ ರೈತ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

'ಮೋದಿ ಸರ್ಕಾರ ಕಾರ್ಪೋರೇಟ್ ಕುಳಗಳಿಗೆ ಸುಮಾರು ರೂ.3.50 ಲಕ್ಷ ಕೋಟಿ ತೆರಿಗೆ ವಿನಾಯಿತಿ ನೀಡಿದೆ. ಬಿಜೆಪಿಯು ಕೇಂದ್ರದ ಗದ್ದುಗೆ ಏರಿದಾಗಿನಿಂದ ಇದುವರೆಗೂ ರೈತರ, ಕೂಲಿ ಕಾರ್ಮಿಕರ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತ ಬಂದಿದೆ. ಇದರ ಪ್ರತಿಫಲ ಎನ್ನುವಂತೆ ನಾಲ್ಕು ವರ್ಷಗಳಲ್ಲಿ ದೇಶದ ಮೂರು ಲಕ್ಷ ರೈತರು ಆರ್ಥಿಕ ಸಂಕಷ್ಟ ಹಾಗೂ ಬೆಳೆಗೆ ಯೋಗ್ಯ ಬೆಲೆ ಸಿಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಟೀಕಿಸಿದರು.

'ದೇಶದ ತೊಗರಿ ಬೆಳೆಗಾರರ ಹಾಗೂ ದಾಲ್‌ಮಿಲ್ಗಳ ಹಿತರಕ್ಷಣೆಗಾಗಿ ವಿದೇಶದಿಂದ ಆಮದಾಗುವ ಬೇಳೆಕಾಳಿನ ಮೇಲೆ ಶೇಕಡಾ 35 ರಷ್ಟು ಸುಂಕ ವಿಧಿಸಬೇಕು' ಎಂದು ಒತ್ತಾಯಿಸಿದ ಅವರು, 'ಹೈದರಾಬಾದ್ ಕರ್ನಾಟಕದಲ್ಲಿ ಬರ ಆವರಿಸಿದ್ದು, ಉದ್ಯೋಗ ಖಾತ್ರಿ ಯೋಜನೆಯ 100 ದಿನಗಳ ಮಿತಿ ತೆಗೆದು ಹಾಕಿ, ಹೆಚ್ಚಿನ ಕೂಲಿಯನ್ನು ನಿಗದಿಪಡಿಸಬೇಕು' ಎಂದು ಒತ್ತಿ ಹೇಳಿದರು. 'ಕೇಂದ್ರ ಸರ್ಕಾರವೂ ಬೆಳೆ ನಷ್ಟಕ್ಕೆ ಹೆಕ್ಟರ್ಗೆ ನಿಗದಿಪಡಿಸಿದ ರೂ.6,800 ಅವೈಜ್ಞಾನಿಕ ಹಾಗೂ ಅಲ್ಪ ಮೊತ್ತವಾಗಿದೆ. ಬದಲಾಗಿ 25 ಸಾವಿರ ನಿಗದಿಪಡಿಸಬೇಕು' ಎಂದೂ ಅವರು ಹೇಳಿದರು.

ತೊಗರಿ ಖರೀದಿ ಕೇಂದ್ರ: ಡಿ. 18 ರಂದು ಧರಣಿ

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ತೊಗರಿ ಖರೀದಿ ಕೇಂದ್ರವನ್ನು ತೆರೆಯಬೇಕು. ಇಲ್ಲವಾದರೆ ರಾಜ್ಯದಾದ್ಯಂತ ಡಿ. 18 ರಂದು ಧರಣಿ ನಡೆಸಲಾಗುವುದು ಎಂದು ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು.

'ರಾಜ್ಯದಲ್ಲಿ ಸುಮಾರು 8 ಲಕ್ಷ ರೈತರು ತೊಗರಿ ಬೆಳೆಯುತ್ತಾರೆ. ಹೇರಳವಾಗಿ ಇಲ್ಲಿನ ರೈತರು ತೊಗರಿ ಬೆಳೆಯುತ್ತಿದ್ದರೂ ವಿದೇಶದಿಂದ ಲಕ್ಷಾಂತರ ಟನ್ ಬೇಳೆಯನ್ನು ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳುತ್ತಿದೆ. ಇದರಿಂದ ಇಲ್ಲಿನ ರೈತರು ಬೀದಿಗೆ ಬೀಳುತ್ತಿದ್ದಾರೆ. ಇಂಥ ನಾಚಿಕೆಗೇಡಿನ ವ್ಯವಹಾರವನ್ನು ಕೇಂದ್ರ ಸರ್ಕಾರ ಉಳ್ಳವರ ಹಿತಾಸಕ್ತಿಗಾಗಿ ಮಾಡುತ್ತಿದೆ ಎಂದು ಮೋದಿ ಹಾಗೂ ಶಾ ವಿರುದ್ಧ ಕಿಡಿಕಾರಿದರು.

ಸುಳ್ಳುಗಾರ ಮೋದಿ ಸರ್ಕಾರ:

ಸುಲಫಲಮಠದ ಶ್ರೀಶೈಲ ಸಾರಂಧರ ದೇಶಿ ಕೇಂದ್ರ ಸ್ವಾಮೀಜಿ ಮಾತನಾಡಿ, 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಗುದ್ದಾಟದಲ್ಲಿ ಜನರು ನರಳುತ್ತಿದ್ದಾರೆ. ಇದುವರೆಗೂ ಆಡಳಿತ ನಡೆಸಿದ ಯಾವುದೇ ಸರ್ಕಾರಗಳು ರೈತರ, ಕಾರ್ಮಿಕರ, ಶೋಷಿತ ಜನಗಳ ಪರವಾಗಿ ನಿಂತಿಲ್ಲ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಮೋದಿ ಅವರು ಸುಳ್ಳುಗಳಿಂದಲೇ ಜನರನ್ನು ದಿಕ್ಕು ತಪ್ಪಿಸಿದರು' ಎಂದು ಹರಿಹಾಯ್ದರು.

'ನಾವು ಬಳಸುವ ಚಪ್ಪಲಿ, ಬಟ್ಟೆ ಇನ್ನಿತರ ವಸ್ತುಗಳಿಗೆ ಬೆಲೆಯನ್ನು ತಯಾರಕರೇ ನಿರ್ಧರಿಸುತ್ತಾರೆ. ಆದರೆ, ದೇಶಕ್ಕೆ ಅನ್ನ ನೀಡುವ ರೈತರ ಬೆಳೆಗೆ ನಿರ್ದಿಷ್ಟ ಬೆಲೆ ನಿಗದಿಯಾಗಿಲ್ಲ. ಇದು ದೇಶದ ದುರಂತ' ಎಂದು ಬೇಸರ ವ್ಯಕ್ತಪಡಿಸಿದರು.

ಬಹಿರಂಗ ಸಭೆಗಿಂತ ಮೊದಲು ಗಂಜ್ ವೃತ್ತದಿಂದ ಜಗತ್ ವೃತ್ತದವರೆಗೆ ಮೂರು ಕಿ.ಮಿ.ಗಳ ಸಾವಿರಾರು ರೈತರ ಆಕರ್ಷಕ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಕಲಬುರ್ಗಿಯ ತೊಗರಿ ರೈತರು ಮತ್ತು ನೆರೆಯ ಬಿಜಾಪುರ, ಯಾದಗೀರ, ಬೀದರ ಗಳಿಂದ ರೈತ ಸಂಘದ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿದ್ದರು

'ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನರೋಣದ ಮಹಾಂತ ಶಿವಾಚಾರ್ಯರು, ವಿಜಯಪುರ ಜಿಲ್ಲಾ ಘಟಕದ ಅಣ್ಣಾರಾವ ಇಳಿಗೇರ, ವೀರಣ್ಣಗೌಡ, ನೇಷನ್ ಫಾರ್ ಫಾರ್ಮರ್ಸ್ ಪ್ರಧಾನ ಸಂಚಾಲಕ ಅಲ್ತಾಫ್ ಇನಾಮದಾರ್, ಕರ್ನಾಟಕ ಪ್ರಾಂತ ರೈತ ಸಂಘಟನೆಯ ಮುಖಂಡರಾದ ಗೌರಮ್ಮ ಪಿ.ಪಾಟೀಲ, ಪಾಂಡುರಂಗ ಮಾವಿನಕರ್, ಸುಭಾಷ ಹೊಸಮನಿ, ಸಿದ್ಧಲಿಂಗಯ್ಯ ಯಂಪಳ್ಳಿ, ಮಲ್ಲಣ್ಣಾಗೌಡ, ಮಹಾದೇವಪ್ಪ, ಅಶೋಕ ಮ್ಯಾಗೇರಿ ಇದ್ದರು.

'ಬೆಳಗಾವಿ ಚಲೋ' ಪರಿಣಾಮ

ಮುನಿಸಿಪಾಲಿಟಿಗಳಲ್ಲಿನ ಡಿ ಗ್ರೂಪ್ ನೌಕರರಿಗೆ ಸಮಾನ ಸೇವಾ ಷರತ್ತಿಗೆ ಸರ್ಕಾರ ಚಿಂತನೆ

ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಮತ್ತು ನಗರಪಾಲಿಕೆ, ಮಹಾನಗರ ಪಾಲಿಕೆಗಳಲ್ಲಿ ಪೌರಕಾರ್ಮಿಕರು ಯುಜಿಡಿ ಕಾರ್ಮಿಕರು, ಕಸದ ಗಾಡಿಯ ಚಾಲಕರು, ಲೋಡರ್‌ಗಳು, ವಾಟರ್ ಮನ್‌ಗಳು ಮತ್ತಿತರೆ ಡಿ ಗ್ರೂಪ್ ನೌಕರರಿಗೆ ಗುತ್ತಿಗೆ ಪದ್ದತಿಯಿಂದ ತಪ್ಪಿಸಿ ಸಮಾನ ಸೇವಾ ಷರತ್ತಿನ ಅಡಿಯಲ್ಲಿ ದುಡಿಸುವ ಚಿಂತನೆಯು ಸರ್ಕಾರದ ಮುಂದಿದ್ದು, ಈ ಸಂಬಂಧ ಸರ್ಕಾರ ಕ್ಯಾಬಿನೆಟ್ ನಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದೆ ಎಂದು ರಾಜ್ಯ ಸರ್ಕಾರದ ನಗರಾಭಿವೃದ್ಧಿ ಸಚಿವರಾದ ಯು.ಟಿ.ಖಾದರ್ ಭರವಸೆ ನೀಡಿದರು.

ಅವರು, ಡಿಸೆಂಬರ್ 13ರಂದು ಗುರುವಾರ ಸಂಜೆ 6 ಗಂಟೆಗೆ ಬೆಳಗಾವಿಯ ಸುವರ್ಣಸೌಧದ ಎದುರು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯು ಅಡಿಯಲ್ಲಿ ಪೌರಕಾರ್ಮಿಕರು ಯುಜಿಡಿ ಕಾರ್ಮಿಕರು, ಚಾಲಕರು, ವಾಟರ್ ಮನ್‌ಗಳು ಮತ್ತಿತರೆ ಸಾವಿರಾರು ಮಂದಿ ನೌಕರರು ತಮ್ಮ ಸೇವೆಯನ್ನು ಖಾಯಂಗೊಳಿಸಬೇಕು. ಗುತ್ತಿಗೆ ಪದ್ದತಿಯನ್ನು ನಿಷೇಧಿಸಬೇಕು ಎಂಬ ಬೇಡಿಕೆಯೊಂದಿಗೆ ನಡೆಸುತ್ತಿದ್ದ ಹೋರಾಟದ ಟೆಂಟ್‌ಗೆ ಆಗಮಿಸಿ ಮನವಿ ಸ್ವೀಕರಿಸಿದ ನಂತರ ಮಾತನಾಡುತ್ತಿದ್ದರು.

ಐದಾರು ತಿಂಗಳಿಗೊಮ್ಮೆ ಸಂಬಳ ಆಗುತ್ತಿರುವ ಹಾಗೂ 700ಕ್ಕೆ ಒಬ್ಬರಂತೆ ಪೌರಕಾರ್ಮಿಕರನ್ನು ನೇಮಿಸುವಂತೆ ನೀಡಿರುವ ನಿರ್ದೇಶನದ ಆಧಾರದಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿರುವುದನ್ನು ಗಮನಕ್ಕೆ ತಂದ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಂಜು ಪರ್ವೇಜ್ ಅವರು



ಸಂಬಳದ ಸಮಸ್ಯೆಯನ್ನು ತಕ್ಷಣ ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಹಾಗೂ 500 ಜನಸಂಖ್ಯೆಗೆ ಒಬ್ಬರಂತೆ ಪೌರಕಾರ್ಮಿಕರನ್ನು ನೇಮಿಸಲು ಹಾಗೂ ಲೋಡರ್, ಅನ್‌ಲೋಡರ್‌ಗಳನ್ನು ಪ್ರತ್ಯೇಕವಾಗಿ ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು.

ಪ್ರತಿಭಟನಾಕಾರರು ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿಗಳಿಗೆ ಭವಿಷ್ಯ ನಿಧಿ (ಪಿಎಫ್), ಕಾರ್ಮಿಕರ ರಾಜ್ಯ ವಿಮೆ (ಇಎಸ್‌ಐ), ಮೇಲ್ದರ್ಜೆಗೇರಿಸಿದ ಗ್ರಾಮ ಪಂಚಾಯಿತಿಗಳು, ಪಟ್ಟಣ ಪಂಚಾಯಿತಿಗಳಾಗಿರುವ ಕಡೆಗಳಲ್ಲಿನ ನೌಕರರ ಸಮಸ್ಯೆಗಳು, ದೀರ್ಘ ಕಾಲದ ಸೇವೆ ಸಲ್ಲಿಸಿದವರು ಹೊರಗುಳಿದು ಇತರರು ಖಾಯಂ ಆಗುತ್ತಿರುವ ಸಂಬಂಧ ಪ್ರಶ್ನೆಗಳ ಸುರಿಮಳೆಯನ್ನೇ ಗೈದರು.

ಪ್ರಶ್ನೆಗಳನ್ನು ಸಾವಧಾನದಿಂದ ಆಲಿಸಿ ಸರ್ಕಾರಕ್ಕೆ ಅತ್ಯಂತ ತಳಸ್ಥರದಲ್ಲಿ ಕೆಲಸ ಮಾಡುವ ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಬಗ್ಗೆ ಕಾಳಜಿ ಇದ್ದು, ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುವ ಭರವಸೆ ನೀಡಿದರು.

ಸಮಸ್ಯೆಗಳ ಇತ್ಯರ್ಥಕ್ಕೆ ಜಂಟಿ ಸಭೆ

ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಸಮಸ್ಯೆಗಳ ಇತ್ಯರ್ಥಪಡಿಸಲು ಪಿಎಫ್, ಇಎಸ್‌ಐಗಳಲ್ಲಿ ನಡೆದಿರುವ ಹಗರಣಗಳು, ವಾರದ 7 ದಿನವೂ ರಜೆ ನೀಡದೆ ದುಡಿಸಿಕೊಳ್ಳುವ, ಆರೋಗ್ಯ ಕೆಟ್ಟಾಗ ರಜೆ ನೀಡದಿರುವ, ರಾಷ್ಟ್ರೀಯ ಹಬ್ಬ ಮತ್ತು ಹಬ್ಬಹರಿದಿನಗಳಲ್ಲಿ ರಜೆ ನೀಡದಿರುವ, ಖಾಯಂ ನೌಕರರಿಗೆ ನೀಡುವ ಬೋನಸ್ ಅನ್ನು ಗುತ್ತಿಗೆ ಕಾರ್ಮಿಕರಿಗೆ ವಿಸ್ತರಿಸುವ ಸಂಬಂಧ, ಸುಪ್ರೀಂಕೋರ್ಟ ತೀರ್ಪಿನಂತೆ ಗುತ್ತಿಗೆ ಕಾರ್ಮಿಕರು, ಕಾಯಂ ಕಾರ್ಮಿಕರು ನಿರ್ವಹಿಸುವ ಕೆಲಸವನ್ನು ನಿರ್ವಹಿಸುತ್ತಿದ್ದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಸಮಾನ ಸೌಲಭ್ಯಗಳನ್ನು ನೀಡುವ ಕುರಿತು ಚರ್ಚಿಸಲು ಎಲ್ಲಾ ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಹಾಗೂ ಅಧಿಕಾರಿಗಳ ಜಂಟಿ ಸಭೆಯನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಅಧಿವೇಶನ ಮುಗಿದ ನಂತರ ಕೊನೆಯ ವಾರದಲ್ಲಿ ಸಭೆಯನ್ನು ನಡೆಸುವ ಭರವಸೆ ನೀಡಿದರು.

ಈ ಪ್ರತಿಭಟನಾ ಧರಣಿಯಲ್ಲಿ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಹರೀಶ್ ನಾಯಕ್, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ತುಮಕೂರು ಜಿಲ್ಲಾ ಪೌರಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಹಾಸನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಬೆಳಗಾವಿ ಜಿಲ್ಲಾಧ್ಯಕ್ಷ ಬಸವರಾಜ್ ಕಾಂಬ್ಳೆ, ಪ್ರಧಾನ ಕಾರ್ಯದರ್ಶಿ ಶಾನೂರು ಗುಡ್ಲಾರ್, ಖಜಾಂಚಿ ಮೊಹಮದ್ ರಫೀಕ್, ಬಾಗಲಕೋಟೆಯ ನಿಜಗುಣ ಚಿಕ್ಕಮಗಳೂರಿನ ಬಸವರಾಜ್ ತರೀಕೆರೆ ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಶಾಮ್‌ಸನ್, ಹಾವೇರಿ ಜಿಲ್ಲಾ ಮುಖಂಡರಾದ ಪ್ರಕಾಶ್ ಶಿಗ್ಗಾವಿ ಶಿವಮೊಗ್ಗದ ಪ್ರೇಮಾನಂದ, ವಿಜಯಪುರ ಲಕ್ಷ್ಮಣ, ಗುಲ್ಬರ್ಗಾ ಮಂಜು ಪಾಟೀಲ್, ಚಿತ್ರದುರ್ಗ ಬಸಪ್ಪ ಮೊದಲಾದವರು ಉಪಸ್ಥಿತರಿದ್ದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**